ಕರ್ನಾಟಕ ನಾಟಕ ಅಕಾಡೆಮಿ

# ಸೊಲ್ಲಾಪುರ
# ಜಿಲ್ಲಾ ರಂಗಮಾಹಿತಿ

ಸಂಪಾದಕರು : ಬಸವರಾಜ ಮಸೂತಿ



# ಸೊಲ್ಲಾಪುರ
# ಜಿಲ್ಲಾ ರಂಗಮಾಹಿತಿ

ಸಂಪಾದಕರು: ಬಸವರಾಜ ಮಸೂತಿ

ಕರ್ನಾಟಕ ನಾಟಕ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – 02

**SOLLAPURA JILLA RANGAMAHITHI :**
Published by **B. Manjunatha Aradhya,** Registrar, Karnataka Nataka Academy, Kannada Bhavana, J.C. Road, Bengaluru - 560 002.
Phone: 080-22237484

| | | |
|---|---|---|
| ಹಕ್ಕುಗಳು | : | ಕರ್ನಾಟಕ ನಾಟಕ ಅಕಾಡೆಮಿ |
| ಮೊದಲ ಮುದ್ರಣ | : | 2018 |
| ಪ್ರತಿಗಳು | : | 500 |
| ಪುಟಗಳು | : | x+94 |
| ಬೆಲೆ | : | ರೂ. 60.00 |

ಪ್ರಕಾಶಕರು : ಬಿ. ಮಂಜುನಾಥ ಆರಾಧ್ಯ, ರಿಜಿಸ್ಟ್ರಾರ್ (ಪ್ರ)
**ಕರ್ನಾಟಕ ನಾಟಕ ಅಕಾಡೆಮಿ**
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು
ದೂರವಾಣಿ : ೦೮೦ ೨೨೨೩೭೪೮೪
ಇಮೇಲ್:academy.nataka@gmail.com

ಮುಖಪುಟ ವಿನ್ಯಾಸ : ಕೃಷ್ಣ ರಾಯಚೂರ್

ಮುದ್ರಕರು : ಎಂ.ಎಸ್. ಗ್ರಾಫಿಕ್ಸ್
ಬೆಂಗಳೂರು- ೫೬೦೦೭೯.
ದೂ.: ೦೮೦ ೨೩೫೮೦೨೭೧

# ಅಧ್ಯಕ್ಷರ ನುಡಿ

ಅಕಾಡೆಮಿಯು ಒಂದು ಹರಿಯುವ ನದಿ ಇದ್ದಂತೆ. ನದಿಯು ತನ್ನ ದಾರಿಗುಂಟ ವಿವಿಧ ರೀತಿಯಲ್ಲಿ ಹರಿಯುತ್ತದೆ. ನಿಧಾನವಾಗಿ, ರಭಸವಾಗಿ, ಆಳಕ್ಕೆ ಧುಮುಕುತ್ತಾ, ಅಲ್ಲಲ್ಲಿ ಬಳಕುತ್ತಾ, ಕೆಲವೊಮ್ಮೆ ದೊಡ್ಡ ತಿರುವಿನಲ್ಲಿ ಬಾಗಿ, ಬಂದ ದಿಕ್ಕಿನತ್ತಲೇ ಹರಿಯುವಂತೆ ಅನ್ನಿಸುತ್ತದೆ. ಆದರೆ ನಿಜವಾಗಿ ನೀರಿನ ಒಟ್ಟು ಹರಿವಿನ ಪ್ರಮಾಣ ಎಲ್ಲ ಕಡೆಯೂ ಬಹುತೇಕ ಒಂದೇ ಇರುತ್ತದೆ. ಆಯಾ ಪ್ರದೇಶಗಳ ಭೌತಿಕ ಪರಿಸರಕ್ಕೆ ಅನುಗುಣವಾಗಿ ನೀರ ಹರಿವು ತನ್ನನ್ನು ತಾನು ಒಗ್ಗಿಸಿಕೊಂಡಿರುತ್ತದೆ. ನಾಟಕ ಅಕಾಡೆಮಿಯು ಕಾಲ ಕಾಲಕ್ಕೆ ವಿವಿಧ ಅಧ್ಯಕ್ಷರು ಮತ್ತು ಸದಸ್ಯರನ್ನು ಹೊಂದುತ್ತಿದ್ದರೂ ಅದರ ಅಂತರ್ಯದ ಸೆಲೆ ಒಂದೇ ಆಗಿದೆ. ಇದೇ ಕಾರಣದಿಂದಲೇ ಹಿಂದಿನ ಅಕಾಡೆಮಿಗಳು ಹರಿಯಬಿಟ್ಟಿರುವ ಯೋಜನೆಗಳನ್ನು ನಾವು ಈಗ ಜತನವಾಗಿ ಮುಂದುವರೆಸಿಕೊಂಡು ಹೋಗುತ್ತಿದ್ದೇವೆ. ನಾಡಿನ ವಿವಿಧ ಜಿಲ್ಲೆಗಳ ರಂಗ ಮಾಹಿತಿಯನ್ನು ಸಂಗ್ರಹಿಸಿ ಹೊರತರಬೇಕು ಎನ್ನುವ ಬಹಳ ಮೌಲಿಕವಾದ ಕಾರ್ಯವನ್ನು ಶೇಖ್ ಮಾಸ್ತರ ಮತ್ತು ಅವರ ತಂಡದವರು ಬಹಳ ಚೆನ್ನಾಗಿ ನಿರ್ವಹಿಸಿದ್ದಾರೆ. ಇಂತಹ ಕಾರ್ಯಗಳು ಎಂದಿಗೂ ಪರಿಪೂರ್ಣವಲ್ಲ, ಅದೊಂದು ನಿರಂತರವಾಗಿ ಪರಿಷ್ಕರಣೆಗೆ ಒಳಗಾಗಬೇಕಾಗಿರುವ ಸಂಗತಿ ಎಂಬ ಸತ್ಯ ನಮಗೂ ಅರಿವಿದೆ.

ಕನ್ನಡದ ಕಂಪನ್ನು ಬೀರುತ್ತ, ಕನ್ನಡದ ಅಸ್ಮಿತೆಯನ್ನು ರಂಗಭೂಮಿಯ ಮಟ್ಟಿಗಾದರೂ ಕಳೆದುಕೊಳ್ಳದ ಗಡಿನಾಡಿನ ಪ್ರದೇಶ ಸೊಲ್ಲಾಪುರ. ಇಲ್ಲಿನ ಕನ್ನಡ ರಂಗಭೂಮಿಯ ಇತಿಹಾಸ ಮತ್ತು ವರ್ತಮಾನಗಳೆರಡೂ ಗಮನಾರ್ಹ-ವಾದುದಾಗಿವೆ.

ಈ ಕೃತಿಯನ್ನು ಸಿದ್ಧಪಡಿಸಲು ಲೇಖಕರಾದ ಶ್ರೀ ಬಸವರಾಜ ಮಸೂತಿ ಅವರು ಸಾಕಷ್ಟು ಶ್ರಮಪಟ್ಟಿದ್ದಾರೆ. ಅವರಿಗೆ ವಂದನೆಗಳು. ಹಾಗೆಯೆ ಈ ಕೃತಿಯನ್ನು ಅಂದವಾಗಿ ಮುದ್ರಿಸಿದ ಎಂ.ಎಸ್. ಗ್ರಾಫಿಕ್ಸ್ ಅವರಿಗೆ ನನ್ನ ಕೃತಜ್ಞತೆಗಳು.

ರಂಗಭೂಮಿ ಒಂದು ಸಾಮೂಹಿಕ ಸಂವಹನ ಕಾರ್ಯ. ಕೇವಲ ಒಬ್ಬಿಬ್ಬರಿಂದ ರಂಗಭೂಮಿಯನ್ನು ಕಟ್ಟಲಾಗದು. ಸಮೂಹದ ಒಟ್ಟು ಕೊಡುಗೆಯಿಂದಲೇ ರಂಗಭೂಮಿಯು ಬೆಳೆಯಲು ಸಾಧ್ಯ. ಈ ದಿಸೆಯಲ್ಲಿ ಎಲ್ಲಾ ರಂಗಕರ್ಮಿಗಳು ಕಾರ್ಯೋನ್ಮುಖರಾಗಲೆಂದು ಅಕಾಡೆಮಿಯು ಆಶಿಸುತ್ತದೆ.

ಬಸವರಾಜ ಮಸೂತಿ ಅವರ ಈ ಕೃತಿಯಲ್ಲಿ ಅವರ ಮುಗ್ಧತೆ ತೆರೆದುಕೊಳ್ಳುತ್ತದೆ. ಆದರೂ ಹಲವಾರು ವಿಷಯಗಳು ಹಾಗೂ ಚಟುವಟಿಕೆಗಳು ಓದುಗರ ಗಮನಕ್ಕೆಬರಲಿ ಎಂಬ ಆಶಯದಿಂದ ಈ ಪುಸ್ತಕವನ್ನು ನಿಮ್ಮ ಕೈಯಲ್ಲಿರಿಸುತ್ತಿದ್ದೇನೆ, ಸ್ವೀಕರಸಿ.

ನಾಟಕ ಅಕಾಡೆಮಿಯ ಪರವಾಗಿ,

ಜೆ. ಲೋಕೇಶ್

ಅಧ್ಯಕ್ಷರು

# ಕರ್ನಾಟಕ ನಾಟಕ ಅಕಾಡೆಮಿ

ಶ್ರೀ ಜೆ. ಲೋಕೇಶ್
ಅಧ್ಯಕ್ಷರು

ಸದಸ್ಯರುಗಳು

ಶ್ರೀ ಆರ್. ವೆಂಕಟರಾಜು
ಶ್ರೀ ಬಿ.ಎಸ್. ವಿದ್ಯಾರಣ್ಯ
ಶ್ರೀ ಮೈಲಾರಪ್ಪ
ಶ್ರೀ ಬೇಲೂರು ರಘುನಂದನ್
ಶ್ರೀ ಸಂದೀಪ್ ಬಿ.
ಶ್ರೀಮತಿ ಶಾಂತಾ ಕುಲಕರ್ಣಿ
ಡಾ. ಗಣೇಶ ಅಮೀನಗಡ
ಶ್ರೀಮತಿ ಪ್ರೇಮ ತಾಳೀಕೋಟೆ
ಶ್ರೀ ಶಶಿಕಾಂತ್ ಎಸ್. ಯಡಹಳ್ಳಿ
ಶ್ರೀ ವಿಠ್ಠಲ್ ಬಿ. (ಅಪ್ಪಯ್ಯ)
ಶ್ರೀ ರಾಮಕೃಷ್ಣ ಬೆಳ್ತೂರು
ಶ್ರೀ ಹೊನ್ನನಾಯಕ
ಶ್ರೀ ಬಾಸುಮ ಕೊಡಗು
ಶ್ರೀಮತಿ ಶಿವಕುಮಾರಿ
ಶ್ರೀ ಕೇದಾರಸ್ವಾಮಿ ಶೇಖರಯ್ಯ ಶಿರಹಟ್ಟಿಮಠ
ಶ್ರೀ ರಾಜಣ್ಣ ಜೇವರಗಿ
ಶ್ರೀಮತಿ ಪ್ರತಿಭಾ ಎಂ.ವಿ.

ರಿಜಿಸ್ಟ್ರಾರ್: ಶ್ರೀ ಬಿ. ಮಂಜುನಾಥ ಆರಾಧ್ಯ.

ಯೋಜನಾ ಸಹಾಯಕರು: ಶ್ರೀ ಕೆ. ರೇವಣ್ಣ

ಕಚೇರಿ ಸಿಬ್ಬಂದಿ: ಶ್ರೀಮತಿ ಸೌಭಾಗ್ಯಲಕ್ಷ್ಮೀ, ಶ್ರೀ ಎಂ.ಭೋಜಣ್ಣ,
ಶ್ರೀಮತಿ ಸುಶೀಲಮ್ಮ, ಶ್ರೀ ಗೌತಮ್, ಶ್ರೀ ಜಿ.ಟಿ. ಶ್ರೀನಿವಾಸ ಮೂರ್ತಿ

# ಪ್ರವೇಶದ ಮುನ್ನ

ಆಳಂದ ಎಚ್.ಕೆ.ಇ. ಸಂಸ್ಥೆಯ ಶ್ರೀ ವೀರೇಂದ್ರ ಪಾಟೀಲ ಮಹಾ ವಿದ್ಯಾಲಯದಲ್ಲಿ ಬಿ.ಎ. ಅಧ್ಯಯನ ಮಾಡುವಾಗ ನೂರಾರು ಸಂಶೋಧನಾತ್ಮಕ ಲೇಖನಗಳನ್ನು ಪ್ರಕಟಿಸಿದೆ. ಮೈಂದರ್ಗಿಯ ವೃತ್ತಿರಂಗಭೂಮಿಯ ಹಲವಾರು ಲೇಖನಗಳು ಸಂಯುಕ್ತ ಕರ್ನಾಟಕ, ಕರ್ನಾಟಕ ಸಂಧ್ಯಾಕಾಲದಲ್ಲಿ ಪ್ರಕಟವಾಗಿವೆ. ಕರ್ನಾಟಕ ನಾಟಕ ಅಕಾಡೆಮಿಯ ಸದಸ್ಯರಾದ ಪ್ರಸನ್ನಕುಮಾರ ಒಂದು ವರ್ಷ ಮೈಂದರ್ಗಿಗೆ ಆಗಮಿಸಿದರು. ಮೈಂದರ್ಗಿಯ ಶ್ರೀ ೧೦೦೮ ಜಗದ್ಗುರು ರೇಣುಕಾಚಾರ್ಯ ನಾಟ್ಯ ಸಂಘದ ಕ್ಯಾಂಪ್ ವೀಕ್ಷಿಸಲು ಆಗಮಿಸಿದ ಅವರು ನನ್ನ ಮನೆಗೆ ಆಗಮಿಸಿದರು. ರಂಗಭೂಮಿಯ ಬಗ್ಗೆ ಪ್ರಕಟವಾದ ನನ್ನ ಲೇಖನಗಳನ್ನು ನೋಡಿಕೊಂಡು ಬೆಂಗಳೂರಿಗೆ ಹೋದರು. ಬೆಂಗಳೂರಿಗೆ ಹೋದ ಬಳಿಕ ಒಂದು ವಾರದ ನಂತರ ಕರ್ನಾಟಕ ನಾಟಕ ಅಕಾಡೆಮಿಯಿಂದ ೨೦೧೦-೧೧ನೇ ವರ್ಷದಲ್ಲಿ ನನಗೆ ಒಂದು ಪತ್ರ ಆಗಮಿಸಿತು. ಸೋಲಾಪುರ ಜಿಲ್ಲಾ ರಂಗ ಮಾಹಿತಿ ಕೈಪಿಡಿ ರಚನೆ ಮಾಡಲು ಕರ್ನಾಟಕ ನಾಟಕ ಆಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಟಿ.ಜಿ. ನರಸಿಂಹಮೂರ್ತಿ ಅವರಿಂದ ಬಂದಿದ್ದ ಆದೇಶ ಪತ್ರ ಅದಾಗಿತ್ತು.

ಸಂಯುಕ್ತ ಕರ್ನಾಟಕ, ದೈನಿಕ ಪುಡಾರಿ, ದೈನಿಕ ಸಂಚಾರ ಮುಂತಾಗಿ ಕನ್ನಡ ಹಾಗೂ ಮರಾಠಿ ಪತ್ರಿಕೆಗಳಲ್ಲಿ ಪ್ರಕಟಣೆ ನೀಡಿದೆ. ಹಳ್ಳಿ-ಹಳ್ಳಿಗೆ ಸಂದರ್ಶನ ನೀಡಿ ನಾಟಕ ಕಲಾವಿದರಿಂದ ಮಾಹಿತಿ ಸಂಗ್ರಹಿಸಿದೆ. ಬಹಳ ಆಸಕ್ತಿಯಿಂದ 'ಸೊಲ್ಲಾಪುರ ಜಿಲ್ಲಾ ರಂಗ ಮಾಹಿತಿ' ಹಸ್ತಪ್ರತಿ ತಯಾರಿಸಿ ಕರ್ನಾಟಕ ನಾಟಕ ಅಕಾಡೆಮಿಗೆ ೨೦೧೧ರಲ್ಲಿ ಒಪ್ಪಿಸಿದೆ.

ಅಧ್ಯಕ್ಷರಾದ ಡಾ. ಬಿ.ವಿ. ರಾಜಾರಾಂ ಅವರ ನೇತೃತ್ವದಲ್ಲಿ ನಾಡಿನ ಎಲ್ಲ ಜಿಲ್ಲೆಗಳ ರಂಗ ಚಟುವಟಿಕೆಗಳನ್ನು ಹೊತ್ತಿಗೆಯ ರೂಪದಲ್ಲಿ ದಾಖಲಿಸಬೇಕೆಂಬ ಚರಿತ್ರಾರ್ಹ ನಿರ್ಣಯವನ್ನು ಕರ್ನಾಟಕ ನಾಟಕ ಅಕಾಡೆಮಿಯ ಕೈಗೊಂಡಿತು. ಆದರೆ ಡಾ. ಬಿ.ವಿ. ರಾಜಾರಾಂ ಅವರ ಕಾಲಾವಧಿಯಲ್ಲಿ 'ಸೊಲ್ಲಾಪುರ ಜಿಲ್ಲಾ ರಂಗ ಮಾಹಿತಿ' ಪ್ರಕಟಿಸುವುದನ್ನು ಬಿಟ್ಟು, ನನ್ನ ಹಸ್ತಪ್ರತಿಗಳನ್ನು ಅಕಾಡೆಮಿ

ಹಿಂತಿರುಗಿಸಿತ್ತು.

೨೦೧೧ ರಿಂದ ೨೦೧೬ವರೆಗೆ ಹಲವು ಕಾಲ ಕಲೆ, ಸಾಹಿತ್ಯ ಹಾಗೂ ಸಂಶೋಧನೆಯಲ್ಲಿ ಕೆಲಸ ಮಾಡಿದ್ದೆ. ಒಂದು ದಿವಸ ಮನಸ್ಸಿಗೆ ಬಹಳ ನೋವು ಉಂಟಾದಾಗ ನಾನು ಸಂಗ್ರಹಿಸಿದ್ದ ಹಲವಾರು ಸಂಶೋಧನಾತ್ಮಕ ದಾಖಲೆಗಳನ್ನು ಒಲೆಗೆ ಹಾಕಲು ಹೆಂಡತಿ ರಾಜಶ್ರೀಗೆ ಹೇಳಿದೆ. ಆದರೆ ಹಾಗೆಮಾಡದೆ ನನ್ನ ಹೆಂಡತಿ ಆ ಎಲ್ಲ ದಾಖಲೆಗಳನ್ನು ಒಂದು ಗೋಣೀಚೀಲದಲ್ಲಿ ಹಾಕಿ ಅಟ್ಟದ ಮೇಲೆ ಕಟ್ಟಿಟ್ಟಳು. 'ಸೊಲ್ಲಾಪುರ ಜಿಲ್ಲಾರಂಗ ಕೈಪಿಡಿ'ಯ ಹಸ್ತಪ್ರತಿಯೂ ಸಹ ಅದರಲ್ಲಿ ಸೇರಿತ್ತು.

ಆರು ವರ್ಷದ ಬಳಿಕ ಯಾವ ಭವಿಷ್ಯವನ್ನೂ ಅರಿಯದ, ನಾನು ಕನ್ನಡ ಸಾಹಿತ್ಯ ಪರಿಷತ್ತು, ಮಹಾರಾಷ್ಟ್ರದ ಘಟಕದ ಅಧ್ಯಕ್ಷನಾಗಿ ಅವಿರೋಧವಾಗಿ ಆಯ್ಕೆಯಾದೆ. ಮಲ್ಲಿಕಾರ್ಜುನ ಮಡ್ಡೆ ಅವರ ಕ್ಯಾಂಪ್ ಚಡಚಣ ಗ್ರಾಮದಲ್ಲಿತ್ತು. ಆ ರಂಗಭೂಮಿ ವೇದಿಕೆಯಲ್ಲಿ ನನ್ನನ್ನು ಸನ್ಮಾನಿಸಲು ಕರೆಯಿಸಿದರು. ಸನ್ಮಾನ ಸ್ವೀಕರಿಸಲು ಚಡಚಣ ಗ್ರಾಮಕ್ಕೆ ಹೋದೆ. ಚಡಚಣದ ಗಡಿನಾಡು ಪತ್ರಿಕೆಯ ಸಂಪಾದಕ ಬಸವರಾಜ ಯಂಕಚ್ಚಿಯವರು ನಮ್ಮ ಊಟದ ವ್ಯವಸ್ಥೆಯನ್ನು ತಮ್ಮ ಅವರ ಮನೆಯಲ್ಲೇ ಮಾಡಿದ್ದರು. ಊಟಕ್ಕೆ ಬಂದಿದ್ದ ನಾಟಕ ಅಕಾಡೆಮಿ ಸದಸ್ಯ ಎಸ್.ಕೆ. ಕೊನೆಸಾಗರ ಅವರು ಊಟ ಮಾಡುತ್ತಾ ಯಂಕಚ್ಚಿ ಗೆಳೆಯರೊಂದಿಗೆ ಸೇರಿ ನನ್ನೊಂದಿಗೆ ಮಾತಿಗೆ ಇಳಿದರು. ಆಗ 'ಸೊಲ್ಲಾಪುರ ರಂಗ ಕೈಪಿಡಿ ಪ್ರಕಟಿಸಲು' ವಿನಂತಿಸಿದೆ.

ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರಾದ ಎಲ್.ಬಿ. ಶೇಖಮಾಸ್ತರ ಅವರನ್ನು ಗುಲಬರ್ಗಾದಲ್ಲಿ ಭೆಟ್ಟಿಯಾಗಿ 'ಸೊಲ್ಲಾಪುರ ಕನ್ನಡ ರಂಗಭೂಮಿ ಮಾಲಿಕೆ' ಪ್ರಾರಂಭಿಸಿದೆ. ನಾನು ಅಧ್ಯಕ್ಷನಾದ ಬಳಿಕ ಸೋಲಾಪುರ ಜಿಲ್ಲೆಯ ಹಳ್ಳಿ-ಹಳ್ಳಿಯ ನಾಟಕ ರಂಗಭೂಮಿಯಲ್ಲಿ ರಂಗಭೂಮಿಯ ಮಾಲಿಕೆ ಯಶಸ್ವಿಯಾಗಿ ಮಾಡಿ ಅಲ್ಲಿಯ ೫೫ ಜನ ಕಲಾವಿದರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಸೋಲಾಪುರ ಜಿಲ್ಲೆಯ ೧೦೧ ರಂಗ ಕಲಾವಿದರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಕರ್ನಾಟಕ ನಾಟಕ ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಬಿ. ಮಂಜುನಾಥ ಆರಾಧ್ಯ ಅವರನ್ನು ಭೆಟ್ಟಿಯಾದೆ. ಹೊಸದಾಗಿ ಬಂದಿದ್ದ ಅವರು ನನ್ನ ಮನವಿ ಸ್ವೀಕರಿಸಿದರು. ರಂಗಭೂಮಿಯ ಹಿರಿಯ ಸಾಹಿತಿ ಶ್ರೀ ಗವೀಶ್ ಹಿರೇಮಠ ಅವರು 'ಸೊಲ್ಲಾಪುರ ರಂಗ ಕೈಪಿಡಿ' ತಯಾರಿಸಿ ಎಂದು ಮಾರ್ಗದರ್ಶನ ಮಾಡಿದರು.

ಕರ್ನಾಟಕ ನಾಟಕ ಅಕಾಡೆಮಿಯಿಂದ ದಿನಾಂಕ: ೨೩.೦೬.೨೦೧೬ ರಂದು 'ಸೊಲ್ಲಾಪುರ ರಂಗ ಕೈಪಿಡಿ' ತಯಾರಿಸಲು ಪತ್ರ ಆಗಮಿಸಿತು. ಈ ಮುಂಚಿತವಾಗಿ

ಸೊಲ್ಲಾಪುರ ರಂಗ ಕೈಪಿಡಿಯ ಹಸ್ತಪ್ರತಿ ತಯಾರಿಸಲಾಗಿತ್ತು. ಬೆಂಕಿಗೆ ಸಿಲುಕಿ ಭಸ್ಮವಾಗಬೇಕಾಗಿದ್ದ ದಾಖಲೆ ನನ್ನ ಹೆಂಡತಿ ರಾಜಶ್ರೀಯ ಮುಂದಾಲೋಚ-ನೆಯಿಂದಾಗಿ ಹಾಗಾಗದೆ ಗೋಣಿಚೀಲದೊಳಗೆ ಧೂಳು ಹಿಡಿದು ಕುಳಿತಿತ್ತು.

ಪತ್ರ ಬಂದ ಬಳಿಕ ಗೋಣಿಚೀಲದೊಳಗಿನ ಹಸ್ತಪ್ರತಿ ತೆಗೆದು ಮತ್ತೆ ಪರಿಷ್ಕರಿಸಲು ಪ್ರಾರಂಭಿಸಿದೆ. ಸೊಲ್ಲಾಪುರ ಜಿಲ್ಲೆಯ ನಾಟಕ ಕಲಾವಿದರು ತಂಡ-ತಂಡವಾಗಿ ಮನೆಗೆ ಆಗಮಿಸಿ ಮಾಹಿತಿ ನೀಡಿದರು. ಹೆಂಡತಿ ರಾಜಶ್ರೀ ಸಹಾಯದಿಂದಾಗಿ ಈ ಕೈಪಿಡಿ ರಚನೆ ಮಾಡಲು ಸಾಧ್ಯವಾಗಿದೆ. ಅವಳಿಗೆ ನನ್ನ ಕೃತಜ್ಞತೆಗಳು.

ಸೊಲ್ಲಾಪುರ ಜಿಲ್ಲೆ ರಂಗ ಕೈಪಿಡಿಯ ಈ ಮಾಹಿತಿ ಕೋಶ ಅಂತಿಮವಲ್ಲ. ಈ ವಿಷಯ ಕುರಿತು ಅಧ್ಯಯನ, ಸಂಶೋಧನೆ ಹಾಗೂ ದಾಖಲೆ ಸಂಗ್ರಹಿಸಬೇಕು. ಈ ಹೊತ್ತಿಗೆ ಬರೆಯುವಲ್ಲಿ ಅನೇಕ ರಂಗಗೆಳೆಯರು ನೆರವಾಗಿದ್ದಾರೆ. ಈ ಎಲ್ಲರಿಗೂ ನಾನು ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರು ಹಾಗೂ ಎಲ್ಲ ಸದಸ್ಯರಿಗೂ ಸಹ ನನ್ನ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಕರ್ನಾಟಕ ನಾಟಕ ಅಕಾಡೆಮಿಯ ಈಗಿನ ಅಧ್ಯಕ್ಷರಾದ ಶ್ರೀ ಜೆ.ಲೋಕೇಶ್ ಅವರಿಗೆ, ರಿಜಿಸ್ಟ್ರಾರ್ ಶ್ರೀ ಮಂಜುನಾಥ್ ಆರಾಧ್ಯ ಅವರಿಗೆ ಹಾಗೂ ಮುದ್ರಣ ಮಾಡಿಕೊಟ್ಟ ಎಂ.ಎಸ್. ಗ್ರಾಫಿಕ್ಸ್ ಅವರಿಗೆ ನನ್ನ ಕೃತಜ್ಞತೆಗಳು.

ಬಸವರಾಜ ಮಸೂತಿ<br>ಮೈಂದರ್ಗಿ

# ಪರಿವಿಡಿ


| | |
|---|---|
| ವೃತ್ತಿ ಹಾಗೂ ಹವ್ಯಾಸಿ ನಾಟ್ಯ ಸಂಘಗಳು | 1 |
| ಸೊಲ್ಲಾಪುರ ಜಿಲ್ಲೆಯ ಗ್ರಾಮೀಣ ರಂಗಕಲೆ | 13 |
| ವೃತ್ತಿ, ನೇಪಥ್ಯ ಮತ್ತು ಗ್ರಾಮೀಣ ಕಲಾವಿದರು | 22 |
| ಪತ್ರಿಕೆಗಳಲ್ಲಿ ಪ್ರಕಟವಾದ ರಂಗಭೂಮಿಯ ಲೇಖನಗಳು | 64 |
| ನಾಟಕ ಅಕಾಡೆಮಿ ಗೌರವ ಪ್ರಶಸ್ತಿ | 66 |
| ನಾಟಕಗಳ ಲೇಖಕರು/ನಾಟಕಕಾರರು | 66 |
| ಸೊಲ್ಲಾಪುರ ಜಿಲ್ಲೆಯ ರಂಗಮಂದಿರಗಳು | 68 |
| ರಂಗಸಜ್ಜಿಕೆ, ವಸ್ತ್ರಾಲಂಕಾರ ಮತ್ತು ಪ್ರಸಾಧನ ತಜ್ಞರು | 68 |
| ಛಾಯಾಚಿತ್ರಗಳು | 71 |

# ವೃತ್ತಿ ಹಾಗೂ ಹವ್ಯಾಸಿ ನಾಟ್ಯ ಸಂಘಗಳು

ಸ್ವಾತಂತ್ರ್ಯದೊರೆಯುವ ಮೊದಲು ಸೋಲಾಪುರ ಜಿಲ್ಲೆಯನ್ನು ಕನ್ನಡದ ರಾಜ ಮಹಾರಾಜರುಗಳಾದ ಬಾದಾಮಿ ಚಾಲುಕ್ಯರು, ಮಾಳಖೇಡದ ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ವಿಜಯನಗರ ಸಾಮ್ರಾಜ್ಯ ಹಾಗೂ ದೇವಗಿರಿಯ ಯಾದವರು ಆಳ್ವಿಕೆ ಮಾಡಿದ ಉಲ್ಲೇಖವಿದೆ. ಕನ್ನಡದ ರಾಜಮಹಾರಾಜರು ಕನ್ನಡದ ಕಲೆ ಪೋಷಿಸುತ್ತಾ ಬಂದಿದ್ದಾರೆ. ಆ ಕಾಲದಲ್ಲಿಯೇ ಕನ್ನಡದ ನಾಟಕಗಳು ಪ್ರಚಲಿತ-ದಲ್ಲಿದ್ದವು ಎಂದು ಕ್ಷೇತ್ರಕಾರ್ಯ ಮಾಡುವಾಗ ಹಿರಿಯ ಕಲಾವಿದರಿಂದ ತಿಳಿಯಿತು. ನಂತರದ ದಿನಗಳಲ್ಲಿ ಅಕ್ಕಲಕೋಟ ಭೋಸಲೆ ಸಂಸ್ಥಾನಿಕರು, ಮೈಂದರ್ಗಿಯ ಕಿರಿಯ ಕುರುಂದವಾಡ ಸಂಸ್ಥಾನಿಕರು ನಾಟಕ ಕಂಪನಿಗಳಿಗೆ ಪ್ರೋತ್ಸಾಹ ನೀಡಿದರು. ವಿಭಿನ್ನವಾದ ಇಪ್ಪತ್ತು ಪ್ರಾಂತಗಳಲ್ಲಿ ಚದುರಿ ಹೋಗಿರುವ ಕನ್ನಡಿಗರಿಗೆ ಒಂದು ಮಾಡಲು ಕರ್ನಾಟಕ ಏಕೀಕರಣ ಚಳುವಳಿ ಪ್ರಾರಂಭವಾಯಿತು. ಈ ಚಳುವಳಿಯಿಂದ ಕನ್ನಡ ನಾಡು ಉದಯವಾಗಿ ಕರ್ನಾಟಕ ರಾಜ್ಯ ಸ್ಥಾಪನೆಯಾಯಿತು. ಅಪ್ಪಟ ಕನ್ನಡದ ಪ್ರದೇಶಗಳಾದ ಸೊಲ್ಲಾಪುರ, ಅಕ್ಕಲಕೋಟ, ಜತ್ತ ತಾಲೂಕುಗಳು ಕೆಲವು ಕಾರಣಗಳಿಂದ ಮಹಾರಾಷ್ಟ್ರ ರಾಜ್ಯದಲ್ಲಿ ಉಳಿದಿವೆ. ಕರ್ನಾಟಕ ಮಹಾರಾಷ್ಟ್ರಗಳ ಗಡಿವಿವಾದ ಇಂದಿಗೂ ಸರ್ವೋಚ್ಚ ನ್ಯಾಯಾಲಯದಲ್ಲಿ ರಾರಾಜಿಸುತ್ತಿದೆ.

ಕಳೆದ ಅರವತ್ತು ವರ್ಷಗಳಿಂದ ಗಡಿ ವಿವಾದದಲ್ಲಿ ನರಳುತ್ತಿರುವ ಈ ಪ್ರದೇಶದಲ್ಲಿ ಕನ್ನಡ ನಾಟಕಗಳ ಪ್ರಭಾವ ಸಾಕಷ್ಟಿದೆ. ವೃತ್ತಿರಂಗಭೂಮಿ, ಹವ್ಯಾಸಿ ರಂಗಭೂಮಿ ಹಾಗೂ ಗ್ರಾಮೀಣ ರಂಗಭೂಮಿಗೆ ಸೋಲಾಪುರ ಜಿಲ್ಲೆಯ ಕನ್ನಡಿಗರ ಕೊಡುಗೆ ಅಪಾರವಾಗಿದೆ. ವೃತ್ತಿರಂಗಭೂಮಿಯ ತವರೂರು ಎಂದೇ ಮೈಂದರ್ಗಿ ಪ್ರಸಿದ್ಧವಾಗಿದೆ. ಮೈಂದರ್ಗಿಯ ಹಲವಾರು ನಾಟ್ಯ ಸಂಸ್ಥೆಗಳು ವೃತ್ತಿರಂಗಭೂಮಿಗೆ ಅಪಾರವಾದ ಸೇವೆ ಸಲ್ಲಿಸುತ್ತಾ, ನೂರಾರು ಸಮಸ್ಯೆಗಳನ್ನು ಅನುಭವಿಸಿಯೂ, ಕಂಪನಿಗಳನ್ನು ಜೀವಂತವಾಗಿ ಉಳಿಸಿಕೊಂಡಿದ್ದಾರೆ. ವೃತ್ತಿರಂಗ ಭೂಮಿಯ ಸಲುವಾಗಿ ಮೈಂದರ್ಗಿಯ ನೂರಾರು ಕಲಾವಿದರು ಮನೆ, ಹೊಲ, ಆಸ್ತಿ ಕಳೆದುಕೊಂಡು, ವೃತ್ತಿರಂಗಭೂಮಿಯಲ್ಲಿಯೇ ಪ್ರಾಣವನ್ನೂ

ಕಳೆದುಕೊಂಡಿದ್ದಾರೆ. ಮೈಂದರ್ಗಿಯ ಪ್ರತಿಯೊಂದು ಕುಟುಂಬದಲ್ಲಿಯೂ ಕಲಾವಿದರಿದ್ದಾರೆ. ಕಲೆ ಈ ಮಣ್ಣಿನಲ್ಲಿ ರಕ್ತಗತವಾಗಿ ಬೆಳೆದು ಬಂದಿದೆ ಎಂದರೆ ಅತಿಶಯೋಕ್ತಿಯಲ್ಲ. ಆಕ್ಕಲಕೋಟದ ವೃತ್ತಿರಂಗಭೂಮಿಗೆ ದುಧನಿ ಕಲಾವಿದರ ಕೊಡುಗೆ ಅಪಾರವಾಗಿದೆ. ನಾಟಕಗಳಿಗೆ ಚಲನಚಿತ್ರಗಳ ಸ್ವರೂಪ ನೀಡಿದವರು ದುಧನಿ ಕಲಾವಿದರು. ವೃತ್ತಿ, ಹವ್ಯಾಸಿ, ಹಾಗೂ ಗ್ರಾಮೀಣ ರಂಗಕಲೆಗೆ ಸೋಲಾಪುರ ಕನ್ನಡಿಗರ ಕೊಡುಗೆ, ಅನನ್ಯವಾಗಿದೆ.

## ೧. ಶ್ರೀ ೧೦೦೮ ಜಗದ್ಗುರು ರೇಣುಕಾಚಾರ್ಯ ನಾಟ್ಯ ಸಂಘ, ಮೈಂದರ್ಗಿ

ಶ್ರೀ ೧೦೦೮ ಜಗದ್ಗುರು ರೇಣುಕಾಚಾರ್ಯ ನಾಟ್ಯ ಸಂಘ ಮೈಂದರ್ಗಿಯಲ್ಲಿ. ಉದಯವಾಗಿ, ಕರ್ನಾಟಕ, ಮಹಾರಾಷ್ಟ್ರ ಹಾಗೂ ಆಂಧ್ರ ಪ್ರದೇಶ ರಾಜ್ಯಗಳಲ್ಲಿ ಜಯಭೇರಿ ಪಡೆಯಿತು. ಸಾವಿರಾರು ಕಲಾವಿದರು ಈ ಕಂಪನಿಯಿಂದ ಬೆಳಕಿಗೆ ಬಂದು ನಾಡಿನ ಬೇರೆ ಬೇರೆ ವೃತ್ತಿರಂಗಭೂಮಿಗಳಲ್ಲಿ ಕಲಾವಿದರಾಗಿ ಹೆಸರು ಮಾಡಿದರು. ಮತ್ತೆ ಹಲವಾರು ಕಲಾವಿದರ ಆಶ್ರಯತಾಣವಾಯಿತು. ಕರ್ನಾಟಕ ಏಕೀಕರಣದ ಹೋರಾಟಗಾರರು ಹಾಗೂ ಮೈಂದರ್ಗಿ ಸಂಸ್ಥಾನ ಹಿರೇಮಠದ ಪೀಠಾಧಿಪತಿ ಶ್ರೀ ಷ.ಬ್ರ. ವೀರಸಂಗಶಿವಾಚಾರ್ಯರ ಬೆಂಬಲದಿಂದ ೧೯೫೮ರಲ್ಲಿ ಶ್ರೀ ೧೦೦೮ ಜಗದ್ಗುರು ರೇಣುಕಾಚಾರ್ಯ ನಾಟ್ಯ ಸಂಘ ಸ್ಥಾಪನೆಯಾಯಿತು. ಮೈಂದರ್ಗಿಯ ಮಾಜಿ ನಗರಾಧ್ಯಕ್ಷರಾದ ಮಹಾದೇವ ಹಿರೇಸ್ಕರ, ನಾಗಣ್ಣಾ ಗೊಬ್ಬರ ಇವರು ಇಪ್ಪತ್ತು ವರ್ಷ ಈ ಕಂಪನಿ ನಡೆಸಿದರು.

ರೇಣುಕಾಚಾರ್ಯ ಕಂಪನಿ ಹಲವಾರು ನಗರ, ಪಟ್ಟಣ, ಗ್ರಾಮಗಳಲ್ಲಿ ಕ್ಯಾಂಪ್ ಹಾಕುತ್ತಾ ೧೩ ವರ್ಷ ತವರೂರಿಗೆ ಆಗಮಿಸಲಿಲ್ಲ. ಈ ಘಟನೆ ಒಂದು ಇತಿಹಾಸವಾಗಿ ಉಳಿಯಿತು. ಹುಮನಾಬಾದ, ರಾಜೆಸೂರ, ಭಾಲ್ಕಿ, ಔರಾದ, ಆಳಂದ, ನಾಲವಾರ, ಅಫಜಲಪುರ, ಶಹಬಾದ, ಬಿಜಾಪುರ, ಸಿಂಧಗಿ, ಆಲಮೇಲ್, ಅಕ್ಕಲಕೋಟ, ದುಧನಿ, ಸೊಲ್ಲಾಪುರ ಹೀಗೆ ಹಲವು ನಗರ ಪಟ್ಟಣ ಗ್ರಾಮಗಳಲ್ಲಿ ಕಂಪೆನಿ ಕ್ಯಾಂಪ್ ಹಾಕಿ ಯಶಸ್ವಿಯಾಗಿದೆ. ಅಫಜಲಪುರದ ಕ್ಯಾಂಪಿನಲ್ಲಿ ಚುಂಚಪೀಠದ ಐದು ಜನ ಜಗದ್ಗುರುಗಳು ನಾಟಕ ನೋಡಿ ಆಶೀರ್ವಾದ ನೀಡಿದರು. ಒಂದು ಊರಿನಿಂದ ಇನ್ನೊಂದು ಊರಿಗೆ ಕ್ಯಾಂಪ್ ಹಾಕುತ್ತಾ ಸಾಗುತ್ತಿರುವ ಕಂಪನಿ ತನ್ನದೇಆದ ವೈಭವದಿಂದ ಮೆರೆಯುತ್ತಿತ್ತು. ಈ ಕಾರಣದಿಂದಲೇ ಕರ್ನಾಟಕದಾದ್ಯಂತ ಮೈಂದರ್ಗಿ ಕಂಪನಿಗಳು ಹೆಸರು ಮಾಡಿದವು. ಕರ್ನಾಟಕದ ವೃತ್ತಿರಂಗಭೂಮಿಗೆ ಸರಿಸಮಾನವಾಗಿ ನಮ್ಮ ಕಂಪನಿಗಳು ಬೆಳೆದವು. ಆದರೆ ಕರ್ನಾಟಕದ ವೃತ್ತಿರಂಗಭೂಮಿಗಳ ಅಧ್ಯಯನ, ಸಂಶೋಧನೆಗಳು ನಡೆದಂತೆ, ನಮ್ಮ ಕಂಪನಿಗಳ ಅಧ್ಯಯನ, ಸಂಶೋಧನೆಗಳು ನಡೆಯಲಿಲ್ಲ.

ಹಸಿರು ಬೆಳೆ, ರೈತನ ಮಕ್ಕಳು, ಜಗಜ್ಯೋತಿ ಬಸವೇಶ್ವರ, ರಾಜಾ ಸತ್ಯಹರಿಶ್ಚಂದ್ರ, ಗೌಡರ ಗದ್ದಲ, ಕೊಂಡು ತಂದ ಗಂಡ, ರತ್ನ ಮಾಂಗಲ್ಯ, ಸಿಂಧೂರ ಲಕ್ಷ್ಮಣ, ದೇವರಿಗೆ ನೆನಪಿಲ್ಲ, ವರನೋಡಿ ಹೆಣ್ಣು ಕೊಡು, ಪುಂಡರ ಗಂಡ, ಬಸ್ ಕಂಡಕ್ಟರ್ ಹೀಗೆ ಹಲವು ಸಾಮಾಜಿಕ, ಐತಿಹಾಸಿಕ ಹಾಗೂ ಪೌರಾಣಿಕ ನಾಟಕಗಳನ್ನು ಇವರು ಅಭಿನಯಿಸುತ್ತಿದ್ದರು. ರಾಜಾ ಸತ್ಯ ಹರಿಶ್ಚಂದ್ರ ನಾಟಕ ಪ್ರಯೋಗ ಒಂದರಲ್ಲೇ ೧೦೦ಕ್ಕಿಂತಲೂ ಹೆಚ್ಚಿನ ಸಂಖ್ಯೆಯ ಕಲಾವಿದರು ಅಭಿನಯಿಸಿದುದು ವಿಶೇಷವಾಗಿತ್ತು. ನಾಡಿನ ಹಿರಿಯ ವೃತ್ತಿರಂಗಭೂಮಿ ಕಂಪನಿಗಳಾದ ಗುಬ್ಬಿವೀರಣ್ಣ, ಬಸವರಾಜ ಗುಡಗೇರಿ ಅವರಿಗೆ ಸರಿಸಮಾನವಾಗಿ ಮೈಂದರ್ಗಿಯ ವೃತ್ತಿರಂಗಭೂಮಿ ಕಂಪನಿಗಳು ಹೆಸರು ಗಳಿಸಿವೆ.

ಸಾಮಾಜಿಕ, ಐತಿಹಾಸಿಕ ಹಾಗೂ ಪೌರಾಣಿಕ ನಾಟಕ ಅಭಿನಯಿಸಲು ಬೇಕಾದ ಎಲ್ಲ ಪ್ರಕಾರದ ಪಂತರಗಳಿದ್ದವು. ಬೆಳ್ಳಿಯ ತೆರೆಯ ಕಡೆಗೆ ಜನರು ಧಾವಿಸತೊಡಗಿದ್ದರಿಂದ ರಂಗಭೂಮಿಯ ಈ ಸಂಸ್ಥೆಗಳು ಸೊರಗಲು ಪ್ರಮುಖ ಕಾರಣವಾಯಿತು. ಇನ್ನೊಂದು ಕಡೆ ಕಲಾವಿದರು ಕೆಲವು ಚಟಗಳಿಗೆ ಬಲಿಯಾಗಿ, ರಂಗಕಲೆಗೆ ಆರೋಪ ಬರಲು ಕಾರಣವಾಯಿತು. ರೇಣುಕಾಚಾರ್ಯ ನಾಟ್ಯ ಸಂಘ ಸಾಲದ ಸುಳಿಗೆ ಸಿಲುಕಿ ತನ್ನ ರಂಗ ಪರಿಕರಗಳು, ಪತರಾ, ಕಟ್ಟಿಗೆಯ ಕಂಬ, ಹಾರ್ಮೋನಿಯಂ ಇವೆಲ್ಲವುಗಳನ್ನು ಬೇರೆ, ಬೇರೆ ಕಂಪನಿಗಳಿಗೆ ಮಾರಾಟ ಮಾಡಿ, ಸಾಲಮಾಡಿಕೊಂಡು ಕಂಪನಿ ಮುಚ್ಚಬೇಕಾಯಿತು. ೧೯೮೭ರಲ್ಲಿ ಕಂಪನಿ ತವರೂರಿಗೆ ಆಗಮಿಸಿತು.

ಕಲಾವಿದರ ಕಲಹ, ಸಾಲ ಹಾಗೂ ಇತರೆ ಹಲವಾರು ಕಾರಣಗಳಿಂದ ರೇಣುಕಾಚಾರ್ಯ ನಾಟ್ಯ ಸಂಘ ಪುನಃ ಪ್ರಾರಂಭಿಸುವುದು ಅಸಾಧ್ಯವಾಯಿತು. ಆದರೂ ಕಂಪನಿಯನ್ನು ಪ್ರಾರಂಭಿಸಿ, ಅದು ಮೊದಲಿನಂತೆ ಚೇತರಿಸಿಕೊಳ್ಳಲು ಮಲ್ಲಿಕಾರ್ಜುನ ಮಡ್ಡೆ ಅವರು ಪ್ರಯತ್ನಪಟ್ಟರು. ೧೯೯೫ರಲ್ಲಿ ಕಂಪನಿಯ ಮಾಲೀಕರಾಗಿ ಅವರು ಕಾರ್ಯನಿರ್ವಹಿಸಿದರು. ೧೯೯೫ ರಿಂದ ಇಲ್ಲಿಯವರೆಗೆ ಕಂಪನಿ ಹಲವು ಏಳು ಬೀಳುಗಳನ್ನು ಅನುಭವಿಸುತ್ತಿದ್ದರೂ ಜೀವಂತವಾಗಿ ಉಳಿದಿದೆ. ಕರ್ನಾಟಕ ನಾಟಕ ಅಕಾಡೆಮಿಯ 'ವೃತ್ತಿರಂಗಭೂಮಿಗಳ ಧನಸಹಾಯ ಯೋಜನೆಯಲ್ಲಿ' ಈ ಕಂಪನಿಗೆ ೧೯೯೮ರಿಂದ ಧನಸಹಾಯ ದೊರೆಯುತ್ತಿದೆ. ಇದರಿಂದ ರೇಣುಕಾಚಾರ್ಯ ಕಂಪನಿ ಚೇತರಿಸಿಕೊಳ್ಳಲು ಅನುಕೂಲವಾಯಿತು. ಈ ಕಂಪನಿಯ ಕುರಿತು ಬಸವರಾಜ ಮಸೂತಿ ಅವರು ಸಂಯುಕ್ತ ಕರ್ನಾಟಕ, ಕರ್ನಾಟಕ ಸಂಧ್ಯಾಕಾಲ ಪತ್ರಿಕೆಗಳಲ್ಲಿ ಲೇಖನ ಪ್ರಕಟಿಸಿದರು. ಮತ್ತೆ ಕಂಪನಿ ಮೊದಲಿನ ವೈಭವಕ್ಕೆ ಬರಲು ಹುಮನಾಬಾದ ಶ್ರೀ ವೀರಭದ್ರೇಶ್ವರ ಜಾತ್ರೆಯಲ್ಲಿ ಕ್ಯಾಂಪ್ ಹಾಕಿತು. ಅಲ್ಲಿ ಮೈಂದರ್ಗಿ ಕಂಪನಿಗಳಿಗೆ ಜನರು ಬಹಳ ಗೌರವಿಸುತ್ತಾರೆ.

ಹಂತ ಹಂತವಾಗಿ ಈ ಕಂಪನಿ ಕರ್ನಾಟಕದಲ್ಲಿ ಕ್ಯಾಂಪ್ ಪ್ರಾರಂಭಿಸಿತು.

ಗುಲಬರ್ಗಾದ ಶ್ರೀ ಶರಣಬಸವೇಶ್ವರ ಜಾತ್ರೆ, ಕೊಪ್ಪಳದ ಶ್ರೀಗವಿಸಿದ್ದೇಶ್ವರ ಜಾತ್ರೆ, ಶಿರಸಿಯ ಶ್ರೀ ಮಾರಿಕಾಂಬ ದೇವಿಯ ಜಾತ್ರೆ, ಜಮಖಂಡಿ, ಜೇವರಗಿ, ವಾಗೇವಾದೆ, ಕೂಕಟನೂರ, ಐನಾಪುರ, ಶಿರಸಿ, ಹಾವೇರಿಯಲ್ಲಿ ಶ್ರೀ ೧೦೦೮ ಜಗದ್ಗುರು ರೇಣುಕಾಚಾರ್ಯ ನಾಟ್ಯ ಸಂಘ ಹೀಗೆ ಕಂಪೆನಿ ಅಪಾರವಾದ ಸೇವೆ ಸಲ್ಲಿಸಿದೆ. ಈ ಕಂಪನಿಯಲ್ಲಿ ೩೦ ಜನ ಕಲಾವಿದರಿದ್ದಾರೆ. ಕಲಾವಿದರಿಗೆ ಕಂಪೆನಿಯಿಂದಲೇ ಊಟ, ವಸತಿಯ ವ್ಯವಸ್ಥೆ ಇದೆ. ಪ್ರತಿ ದಿನ ತಪ್ಪದೆ ಕಲಾವಿದರಿಗೆ ೨೫,೦೦೦ ರೂಪಾಯಿ ಸಂಭಾವನೆ ಖರ್ಚು ಇದೆ. ಶ್ರೀ ೧೦೦೮ ಜಗದ್ಗುರು ರೇಣುಕಾಚಾರ್ಯ ನಾಟ್ಯ ಸಂಘ ಕೊಪ್ಪಳದಲ್ಲಿ ಪ್ರತಿ ದಿನ ೫೦,೦೦೦ ರೂಪಾಯಿ ಕಲೆಕ್ಷನ್ ಆಗಿದೆ. ಒಂದು ಕ್ಯಾಂಪ್‌ನಲ್ಲಿ ಕಲೆಕ್ಷನ್ ಆನಂದವನ್ನು ಅನುಭವಿಸಿ, ಮತ್ತೆ ಬೇರೆ ಕ್ಯಾಂಪ್‌ನಲ್ಲಿ ಬಾಗಲಕೋಟೆಯಲ್ಲಿ ನಷ್ಟವಾಗಿದೆ. ಇಂದಿಗೂ ಸಹ ವೃತ್ತಿರಂಗಭೂಮಿಯಲ್ಲಿ ಮೈಂದರ್ಗಿ ಕಂಪನಿಗಳಿಗೆ ಗೌರವವಿದೆ. ಹಲವು ನೋವು, ಯಾತನೆ ಅನುಭವಿಸುತ್ತಾ ಕಂಪನಿ ಹಾವೇರಿಯಲ್ಲಿ ಕ್ಯಾಂಪ್ ಹಾಕಿದೆ. ಕಂಪನಿಯ ಮಾಲೀಕರಾದ ಮಲ್ಲಿಕಾರ್ಜುನ ಮಡ್ಡೆ ಅವರು ಧೈರ್ಯದಿಂದ, ಹಲವಾರು ನೋವುಗಳನಡುವೆಯೂ ಕಂಪನಿ ನಡೆಸುತ್ತಿದ್ದಾರೆ.

**೨) ಶ್ರೀಗುರು ರೇವಣಸಿದ್ಧ ನಾಟ್ಯ ಸಂಘ, ಮೈಂದರ್ಗಿ**

ಶ್ರೀ ೧೦೦೮ ಜಗದ್ಗುರು ರೇಣುಕಾಚಾರ್ಯ ನಾಟ್ಯ ಸಂಘ ಪ್ರಸಿದ್ಧ ವೃತ್ತಿರಂಗಭೂಮಿಯ ಕಂಪನಿ ವೈಭವದಿಂದ ಮೆರೆಯಿತು. ರೇಣುಕಾಚಾರ್ಯ ಕಂಪನಿಯ ಕಲಾವಿದರಲ್ಲಿ ಅಂತಃಕಲಹ ನಿರ್ಮಾಣವಾಗಿ ಕಲಾವಿದರಾದ ಸಿದ್ಧರಾಜ ಚಡಚಣರು ೧೯೭೨ರಲ್ಲಿ ಶ್ರೀ ಗುರು ರೇವಣಸಿದ್ಧ ನಾಟ್ಯ ಸಂಘ, ಮೈಂದರ್ಗಿಯಲ್ಲಿ ಸ್ಥಾಪಿಸಿದರು. ಸಿದ್ಧರಾಜ ಚಡಚಣರ 'ಶ್ರೀ ಗುರು ರೇವಣಸಿದ್ದೇಶ್ವರ ನಾಟ್ಯ ಸಂಘ' ಬೀದರ, ಹುಮನಾಬಾದ್, ಚಿಟಗುಪ್ಪಿ, ಔರಾದ, ಬಿಲಗುಂದಿ, ಶಹಾಬಾದ, ಮೈಂದರ್ಗಿ, ಅಕ್ಕಲಕೋಟ, ಸೊಲ್ಲಾಪುರ ಹೀಗೆ ಹಲವಾರು ನಗರ ಪಟ್ಟಣಗಳಲ್ಲಿ ಕ್ಯಾಂಪ್ ಹಾಕಿ ಯಶಸ್ವಿಯಾಗಿದೆ.

ಜಗಜ್ಯೋತಿ ಬಸವೇಶ್ವರ, ರತ್ನ ಮಾಂಗಲ್ಯ, ಮಲಮಗಳು, ಗೌಡರ ಗದ್ದಲ, ಸಿಂಧೂರ ಲಕ್ಷ್ಮಣ, ಹಸಿರು ಬಳೆ, ರೈತನ ಮಕ್ಕಳು ಹಲವು ಪೌರಾಣಿಕ, ಐತಿಹಾಸಿಕ, ಸಾಮಾಜಿಕ, ನಾಟಕಗಳು ಪ್ರದರ್ಶಿಸುತ್ತಿದ್ದರು. ಗೌಡರ ಗದ್ದಲ ನಾಟಕ ಅಭಿನಯಿಸಲು ಚಿತ್ರನಟ ಸುಧೀರ ಹಲವು ಸಲ ಆಗಮಿಸಿದ್ದರು. ೧೯೮೮ರಲ್ಲಿ 'ಕರ್ನಾಟಕ ಕಲಾ ವೈಭವ ಸಂಘ ಸ್ಥಾಪಿಸಿದರು. ಸುಧೀರ್ ಅವರೊಂದಿಗೆ ಸಿದ್ಧರಾಜ ಬೆಂಗಳೂರಿಗೆ ಹೋದರು. ಇತ್ತ ರೇವಣಸಿದ್ಧ ಕಂಪನಿಯ ಜವಾಬ್ದಾರಿ ಭೀಮಣ್ಣಾ ಹುಲಮನಿ

ಸ್ವೀಕರಿಸಿದರು. ಜನರು ನಾಟಕ ನೋಡಲು ಬರುವುದು ಕಡಿಮೆಯಾಗಿರುವುದರಿಂದ ಕಂಪನಿ ನಡೆಸುವುದು ಅಸಾಧ್ಯವಾಯಿತು. ಆಗಿನ ಕಾಲದ ಪ್ರಸಿದ್ಧ ಚಲನಚಿತ್ರ ನಟ ಸುದರ್ಶನ, ನಟಿ ಶೈಲಶ್ರೀ ಅವರಿಗೆ ಭೀಮಣ್ಣ ಹುಲಮನಿ ಬೀದರ ಕ್ಯಾಂಪಿಗೆ 'ರತ್ನ ಮಾಂಗಲ್ಯ' ನಾಟಕ ಅಭಿನಯಿಸಲು ಕರೆಯಿಸಿದರು.

ರೇವಣಸಿದ್ಧ ಕಂಪನಿ ಸಾಲದ ಸುಳಿಗೆ ಸಿಲುಕಿ ಮೈಂದರ್ಗಿಗೆ ಹಿಂತಿರುಗಿತು. ೨೨.೦೨.೨೦೦೨ ರಂದು ಭೀಮಣ್ಣಾ ಹುಲಮನಿ ನಿಧನ ಹೊಂದಿದರು. ರಂಗಭೂಮಿ ಕಲಾವಿದ ಅಶೋಕ ಪಾಟೀಲ ರೇವಣಸಿದ್ಧ ಕಂಪನಿಯ ಪುನಶ್ಚೇತನಕ್ಕಾಗಿ ಮುಂದೆ ಬಂದರು. ಅಶೋಕ ಪಾಟೀಲ 'ಶ್ರೀ ಗುರುರೇವಣಸಿದ್ಧ ನಾಟ್ಯ ಸಂಘ' ಮೈಂದರ್ಗಿಯಲ್ಲಿ ಹಲವು ದಿನಗಳವರೆಗೆ ಕ್ಯಾಂಪ್ ಹಾಕಿ ಯಶಸ್ವಿಯಾದರು. ಕೆಲವು ದಿನಗಳ ನಂತರ ಶಹಾಬಾದ ನಗರದ ಶ್ರೀ ಶರಣಬಸವೇಶ್ವರ ದೇವಾಲಯದ ಆವರಣದಲ್ಲಿ ಕ್ಯಾಂಪ್ ಹಾಕಿತು. ೧೧ ಜನವರಿ ೨೦೦೪ ಈ ಕಂಪನಿಯ ವೇದಿಕೆಯಲ್ಲಿ 'ವೃತ್ತಿರಂಗಭೂಮಿ ನಾಟಕಗಳ ಸ್ಥಿತಿ-ಗತಿ' ವಿಷಯವಾಗಿ ವಿಚಾರ ಸಂಕಿರಣ ನಡೆಯಿತು. ಗುಲಬರ್ಗಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪನಿರ್ದೇಶಕರಾದ ಶ್ರೀ ಬಲವಂತರಾವ್ ಪಾಟೀಲ ಅವರು ಆಗಮಿಸಿದರು. ಇವರು ವೃತ್ತಿರಂಗಭೂಮಿ ಕಲೆ ಉಳಿಸಿಕೊಳ್ಳಲು ಕರೆ ನೀಡಿದರು. ವೃತ್ತಿರಂಗಭೂಮಿಗೆ ಧನಸಹಾಯ ನೀಡುವ ಭರವಸೆ ಕೊಟ್ಟರು. ಬಸವರಾಜ ಮಸೂತಿ ಅವರು ಮೈಂದರ್ಗಿಯ ರಂಗಭೂಮಿ ಕೊಡುಗೆ, ಈ ಕಂಪನಿಗಳ ಕುರಿತು ಸಂಯುಕ್ತ ಕರ್ನಾಟಕ, ಪ್ರಜಾವಾಣಿ, ಕರ್ನಾಟಕ ಸಂಧ್ಯಾಕಾಲ ಪತ್ರಿಕೆಗಳಲ್ಲಿ ಲೇಖನ ಪ್ರಕಟಿಸಿದರು. 'ನಾಟಕ ಕಲೆ ನಮ್ಮ ಉಸಿರು, ಕಲೆಯೇ ನಮ್ಮ ಬದುಕು, ಕಲೆ ಬೆಳೆಯಬೇಕೆಂಬುದು ನನ್ನ ಆಶಯವಾಗಿದೆ' ಎಂದು ಕಂಪನಿಯ ಮಾಲೀಕರಾದ ಅಶೋಕ ಪಾಟೀಲರು ಹೇಳಿದರು.

ಶಹಾಬಾದ, ಗುಲಬರ್ಗಾ, ಅಫಜಲಪುರ, ಆಳಂದ ಹಲವು ಕಡೆ ಕ್ಯಾಂಪ್ ಯಶಸ್ವಿಯಾದವು. ಶ್ರೀ ಗುರುರೇವಣಸಿದ್ಧ ನಾಟ್ಯ ಸಂಘ ವೃತ್ತಿ ರಂಗಭೂಮಿಗೆ ಅಪಾರವಾದ ಸೇವೆ ಸಲ್ಲಿಸಿದ ಈ ಕಂಪನಿ ಕೆಲ ಕಾರಣಗಳಿಂದ ಇದ್ದಲ್ಲಿಯೇ ನಾಟಕ ನಡೆಸುತ್ತಿದೆ. ಹುಲಮನಿ ಅವರ ಮಗ ರೇವಣಸಿದ್ಧ ಅವರು ಈ ಕಂಪನಿ ನಡೆಸುತ್ತಿದ್ದಾರೆ.

**೩) ವಿಜಯ ಮಹಾಂತೇಶ್ವರ ನಾಟ್ಯ ಸಂಘ, ಮೈಂದರ್ಗಿ**

ಅಕ್ಕಲಕೋಟ ತಾಲೂಕಿನ ಮೈಂದರ್ಗಿಯಲ್ಲಿ ವಿಜಯಕುಮಾರ ಜನಿಸಿದರು. ತಂದೆ ಚೋಳಪ್ಪಾ, ತಾಯಿ ಶಾಂತದೇವ್ರ, ವಿಜಯಕುಮಾರ ತಮ್ಮ ಉಪಜೀವನದ ಸಲುವಾಗಿ ಮೈಂದರ್ಗಿ ಬಿಟ್ಟು ಸೊಲ್ಲಾಪುರಕ್ಕೆ ಹೋಗಿ ಹೋಟೆಲ್ ಉದ್ಯೋಗ

ಪ್ರಾರಂಭಿಸಿದರು. 'ಭಲೇ ಮಗಳ' ನಾಟಕದ ಅಭಿನಯದಿಂದ ಪ್ರಸಿದ್ಧಿ ಪಡೆದರು. ವಿಜಯ ಅವರ ತಂದೆ ಚೋಳಪ್ಪಾ ವೃತ್ತಿರಂಗಭೂಮಿ ಕಲಾವಿದ, ವಿಜಯಕುಮಾರ ವೃತ್ತಿರಂಗಭೂಮಿ ಪ್ರವೇಶ ಮಾಡಿದರು. ಮೈಂದರ್ಗಿಯ ವೃತ್ತಿರಂಗಭೂಮಿಗಳಾದ ಶ್ರೀ ೧೧೦೦೮ ಜಗದ್ಗುರು ರೇಣುಕಾಚಾರ್ಯ, ಶ್ರೀ ಗುರುರೇವಣಸಿದ್ಧ ನಾಟ್ಯ ಸಂಘಗಳಲ್ಲಿ ಹಲವು ವರ್ಷ ನಾಟಕಗಳು ಅಭಿನಯಿಸಿದರು. ವೃತ್ತಿರಂಗಭೂಮಿಯಲ್ಲಿ ಅಭಿನಯದಿಂದ ವಿಜಯಕುಮಾರ ಹೆಸರು ಮಾಡಿದರು.

ವಿಜಯಕುಮಾರ ಹಲಕಟ್ಟಿ ಅವರು ೧೯೮೩ರಲ್ಲಿ 'ವಿಜಯ ಮಹಾಂತೇಶ್ವರ ನಾಟ್ಯ ಸಂಘ' ಸ್ಥಾಪಿಸಿದರು. ಮೈಂದರ್ಗಿಯಲ್ಲಿ 'ಕಾಳಿಂಗ ಸರ್ಪ' ನಾಟಕದ ನೂರು ಪ್ರಯೋಗಗಳು ಯಶಸ್ವಿಯಾಗಿ ನಡೆದವು. ಈ ನಾಟಕದ ಜಯವೀರ ಪಾತ್ರದಲ್ಲಿ ವಿಜಯಕುಮಾರ ಅಭಿನಯಿಸಿದ್ದರು. ಕಾಳಿಂಗ ಸರ್ಪ ನಾಟಕದಲ್ಲಿ ವಿಶೇಷವಾದ ನಾಟಕ ಪರಿಕರಗಳಿದ್ದವು. ಶಾಲಾ ದಿನಗಳಲ್ಲಿ ಈ ನಾಟಕ ವೀಕ್ಷಿಸಲು ಹೋಗಿದ್ದೆವು. ರಾಕ್ಷಸನ ಬಾಯಿಯಿಂದ ಖಳನಾಯಕ ರಂಗದ ಮೇಲೆ ಆಗಮಿಸುವ ದೃಶ್ಯ ವಿಸ್ಮಯವಾಗಿತ್ತು. ಪ್ರಯೋಗವೊಂದರಲ್ಲಿ ಖಳನಾಯಕ ಕಥಾ ನಾಯಕಿಯ ಮೇಲೆ ಅತ್ಯಾಚಾರ ಮಾಡುವ ದೃಶ್ಯವನ್ನು ಪ್ರೇಕ್ಷಕವರ್ಗ ದುಗುಡ-ದುಮ್ಮಾನದಿಂದ ನೋಡುತ್ತಿದ್ದರು. ಮುಂದೆ ಇದೇ ನಾಟಕ ಕರ್ನಾಟಕ ನಾಡಿನಾದ್ಯಂತ ಹುಚ್ಚನ್ನೇ ಹಚ್ಚಿಬಿಟ್ಟಿತು.

ಬೆಳ್ಳಿಯ ತೆರೆಯ ಕಡೆಗೆ ಜನರು ಧಾವಿಸುತ್ತಿದ್ದರು. ರಂಗಭೂಮಿಯ ಕಲೆ ಮಾಯವಾಗುತ್ತಿರುವ ಸಂದರ್ಭದಲ್ಲಿ, ವಿಜಯಕುಮಾರ ಪ್ರೇಕ್ಷಕರನ್ನು ಸೆಳೆಯಲು ರಂಗದ ಮೇಲೆ ವಿವಿಧ ಪ್ರಯೋಗ ಮಾಡಿದರು. 'ರೈತನ ಮಕ್ಕಳು' ನಾಟಕದಲ್ಲಿ ರಂಗದ ಮೇಲೆ ಎತ್ತಿನ ಬಂಡಿಯನ್ನೇ ವೇದಿಕೆಗೆ ತಂದರು. ವಿಜಯಕುಮಾರ ತಮ್ಮ ನಟನಾ ಕೌಶಲ್ಯದಿಂದ ಶಿಸ್ತುಬದ್ಧವಾಗಿ ಕಂಪನಿ ನಡೆಸುವ ಚಾಕಚಕ್ಯತೆ, ಕಲಾವಿದರಿಗೆ ಸೂಕ್ತ ಅವಕಾಶ ನೀಡುವ ನಾಯಕತ್ವಗುಣ, ರಂಗಸಂಗೀತದಲ್ಲಿ ಔಚಿತ್ಯ, ನಾಟಕದ ಪರದೆಗಳನ್ನು ಬರೆಸುವ ಚಾತುರ್ಯವನ್ನು ಅವರು ಕರಗತ ಮಾಡಿಕೊಂಡರು. ಪಾತ್ರಕ್ಕೆ ಬೇಕಾದ ಅಂಗಸೌಷ್ಠವ, ಗಾಂಭೀರ್ಯ ವಿಜಯಕುಮಾರ ಅವರಿಗೆ ಒಲಿದಿತ್ತು.

೧೯೮೯ರಲ್ಲಿ ಹುಮನಾಬಾದ ಶ್ರೀ ವೀರಭದ್ರೇಶ್ವರ ಜಾತ್ರೆಯಲ್ಲಿ ಒಂದು ಕಡೆ ವಿಜಯಕುಮಾರ ಹಲಕಟ್ಟಿ ಕ್ಯಾಂಪ್ ಹಾಕಿದರು. ಇನ್ನೊಂದು ಕಡೆ ಚಿತ್ರನಟ ಸುಧೀರ ಅವರು ಕ್ಯಾಂಪ್ ಹಾಕಿದರು. ವೃತ್ತಿರಂಗ ಭೂಮಿಯ ಎರಡು ಕಂಪನಿಗಳು ವೈಭವದಿಂದ ನಾಟಕ ಅಭಿನಯಸಿರುವುದು ಇಂದು ಇತಿಹಾಸವಾಗಿ ಉಳಿದಿದೆ. ವಿಜಯಕುಮಾರ ಒಂದೂರಿನ ಕ್ಯಾಂಪ್ ಮುಗಿಸಿದ ತಕ್ಷಣ ಮತ್ತೊಂದು ಊರಿಗೆ ಲೈಸನ್ಸ್ ಪಡೆದು ಅಲ್ಲಿಗೆ ತಮ್ಮೆಲ್ಲ ಪರಿಸರ ಹಾಗೂ ತಂಡದೊಂದಿಗೆ ಹೋಗಿ

ಗೇಣಿ ತೆಗೆದು ರಂಗ ಮಂದಿರ ನಿರ್ಮಿಸಿಕೊಂಡು ನಾಟಕ ಪ್ರಾರಂಭ ಮಾಡಿ ಒಳ್ಳೆಯ ಕಲೆಕ್ಷನ್ ಆದರೆ ತುಸು ಹೆಚ್ಚುಕಾಲ ಅಲ್ಲೇ, ನೆಲೆ ನಿಲ್ಲುತ್ತಿದ್ದರು.

ಕಲಬುರ್ಗಿ, ವಿಜಾಪುರ, ಸಿಂಧಗಿ, ಹುಮನಾಬಾದ, ನಾಲವಾರ, ಹಾರಕೊಡ, ಶಹಾಬಾದ, ರಾಚೆಸೂರ, ಸೋಲಾಪುರ, ಅಕ್ಕಲಕೋಟ ಹಲವು ನಗರ ಪಟ್ಟಣಗಳಲ್ಲಿ ಅವರು ಕ್ಯಾಂಪ್ ಹಾಕಿದರು. ನಾಡಿನ ಉದ್ದಗಲಕ್ಕೂ ವೃತ್ತಿರಂಗಭೂಮಿಗೆ ಅವರು ಸೇವೆ ಸಲ್ಲಿಸಿದ್ದಾರೆ. ವಿಜಯಕುಮಾರ ಕಂಪನಿ ಸಹ ಸಾಲಮಾಡಿಕೊಂಡು ತವರೂರಿಗೆ ಆಗಮಿಸಿತು. ವೃತ್ತಿರಂಗಭೂಮಿಯ ಸಾಲ ತೀರಿಸಲು ಮನೆ, ಹೊಲ ಮಾರಿ ಸಾಲ ತೀರಿಸಿದರು. ಮಗಳ ಮದುವೆಯ ಸಲುವಾಗಿ ವಿಜಯಕುಮಾರ 'ಗೌಡ ಮೆಚ್ಚಿದ ಹುಡುಗಿ' ಸಹಾಯಾರ್ಥ ನಾಟಕ ಅಭಿನಯಿಸಿದರು. ಮಗಳ ವಿವಾಹದ ಕೆಲವು ದಿನಗಳ ಬಳಿಕ ವೃತ್ತಿರಂಗಭೂಮಿಯಷ್ಟೇ ಅಲ್ಲದೆ ಜೀವನದ ರಂಗಭೂಮಿಗೂ ವಿದಾಯ ಹೇಳಿಬಿಟ್ಟರು.

ವಿಜಯಕುಮಾರ ವೃತ್ತಿರಂಗಭೂಮಿಯ ಮಹಾನ್ ಕಲಾವಿದ. ಇವರಿಗೆ ಮೈಂದರ್ಗಿ ಶ್ರೀ ಸಿದ್ಧರಾಮೇಶ್ವರ ಕನ್ನಡ ಬಳಗ 'ಮರಣೋತ್ತರ ರಂಗಭೂಮಿ ಪ್ರಶಸ್ತಿ' ನೀಡಿ ಗೌರವಿಸಿತು. ಮೈಂದರ್ಗಿ ರಂಗ ಕಲೆ ಶತಶತಮಾನಗಳಿಂದ ಬೆಳೆಯುತ್ತಾ ನಡೆದಿದೆ.

**೪) ಶ್ರೀ ಸ್ವಾಮಿ ಸಮರ್ಥ ನಾಟ್ಯ ಸಂಘ, ಅಕ್ಕಲಕೋಟ**

ಇಂದು ವೃತ್ತಿರಂಗಭೂಮಿಯ ಕೆಲವೇ ಕಂಪನಿಗಳು ಉಳಿದಿವೆ. ಅಕ್ಕಲಕೋಟದ ಶ್ರೀ ಸ್ವಾಮಿ ಸಮರ್ಥ ನಾಟ್ಯ ಸಂಘ ನಿರಂತರವಾಗಿ ೧೦ ವರ್ಷ ಸೇವೆ ಸಲ್ಲಿಸಿದೆ. ಅಕ್ಕಲಕೋಟ ರೇಣುಕಾ ಎಂದೇ ಪ್ರಸಿದ್ಧಳಾದ ಡ್ಯಾನ್ಸ್ ಹುಡುಗಿ ಇದರಲ್ಲಿದ್ದಾರೆ. ನಾನು ಪ್ರಾಥಮಿಕ ಶಾಲೆಯಲ್ಲಿರುವಾಗ, ಮೈಂದರ್ಗಿ ಶ್ರೀ ಶಿವಚಲೇಶ್ವರ ಜಾತ್ರೆಯಲ್ಲಿ ಜಿ.ಪ. ಪ್ರಾಥಮಿಕ ಶಾಲೆಯ ಬಯಲು ರಂಗಮಂದಿರದಲ್ಲಿ ರೇಣುಕಾ ಅವರ ಡ್ಯಾನ್ಸ್ ಇತ್ತು. ಆವಾಗ ೧೦ ರೂಪಾಯಿ ಟಿಕೇಟು. ಮೈಂದರ್ಗಿಯ ಮಲ್ಲಿನಾಥ ಭೂಸನೂರ ಅವರು 'ರೇಣುಕಾ ಅವರ ಡ್ಯಾನ್ಸ್' ಕಾರ್ಯಕ್ರಮ ಆಯೋಜಿಸಿದ್ದರು. ಶಾಲೆಯ ಮಕ್ಕಳಿಗೆ ಡ್ಯಾನ್ಸ್ ನೋಡಲು ಟಿಕೆಟ್ ಇರಲಿಲ್ಲ. ಮೈಂದರ್ಗಿ ಬಯಲು ರಂಗಮಂದಿರ ಡ್ಯಾನ್ಸ್ ನೋಡಲು ತುಂಬಿ ಹೋಗಿತ್ತು. ಆ ವರ್ಷ ವೃತ್ತಿರಂಗ ಭೂಮಿ ನಾಟಕ ನೋಡಲು ಜನರು ಬಾರದೇ ಇದ್ದಾಗ ಕಂಪನಿಗೆ ಸಾಲವಾಗಿ ಹೋಯಿತು.

ನಂತರದ ದಿನಗಳಲ್ಲಿ ರೇಣುಕಾ ಜನಪ್ರಿಯ ನೃತ್ಯಕಲಾವಿದೆಯಾಗಿ ಪ್ರಸಿದ್ಧಳಾಗುತ್ತಾಳೆ. ವೃತ್ತಿ ಕಂಪನಿಗಳಲ್ಲಿ ಹಾಗೂ ಹಳ್ಳಿಗಳ ಹವ್ಯಾಸಿ ತಂಡಗಳಲ್ಲಿ ರೇಣುಕಾ ಡ್ಯಾನ್ಸ್ ಎಂದರೆ ರಂಗಮಂದಿರ ತುಂಬಿತುಳುಕುತ್ತಿತ್ತು. ರೇಣುಕಾ ಆ

ಕಾಲದಲ್ಲಿಯೇ ೫೦೦೦ ರೂ ಗೌರವಧನ ಪಡೆಯುತ್ತಿದ್ದರು. ರಂಗಭೂಮಿಯ ಕಲಾವಿದರ ಸಹಕಾರದಿಂದ ರೇಣುಕಾ ೨೦೦೧ರಲ್ಲಿ 'ಶ್ರೀ ಸ್ವಾಮಿ ಸಮರ್ಥ ನಾಟ್ಯ ಸಂಘ' ಅಕ್ಕಲಕೋಟ ಸ್ಥಾಪನೆ ಮಾಡುತ್ತಾರೆ. ಗುಲಬರ್ಗಾ ಜಿಲ್ಲೆಯ ಜೇವರಗಿ ಹತ್ತಿರದ ಆಂದೋಲ ಗ್ರಾಮದಲ್ಲಿ "ಕಿವುಡ ಮಾಡಿದ ಕಿತಾಪತಿ" ಎನ್ನುವ ಪ್ರಯೋಗ ಪ್ರಾರಂಭವಾಗುತ್ತದೆ.

ರೇಣುಕಾ ಅವರ 'ಶ್ರೀ ಸ್ವಾಮಿ ಸಮರ್ಥ ನಾಟ್ಯ ಸಂಘ ಗುಲಬರ್ಗಾ ಜಿಲ್ಲೆಯಲ್ಲಿ ಪ್ರಾರಂಭಗೊಂಡು ಆ ಭಾಗದ ಅನೇಕ ಹಳ್ಳಿಗಳಲ್ಲಿ, ಚಿಕ್ಕಪುಟ್ಟ ಜಾತ್ರೆ ಕ್ಯಾಂಪ್‌ಗಳಲ್ಲಿ ಭಾಗವಹಿಸುತ್ತಾ ನಂತರ ಉತ್ತರ ಕರ್ನಾಟಕ ಪ್ರಮುಖ ಜಿಲ್ಲೆಗಳಲ್ಲಿ ಕ್ಯಾಂಪ್ ಮಾಡುತ್ತಾ ಆರ್ಥಿಕವಾಗಿ ಭದ್ರತೆ ಹೊಂದುತ್ತಾ ಎರಡು ವರ್ಷಗಳಲ್ಲಿ ಸ್ವತಂತ್ರ ಸಲಕರಣೆಗಳನ್ನು ಹೊಂದಿ ಉತ್ತರ ಕರ್ನಾಟಕದ ಪ್ರಮುಖ ಜಾತ್ರೆಗಳಾದ ಬನಶಂಕರಿ ಜಾತ್ರೆ, ಗೋಡಚಿ ಜಾತ್ರೆ, ಮೈಲಾರ ಜಾತ್ರೆ, ಶಿರ್ಸಿ ಜಾತ್ರೆ, ಅಮರೇಶ್ವರ ಜಾತ್ರೆ, ತಿಂಥಣಿ ಜಾತ್ರೆಗಳಲ್ಲಿ ಯಶಸ್ವಿಯಾಗಿ ಕ್ಯಾಂಪ್ ನಡೆಸಿತು.

೨೦೦೮-೦೯ರ ಸಾಲಿನಲ್ಲಿ ಲಿಂಗಸೂಗೂರ ಹತ್ತಿರದ ಅಮರೇಶ್ವರ ಜಾತ್ರೆಯಲ್ಲಿ ಅನೇಕ ಹಿರಿಯ ಕಂಪನಿಗಳ ಸ್ಪರ್ಧೆಯಲ್ಲಿಯೂ "ಕಾಳಿಂಗ ಸರ್ಪ" ನಾಟಕದಿಂದ ಯಶಸ್ವಿಯಾಗಿ ಸುಮಾರು ೧೦-೧೧ ಲಕ್ಷ ರೂಪಾಯಿ ಕಲೆಕ್ಷನ್ ಪಡೆದಿದ್ದಾರೆ. ತಿಂಥಣಿ ಮೌನೇಶ್ವರ ಜಾತ್ರೆಯಲ್ಲಿಯೂ ನಿರೀಕ್ಷೆಗೆ ಮೀರಿದ ಕಲೆಕ್ಷನ್ ಹೀಗೆ ಯಶಸ್ಸು ಸಾಧಿಸಿದ್ದರೂ ಕೆಲವೊಂದು ಕ್ಯಾಂಪಿನಲ್ಲಿ ಹಾನಿ ಅನುಭವಿಸಿದ್ದಾರೆ. ವೃತ್ತಿರಂಗಭೂಮಿಯ ಸೇವೆಯಲ್ಲಿ ಏಳು-ಬೀಳು ಸ್ವಾಭಾವಿಕ. ಕಳೆದ ವರ್ಷ ಗುಲಬರ್ಗಾ ಜಿಲ್ಲೆಯ ನಗನೂರ ಜಾತ್ರೆ ಬೆಳಗಾಂವ ಜಿಲ್ಲೆಯ ಅಮ್ಮಣಗಿ ಜಾತ್ರೆಗಳಲ್ಲಿ ನಿಸರ್ಗ ವಿಕೋಪದಿಂದ ಹಾನಿ ಅನುಭವಿಸಿದರೆ, ಮತ್ತೊಂದೆಡೆ ಶ್ರೀರಂಗಪಟ್ಟಣದ ಶ್ರೀನಿವಾಸ ಎನ್ನುವವರು ಈ ಕಂಪನಿ ನಡೆಸುವುದಾಗಿ ಹೇಳಿ, ಸಾಲ ಮಾಡಿದರು. ಧೈರ್ಯದಿಂದ ರೇಣುಕಾ ಅವರ ಕಂಪನಿಗಳ ಸಾಮಾನುಗಳನ್ನು ಸಾಲದಿಂದ ಮುಕ್ತ ಮಾಡಿದಳು.

ಅಕ್ಕಲಕೋಟ ರೇಣುಕಾ ನಿರಂತರವಾಗಿ ೧೦ ವರ್ಷ ವೃತ್ತಿರಂಗಭೂಮಿ ನಡೆಸಿದ್ದಾರೆ. ಅವರ ಸಾಮರ್ಥ್ಯ ಮೀರಿ ಹತ್ತಾರು ಕಲಾವಿದರ ಕುಟುಂಬಗಳ ಜವಾಬ್ದಾರಿ ನೋಡಿಕೊಂಡಿದ್ದಾರೆ. ವೃತ್ತಿ ರಂಗಭೂಮಿಗೆ ಶ್ರಮಿಸುತ್ತಾ ಎಲ್ಲ ಬಗೆಯ ತೊಂದರೆಗಳನ್ನು, ಸಮಸ್ಯೆಗಳನ್ನು ಎದುರಿಸುತ್ತಾ ಹೋರಾಡುತ್ತಿದ್ದಾರೆ. ಅಕ್ಕಲಕೋಟ ರೇಣುಕಾ ಅವರಿಗೆ ಮೈಂದರ್ಗಿಯ ಶ್ರೀ ಸಿದ್ಧರಾಮೇಶ್ವರ ನಾಟ್ಯ ಸಂಘದ ವೇದಿಕೆಯಲ್ಲಿ ಶ್ರೀ ಸಿದ್ಧರಾಮೇಶ್ವರ ಕನ್ನಡ ಬಳಗದಿಂದ 'ಪ್ರಸಿದ್ಧ ನೃತ್ಯಗಾತಿ' ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ರೇಣುಕಾ ಅವರ ಕಂಪನಿಯಲ್ಲಿ ಮೈಂದರ್ಗಿಯ ಹಲವಾರು ಕಲಾವಿದರು ಸೇವೆ ಸಲ್ಲಿಸಿದ್ದಾರೆ.

ರೇಣುಕಾ ಮುಸುಕು ಹಾಕಿಕೊಂಡು "ಭೋಲೀಕೆ ಪೀಛೇ ಕ್ಯಾ ಹೈ" ಎನ್ನುವ ರಿಕಾರ್ಡಿಗೆ ನೃತ್ಯ ಗೈಯುತ್ತ ರಂಗಕ್ಕೆ ಬಂದರೆ ಪ್ರೇಕ್ಷಕರು ಉಸಿರು ಬಿಗಿಹಿಡಿದು ಕುಳಿತು ನೋಡುತ್ತಾರೆ. ಕ್ರಮೇಣ ಮುಸುಕು ಸರಿಸಿ ಸುಂದರ ಮುಖ ತೋರಿಸಿದಾಗ ಸೌಂದರ್ಯೋಪಾಸಕರ, ಪ್ರೇಕ್ಷಕರ ಕೇಕೆಗಳಿಂದ, ಇಡೀ ರಂಗಮಂದಿರ ತೂಗಾಡುತ್ತದೆ. ಕ್ಯಾಂಪ್ ಒಂದರಲ್ಲಿ ರೇಣುಕಾ ನೃತ್ಯ ಮಾಡುವಾಗ ಯಾರೋ ನಾಣ್ಯವನ್ನು ಗುರಿ ಇಟ್ಟು ಹೊಡೆದರು. ರಕ್ತ ಬಂದರೂ ಅರಿವಾಗಿರಲಿಲ್ಲ. ಡ್ಯಾನ್ಸ್ ಮುಗಿದ ಮೇಲೇ ಅವರಿಗೆ ಇದು ಗೊತ್ತಾಯಿತು. ವೃತ್ತಿರಂಗಭೂಮಿಗೆ ರೇಣುಕಾ 'ಶ್ರೀ ಸ್ವಾಮಿ ಸಮರ್ಥ ನಾಟ್ಯ ಸಂಘ'ದಿಂದ ಅಪಾರವಾದ ಸೇವೆ ಸಲ್ಲಿಸಿದ್ದಾರೆ. ಕರ್ನಾಟಕ ನಾಟಕ ಅಕಾಡೆಮಿಯ ಮಾಜಿ ಅಧ್ಯಕ್ಷರಾದ ಮಾಲತಿ ಸುಧೀರ ಅವರು ರೇಣುಕಾ ಅವರ ನೃತ್ಯ ಕಂಡು ಬೆರಗಾಗಿದ್ದಾರೆ. ಈ ಕಲಾವಿದೆ ರಸಿಕರ, ಸೌಂದರ್ಯೋಪಾಸಕರ ಮನದಲ್ಲಿ ನೆಲೆಸಿರುವುದಂತೂ ಸತ್ಯ. ಕಳೆದ ವರ್ಷ ಅಕ್ಕಲಕೋಟ ರೇಣುಕಾ ನಮ್ಮನ್ನು ಬಿಟ್ಟು ಹೋದರು, ಅವರ ಸಾಧನೆ, ದಾಖಲೆಗಳು ಹಾಗೆಯೇ ಇವೆ. ರಂಗಭೂಮಿ ಸಾಹಿತಿಗಳಾದ ಗವೀಶ ಹಿರೇಮಠ ಅವರು ಅಕ್ಕಲಕೋಟ ರೇಣುಕಾ ಅವರ ಬಗ್ಗೆ ಲೇಖನ ನೀಡಿ ಸಹಕರಿಸಿದ್ದಾರೆ. ಅವರಿಗೆ ಕೃತಜ್ಞತೆಗಳು.

**೫) ಸಿದ್ಧರಾಮೇಶ್ವರ ನಾಟ್ಯ ಸಂಘ, ಮೈಂದರ್ಗಿ**

ಮೈಂದರ್ಗಿಯ ವೃತ್ತಿರಂಗಭೂಮಿಯ ಕಲಾವಿದ ಓಂಕಾರ ಬುರುಡ ಅವರು ಹಲವು ಕಂಪನಿಗಳಲ್ಲಿ ನಟರಾಗಿ ಸೇವೆ ಸಲ್ಲಿಸಿದ್ದಾರೆ. ಓಂಕಾರ ಅವರು ವೃತ್ತಿರಂಗಭೂಮಿ, ಹವ್ಯಾಸಿ ರಂಗಭೂಮಿ, ಗ್ರಾಮೀಣ ರಂಗಭೂಮಿಯ ಹಲವು ನಾಟಕ ಸಂಘಗಳಲ್ಲಿ, ನಟರಾಗಿ, ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಾ, ಯುವ ಕಲಾವಿದರೊಂದಿಗೆ 'ಶ್ರೀ ಸಿದ್ಧರಾಮೇಶ್ವರ ನಾಟ್ಯ ಸಂಘ ಸ್ಥಾಪಿಸುತ್ತಾರೆ. ೨೦೧೧ರಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಹಾಗೂ ಚಲನಚಿತ್ರ ನಿರ್ದೇಶಕ ಬಿ. ಸುರೇಶ ಅವರು 'ಶ್ರೀ ಸಿದ್ಧರಾಮೇಶ್ವರ ನಾಟ್ಯ ಸಂಘ'ವನ್ನು ಉದ್ಘಾಟನೆ ಮಾಡಿದ್ದಾರೆ ಓಂಕಾರ ಬುರುಡ ಅವರೊಂದಿಗೆ ೨೫–೩೦ ಜನ ಯುವಕರ ತಂಡ ಗ್ರಾಮೀಣ ಭಾಗದ ಜಾತ್ರೆಗಳಲ್ಲಿ ನಾಟಕ ಅಭಿನಯಿಸಲು ಕ್ಯಾಂಪ್ ಹಾಕುತ್ತಾರೆ. ಇವರೊಂದಿಗೆ ೧೦ ಜನ ಅಮೆಚೂರ ನಟಿಯರು ಸೇವೆ ಸಲ್ಲಿಸುತ್ತಿದ್ದಾರೆ.

ಮೈಂದರ್ಗಿ ಶ್ರೀ ಶಿವಾಚಲೇಶ್ವರ ಜಾತ್ರೆಯಲ್ಲಿ ಇವರು ಕ್ಯಾಂಪ್ ಹಾಕಿ ಯಶಸ್ವಿಯಾಗಿದ್ದಾರೆ. ನನ್ನ ಗಂಡ ನೀ ಹೌದು, ನಿನ್ನ ಹೆಂಡತಿ ನಾನಲ್ಲ ನಾಟಕ ಅಭಿನಯಿಸಿದರು. ಈ ಕ್ಯಾಂಪಿಗೆ ಚಲನಚಿತ್ರ ಹಾಸ್ಯ ನಟರಾದ ವೈಜನಾಥ ಬಿರಾದಾರ ಅವರು ನಾಟಕ ಅಭಿನಯಿಸಲು ಆಗಮಿಸಿದ್ದರು. ಮೈಂದರ್ಗಿ ಕಲಾವಿದರ ಅಭಿನಯ

ಕಂಡು ವೈಜನಾಥ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಕರ್ನಾಟಕ ವೃತ್ತಿ ರಂಗಭೂಮಿಗೆ ಮೈಂದರ್ಗಿಯ ಎಲ್ಲ ನಾಟಕ ಕಂಪನಿಗಳ ಕೊಡುಗೆ ಅಪಾರವಾಗಿದೆ. ೧೯೭೦ರ ದಶಕದಲ್ಲಿ ಹುಮನಾಬಾದ ಶ್ರೀ ವೀರಭದ್ರೇಶ್ವರ ಜಾತ್ರೆಯಲ್ಲಿ ಮೈಂದರ್ಗಿ ನಾಟಕ ಕಂಪನಿಗಳ ನಾಟಕ ನಾನು ನೋಡಿ, ಪ್ರಭಾವಿತನಾಗಿ ಬೆಳೆದಿದ್ದೇನೆಂದು ವೈಜನಾಥ ಬಿರಾದಾರ ಹೇಳಿದರು. ಶ್ರೀ ಸಿದ್ಧರಾಮೇಶ್ವರ ನಾಟ್ಯ ಸಂಘ ಮೈಂದರ್ಗಿ ಕ್ಯಾಂಪ್ ಯಶಸ್ವಿಯಾದ ನಂತರ, ಕರ್ನಾಟಕ ಮಹಾರಾಷ್ಟ್ರದ ಹಲವು ಹಳ್ಳಿಯ ಜಾತ್ರೆಗಳಲ್ಲಿ ಕ್ಯಾಂಪ್ ಹಾಕಿ ಯಶಸ್ವಿಯಾಗಿದ್ದಾರೆ.

ಆಳಂದ ತಾಲೂಕಿನ ಅಂಬೇಡ, ಆಳಂದ ನಗರ, ಸಿಂಧಗಿ ತಾಲೂಕಿನ ಆಹೇರಿ, ಆಲಮೇಲ, ಜತ್ತ ತಾಲೂಕಿನ ಸೂನ್ಯಳ, ಉಮದಿ, ಇಂಡಿ ತಾಲೂಕಿನ ತೆಗೆಲ್ಲಿ. ಸಿರಸನಳ್ಳಿ, ಅಕ್ಕಲಕೋಟ ತಾಲೂಕಿನ ತಡವಳ, ಕಾಣಿಲಿಂಗ ಜೇವೂರ, ಹತ್ತಿಕಣಬಸ, ಚಂಪಳಗಾಂವ, ದಕ್ಷಿಣ ಸೋಲಾಪುರ ತಾಲೂಕಿನ ಬಡಗಾಂವ, ಸೋಲಾಪುರ ನಗರ ಹೀಗೆ ಹಲವು ಗ್ರಾಮೀಣ ಪ್ರದೇಶದಲ್ಲಿ ಕ್ಯಾಂಪ ಹಾಕಿ ಯಶಸ್ವಿಯಾಗಿದ್ದಾರೆ. ಓಂಕಾರ ಅವರ ಶ್ರೀ ಸಿದ್ಧರಾಮೇಶ್ವರ ನಾಟ್ಯ ಸಂಘ ಕೆಲವುಕಡೆ ಆನಂದವನ್ನು ಅನುಭವಿಸಿದ್ದರೆ, ಮತ್ತೆ ಕೆಲವು ಕಡೆ ನೋವುಗಳನ್ನೂ ಅನುಭವಿಸಿದ್ದಾರೆ.

ಕೆರಳಿದ ಕಾಳಿಂಗ ಸರ್ಪ, ಹೆತ್ತವಳ ಹಾಲು ವಿಷವಾಯಿತು. ಹಸಿರು ಬಳೆ, ಮಿಸ್ಟರ್ ಗುಂಡುರಾಳ, ಎಚ್ಚರ ತಂಗಿ ಎಚ್ಚರ, ವೀರ ಸೈನಿಕ, ಮನೆಗೆ ತಕ್ಕ ಮಗ, ಮುಂತಾಗಿ ಹಲವು ಸಾಮಾಜಿಕ, ಪೌರಾಣಿಕ ನಾಟಕಗಳನ್ನು ಇವರು ಅಭಿನಯಿಸಿದ್ದಾರೆ.

ಓಂಕಾರ ಬುರುಡ ಅವರ ಶ್ರೀ ಸಿದ್ಧರಾಮೇಶ್ವರ ನಾಟ್ಯ ಸಂಘದಿಂದ ನೂರಾರು ನಾಟಕ ಪ್ರದರ್ಶನಗಳಾಗಿವೆ. ಸೊಲ್ಲಾಪುರ ರಂಗ ಕೈಪಿಡಿ ರಚನೆ ಸಂದರ್ಭದಲ್ಲಿ ನನ್ನೊಂದಿಗೆ ಅವರು 'ನಾವು ಅಮೆಚೂರ ಕಲಾವಿದರಿದ್ದೇವೆ' ಎಂದು ಹೇಳಿದರು. ಅಮೆಚೂರ ಶಬ್ದ ತಿಳಿಯಲಿಲ್ಲ. ಹಳ್ಳಿ-ಹಳ್ಳಿಯ ಜಾತ್ರೆಗಳಲ್ಲಿ ನಾಟಕ ಅಭಿನಯಿಸಲು ಹೋಗುವದಕ್ಕೆ ಅಮೆಚೂರ ಎಂದು ಕರೆಯುತ್ತಾರೆ. ಮೈಂದರ್ಗಿಯ ಶ್ರೀ ಸಿದ್ಧರಾಮೇಶ್ವರ ನಾಟ್ಯ ಸಂಘ ಅಮೆಚೂರ ನಾಟಕ ಅಭಿನಯಿಸಲು ಪ್ರಸಿದ್ಧರಾಗಿದ್ದಾರೆ.

ಓಂಕಾರ ಬುರುಡ ಅವರು ೨೫-೩೦ ಜನ ಕಲಾವಿದರೊಂದಿಗೆ, ವಿಶ್ವಾಸದಿಂದ ತಂಡ ಬೆಳೆಸುತ್ತಿದ್ದಾರೆ. ಇವರು ಯಾವುದೇ ಪ್ರಕಾರದ ವ್ಯಸನಿಗಳಲ್ಲ. ರಂಗಕಲಾವಿದರೆಂದರೆ ವ್ಯಸನಗಳಿಗೆ ಅಂಟಿಕೊಂಡು ಕಲಾವಿದರು ನಾಶವಾದ ಉದಾಹರಣೆಗಳಿವೆ. ನಡೆನುಡಿ ನೇರ, ದಿಟ್ಟ ಸ್ವಭಾವದ ಓಂಕಾರ ಬುರುಡ ಕಲಾವಿದರ ವಿಶ್ವಾಸಗಳಿಸಿದ್ದಾರೆ. ಗ್ರಾಮೀಣ ಭಾಗದ ಜಾತ್ರೆಗಳ ಸಲುವಾಗಿ ಯಾರಾದರು ಓಂಕಾರರಿಗೆ ಸಂಪರ್ಕಿಸಿದಾಗ, ಮರುದಿವಸವೇ ಇವರು ತಂಡದೊಂದಿಗೆ ನಾಟಕ

ಅಭಿನಯಿಸಲು ಹೋಗುತ್ತಾರೆ. ವೃತ್ತಿರಂಗಭೂಮಿ, ಹವ್ಯಾಸಿರಂಗಭೂಮಿ, ಗ್ರಾಮೀಣ ರಂಗಕಲೆಗೆ ಶ್ರೀ ಸಿದ್ಧರಾಮೇಶ್ವರ ನಾಟ್ಯ ಸಂಘದ ಕೊಡುಗೆ ಅಪಾರವಾಗಿದೆ.

**೬) ಹವ್ಯಾಸಿ ಶ್ರೀಬಾಲಾಜಿ ನಾಟ್ಯ ಸಂಘ, ದುಧನಿ**

ಸೋಲಾಪುರ ಜಿಲ್ಲೆಯ ಅಕ್ಕಲಕೋಟ ತಾಲೂಕಿನ ೨೭ ಕಿ.ಮಿ. ಅಂತರದಲ್ಲಿ ದುಧನಿ ನಗರವಿದೆ. ಬೆಂಗಳೂರಿನಿಂದ ಮುಂಬಯಿಗೆ ಹೋಗುವ ರೈಲು ನಿಲ್ದಾಣ ದುಧನಿ ಸ್ಟೇಷನ್ ಆಗಮಿಸಿದರೆ, ಮಹಾರಾಷ್ಟ್ರ ರಾಜ್ಯ ಪ್ರಾರಂಭವಾಗುತ್ತದೆ. ದುಧನಿ ಗ್ರಾಮದೇವರಾದ ಶ್ರೀಸಿದ್ಧರಾಮೇಶ್ವರ ಮಕರ ಸಂಕ್ರಮಣದ ಜಾತ್ರೆ ವೈಭವದಿಂದ ಆಚರಿಸುತ್ತಾರೆ. ದುಧನಿ ಪ್ರಸಿದ್ಧ ಅಡಕೆ ವ್ಯಾಪಾರಿಗಳ ನಗರವಾಗಿದೆ. ಶ್ರೀ ಶಂಕರ ಮೇತ್ರೆ ಅವರು ಶ್ರೀ ಸಿದ್ದರಾಮೇಶ್ವರ ಮಕರ ಸಂಕ್ರಮಣದ ಜಾತ್ರೆಯಲ್ಲಿ ಪ್ರತಿ ವರ್ಷ ತಪ್ಪದೆ ಶ್ರೀ ಬಾಲಾಜಿ ನಾಟ್ಯ ಸಂಘದಿಂದ ನಾಟಕಗಳು ಪ್ರದರ್ಶಿಸುತ್ತಾರೆ. ನೂರಾರು ಸಾಮಾಜಿಕ ಕನ್ನಡ ನಾಟಕಗಳು ನಿಂಬಾಳದ ಪರಮೇಶ್ವರ ತಂಡ ಅವರ ಮಾರ್ಗದರ್ಶನದಲ್ಲಿ ಪ್ರದರ್ಶಿಸಿದ್ದಾರೆ. ಪರಮೇಶ್ವರ ತಂಡ ಅವರ ಗರಡಿಯಲ್ಲಿ ದುಧನಿಯ ೨೫–೩೦ ರಂಗ ಕಲಾವಿದರು ಉತ್ತಮ ಅಭಿನಯದಿಂದ ಪ್ರಸಿದ್ಧರಾಗಿ, ಕಿರುತೆರೆಯ ಕಲಾವಿದರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಹವ್ಯಾಸಿ ಶ್ರೀ ಬಾಲಾಜಿ ನಾಟ್ಯ ಸಂಘ ಬೆಳೆದು ಬಂದ ವೈಭವ ವಿಭಿನ್ನವಾಗಿದೆ. ಮಹಾರಾಷ್ಟ್ರದ ಪ್ರಬಲ ರಾಜಕೀಯ ನಾಯಕರು ದುಧನಿಯಲ್ಲಿ ೧೯೫೫ರಲ್ಲಿ ಸ್ಥಾಪಿಸಿದರು. ಬಾಲಾಜಿ ನಾಟ್ಯ ಸಂಘ ಪ್ರತಿವರ್ಷ ನಾಟಕ ಅಭಿನಯಿತ್ತಾ ಹಂತ ಹಂತವಾಗಿ ಪ್ರಬಲ ಹವ್ಯಾಸಿ ಕಂಪನಿಯಾಗಿ ಬೆಳೆಯಿತು. ಸಾತಲಿಂಗಪ್ಪ ಮೇತ್ರೆ ಅವರ ಮಕ್ಕಳಾದ ಕಾಶಿನಾಥ ಮೇತ್ರಿ, ಸಿದ್ಧಾರಾಮ ಮೇತ್ರಿ, (ಮಹಾರಾಷ್ಟ್ರದ ಮಾಜಿ ಗೃಹರಾಜ್ಯ ಮಂತ್ರಿ' ಶಂಕರ ಮೇತ್ರಿ (ಅಧ್ಯಕ್ಷರು, ಅಕ್ಕಲಕೋಟ ತಾಲ್ಲೂಕು ಕಾಂಗ್ರೆಸ್ ಕಮಿಟಿ) ಇವರು ಮಾಲೀಕರಾಗಿ ಹವ್ಯಾಸಿ ರಂಗಭೂಮಿ ಸದ್ದಿಲ್ಲದೆ ದುಧನಿ ನಗರದಲ್ಲಿ ಅರಳುವ ಹೂವಿನಂತೆ ತನ್ನನ್ನು ಗುರುತಿಸಿಕೊಂಡು ಬದ್ಧತೆಯನ್ನು ಮರೆದಿದೆ. ದುಧನಿ ರಂಗಭೂಮಿ ಕಲೆ ಉಳಿಸಿ ಬೆಳೆಸಿದ ಕೀರ್ತಿ ಸಾಟಲಿಂಗಪ್ಪಾ ಮೇತ್ರೆ ಅವರ ಪರಿವಾರಕ್ಕೆ ಸಲ್ಲುತ್ತದೆ. ಪುತ್ಥಳಿ, ಸಂಸಾರ ಸಮರ, ಸ್ತ್ರೀ ರತ್ನ, ರಕ್ತ ರಾತ್ರಿ, ಕುರುಕ್ಷೇತ್ರ, ಸಿಂಧೂರ ಲಕ್ಷಣ, ಅರಿಸಿಣ ಕುಂಕುಮ, ಪತಿಭಕ್ತಿ, ಮನೆಗೆ ತಕ್ಕ ಮಗ, ಗೌಡರ ಗದ್ದಲ, ತಾಳಿಯಿಲ್ಲದೆ ತಾಯಿಯಾದೆ. ಸಾಕುಮಗನ ಸವಾಲು, ಯಾಕವ್ಯಾಗರತಿ ಸನ್ಯಾಸ ಮರೆತಿ, ರಕ್ತಸಂಬಂಧ, ಮಾತು ಕೊಟ್ಟ ಮುತ್ಯಾ, ಇಂದಿನ ಭಾರತ, ದುರಂತ ನಾಯಕಿ, ಕೌರಿವರಿನ್ನೂ ಸತ್ತಿಲ್ಲ, ಪ್ರಾಣದ ಪ್ರತೀಕಾರ, ಮುಡಿಯೇರ್ ಮಲ್ಲಿಗೆ, ಗಂಗಿ ಹಿಡಶ್ಯಾಳ ಗುಂಗ, ಮಾಂಗಲ್ಯ, ಯಾರು ಮಡದಿ ನೀ ಯಾರಿಗೆ? ಕುಂಕುಮ ತಂದ ಕೈಲಾಸ ಹಲವು ಸಾಮಾಜಿಕ ನಾಟಕ ಇವರು ಅಭಿನಯಿಸಿದರು.

ಬಾಲಾಜಿ ನಾಟ್ಯ ಸಂಘದ ನಿರ್ದೇಶಕರಾಗಿ ಈರಣ್ಣಾ ನಾಗಾ, ದುಧನಿಯ ಲಕ್ಷ್ಮೀಪುತ್ರ ಖಿವಾ, ನಿಂಬಾಳದ ಪರಮೇಶ್ವರ ತಂಡೆ ಅವರು ಅಪಾರವಾಗಿ ಸೇವೆ ಸಲ್ಲಿದ ಉತ್ತಮ ಅಭಿನಯದ ರಂಗ ಕಲಾವಿದರಿಗೆ ತಯಾರಿಸಿದ್ದಾರೆ. ಮಲ್ಲಪ್ಪ ಪಾಟೀಲ, ಶಿವಬಾಳ ಗೌಂಡಿ, ಶಿವರಾಯ ಆಂಕಲಗಿ, ನಬೀಸಾಬ, ಚೆಂದಣ್ಣ ಕೂತಲಿ, ಮಳಸಿದ್ಧ ತೂಳನೂರ, ಕಾಂತು ಯರಗಲ್ಲ, ಶರಣ ಸಾವಳಗಿ, ಅಪ್ಪು ಪಂದೆತ, ಮಹಾತೇಗ ಅಂಕಲಗಿ, ವಾಗೀಶ್ ಪಾಟೀಲ, ಗುರುಶಾಂತ ಹಳಮನಿ, ಮಲ್ಲಿನಾಥ ಸೊಳಡೆ, ಗುರುಶಾಂತ ಹಳಿಮನಿ, ಅಮೋಘ ಜತಾಪುರೆ, ಹಲವು ಕಲಾವಿದರು ಈ ಸಂಘದ ಸೇವೆ ಸಲ್ಲಿಸಿದ್ದಾರೆ.

ಪ್ರೇಮಾ ಬದಾಮಿ ಹಾಗೂ ವಾಗೀಶ ಪಾಟೀಲ ಇವರಿಬ್ಬರೂ ಟಿ.ಎಸ್. ರಂಗಾ ನಿರ್ದೇಶನದ 'ಮೌನಕ್ರಾಂತಿ' ಧಾರಾವಾಹಿಯಲ್ಲಿ ಅಭಿನಯಿಸುತ್ತಿದ್ದಾರೆ. ನಟರಾಜ ಏಣಗಿ ಅವರ ನಿರ್ದೇಶನದ 'ಕಿನ್ನರಿ' ಧಾರಾವಾಹಿಯಲ್ಲಿ ವಾಗೀಶ ಪಾಟೀಲ ಅಭಿನಿಯಿಸಿದ್ದಾರೆ.

ರಂಗಭೂಮಿಯ ಭವಿಷ್ಯದ ಕುರಿತಾದ ಚಿಂತನೆ ನಡೆಯುವ ಕಾಲ ಘಟ್ಟದಲ್ಲಿ ಶಂಕರ ಮೇತ್ರೆ ಅವರು ರಂಗಭೂಮಿಗೆ ಜೀವ ತುಂಬಿದರು. ಬೆಳ್ಳಿಯ ತೆರೆಯಂತೆ ನಾಟಕ ಪ್ರಯೋಗ ಮಾಡಲು ನಿರ್ದೇಶಕರಿಗೆ, ಕಲಾವಿದರಿಗೆ, ಸಹಕರಿಸಿ ಯಶಸ್ವಿಯಾದರು. "ಇಂದಿನ ಭಾರತ" ನಾಟಕದಲ್ಲಿ ಜೀಪ್, ಕಾರ್, ವ್ಯಾನ್, ಕುದುರೆ, ನಾಯಿ, ಹಲವು ಜೀವಂತ ಪ್ರಾಣಿಗಳನ್ನು ರಂಗದ ಮೇಲೆ ತಂದರು. ನಾಟಕ ಯಶಸ್ವಿಯಾಗಲು ಶಂಕರ ಮೇತ್ರೆ ಅವರ ಇನ್ನೊಂದು ರಹಸ್ಯವಾದ ಗುಟ್ಟು ಇಲ್ಲಿದೆ. ಪ್ರತಿ ವರ್ಷ ಎಲ್ಲ ಕಲಾವಿದರಿಗೆ ಅವರ ಪಾತ್ರಗಳಿಗೆ ಬೇಕಾದ ಹೊಸ ಬಟ್ಟೆ ತರುವುದು, ಚಲನಚಿತ್ರಗಳಲ್ಲಿರುವಂತೆ ನೃತ್ಯಗಳು ರಂಗದ ಮೇಲೆ ತರುವ ಮೂಲಕ ನಾಟಕ ಕಂಪನಿ ಪ್ರಸಿದ್ಧಿ ಪಡೆಯಿತು. ದುಧನಿಯ ಹವ್ಯಾಸಿ ಶ್ರೀ ಬಾಲಾಜಿ ನಾಟ್ಯ ಸಂಘ ಬೆಳೆಸಿರುವ ಕೀರ್ತಿ ಶಂಕರ ಮೇತ್ರೆ ಹಾಗೂ ಸಾವಲಿಂಗಪ್ಪಾ ಮೇತ್ರೆ ಅವರ ಇಡೀ ಪರಿವಾರಕ್ಕೆ ಸಲ್ಲುತ್ತದೆ.

❑

# ಸೊಲ್ಲಾಪುರ ಜಿಲ್ಲೆಯ ಗ್ರಾಮೀಣ ರಂಗಕಲೆ

ಸೊಲ್ಲಾಪುರ ಜಿಲ್ಲೆ ವೃತ್ತಿರಂಗಭೂಮಿ ಹಾಗೂ ಹವ್ಯಾಸ ರಂಗಭೂಮಿಗೆ ಅಪಾರವಾದ ಸೇವೆ ಸಲ್ಲಿಸಿದೆ. ಸೊಲ್ಲಾಪುರ ಜಿಲ್ಲೆಯ ಗ್ರಾಮೀಣ ರಂಗ ಕಲೆಯ ಪ್ರಭಾವ ಬಹಳಷ್ಟಿದೆ. ಈ ಭಾಗದ ಪ್ರತಿಯೊಂದು ಗ್ರಾಮದ ದೇವರ ಜಾತ್ರೆಗಳಲ್ಲಿ ಕನ್ನಡ ಸಾಮಾಜಿಕ ನಾಟಕ ಅಭಿನಯಿಸುತ್ತಾರೆ. ಈ ಪ್ರದೇಶ ಮಹಾರಾಷ್ಟ್ರದಲ್ಲಿ ಉಳಿದರು ಸಹ ಕನ್ನಡ ನಾಟಕಗಳ ಪ್ರಭಾವ ಕಡಿಮೆಯಾಗಿಲ್ಲ.

ಗ್ರಾಮೀಣ ಪ್ರದೇಶದಲ್ಲಿ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡ ನಾಟಕ ಅಭಿನಯಿಸಿದ್ದಾರೆ. ಕೆಲವು ಕಲಾವಿದರಿಗೆ ಕನ್ನಡ ಓದಲು, ಬರೆಯಲು ಬರುವುದಿಲ್ಲ. ಮತ್ತೆ ಕೆಲವರು ಮರಾಠಿಯಲ್ಲಿ ಬರೆದುಕೊಂಡು ಉತ್ತಮವಾಗಿ ಅಭಿನಯಿಸುತ್ತಾರೆ.

ಇಂದು ಒಂದು ಸಾಮಾಜಿಕ ನಾಟಕ ಅಭಿನಯಿಸಲು ಸುಮಾರು ಒಂದು ಲಕ್ಷ ರೂಪಾಯಿ ಸಾಲುವುದಿಲ್ಲ. ನಾಟಕ ಪರಿಕರಗಳ ಬಾಡಿಗೆ, ಹೆಣ್ಣು ಮಕ್ಕಳ ಸಂಭಾವನೆ, ತರಬೇತಿಯ ನಾಟಕ ಮಾಸ್ತರ ಸಂಭಾವನೆ ಹಾಗೂ ಸಂಗೀತ ಬಳಗದ ಖರ್ಚು–ವೆಚ್ಚ ಒಂದು ಲಕ್ಷರೂಪಾಯಿ ಸಾಲುವುದಿಲ್ಲ. ಆದರೆ ಸೋಲಾಪುರ ಜಿಲ್ಲೆಯ ಗ್ರಾಮೀಣ ಭಾಗದ ರಂಗ ಕಲೆ ಪ್ರಬಲವಾಗಿ ಉಳಿಯಲು ಹಲವು ಕಾರಣಗಳಿವೆ.

ಕೆಲವು ಗ್ರಾಮೀಣ ಭಾಗದ ದೇವರ ಜಾತ್ರೆ ಆರಂಭಿಸುವಾಗ ದೇವಾಲಯದ ಪಂಚರಕಮಿಟಿಯು ನಾಟಕ ಅಭಿನಯಿಸಲು ಧನಸಹಾಯ ಮಾಡುತ್ತಾರೆ. ಕೆಲವೊಂದು ಗ್ರಾಮೀಣ ಭಾಗದಲ್ಲಿ ನಾಟಕ ಅಭಿನಯಿಸಿ ಸಂಗ್ರಹವಾದ ಹಣದಿಂದ ದೇವಾಲಯ ಜೀರ್ಣೋದ್ಧಾರ ಮಾಡಿದ್ದಾರೆ. ಬೇರೆ–ಬೇರೆ ಗ್ರಾಮದಲ್ಲಿ ನಾಟಕ ಕಲೆಯ ಮಹಾ ಪೋಷಕರು ಇರುವುದರಿಂದ ಅಲ್ಲಿ ನಾಟಕಗಳು ನಿರಂತರವಾಗಿ ಉಳಿದಿವೆ. ಸೋಲಾಪುರ ಜಿಲ್ಲೆಯ ಲಿಂಬಿಚಿಂಚೂಳಿಯ ನರೋಟೆ ಅವರು ಪ್ರತಿವರ್ಷ ನಾಟಕದ ಎಲ್ಲ ಖರ್ಚು ನೀಡುತ್ತಾರೆ. ಅವರ ನಿಧನದ ನಂತರ ಅವರ ಮಕ್ಕಳು ಖರ್ಚು ನೀಡುತ್ತಾರೆ. ಈ ರೀತಿಯ ಪ್ರಭಾವ ಸೋಲಾಪುರ ಜಿಲ್ಲೆಯ ಹಲವು ಗ್ರಾಮಗಳಲ್ಲಿ ನಾಟಕದ ಮಹಾಪೋಷಕರು ಇದ್ದಾರೆ. ಇದರಿಂದ ಸೊಲ್ಲಾಪುರ ಜಿಲ್ಲೆಯ ಗ್ರಾಮೀಣ ರಂಗಭೂಮಿ ಕಲೆ, ಉಳಿದು ಬೆಳೆದಿದೆ.

### ೧) ವಳಸಂಗ

ದಕ್ಷಿಣ ಸೋಲಾಪುರ ತಾಲೂಕಿನ ೨೫ ಕಿ.ಮಿ. ಅಂತರದಲ್ಲಿ ವಳಸಂಗ ಗ್ರಾಮವಿದೆ. ವಳಸಂಗ ಗ್ರಾಮದಲ್ಲಿ ಶ್ರೀ ಚೌಡೇಶ್ವರಿ ನಾಟ್ಯ ಸಂಘ, ಶ್ರೀ ಶಂಕರಲಿಂಗೇಶ್ವರ ನಾಟ್ಯ ಸಂಘ, ಶ್ರೀ ಸಿದ್ಧರಾಮೇಶ್ವರ ನಾಟ್ಯ ಸಂಘ, ಶ್ರೀ ಬಸವೇಶ್ವರ ನಾಟ್ಯ ಸಂಘಗಳು ಸಾವಿರಾರು ಕನ್ನಡ ಸಾಮಾಜಿಕ, ಪೌರಾಣಿಕ ಹಾಗೂ ಐತಿಹಾಸಿಕ ನಾಟಕಗಳು ಪ್ರದರ್ಶಿಸಿದ್ದಾರೆ. ವಳಸಂಗದಲ್ಲಿ ಸ್ವಾತಂತ್ರ್ಯ ದೊರೆಯುವ ಮೊದಲಿನಿಂದಲೂ ಕನ್ನಡ ನಾಟಕಗಳ ಪ್ರಭಾವವಿದೆ. ವಳಸಂಗ ಗ್ರಾಮದಲ್ಲಿ ಶ್ರೀ ಚೌಡೇಶ್ವರಿ, ಶ್ರೀ ಶಂಕರಲಿಂಗೇಶ್ವರ, ಶ್ರೀ ಬಸವೇಶ್ವರ ಜಾತ್ರೆಗಳನ್ನು ವೈಭವದಿಂದ ಆಚರಿಸುತ್ತಾರೆ.

ಬಾದಾಮಿ ಚೌಡೇಶ್ವರಿಯ ಜಾತ್ರೆಯಲ್ಲಿ 'ಶ್ರೀ ಚೌಡೇಶ್ವರಿ ನಾಟ್ಯ ಸಂಘ, ಉಗಾದಿ ಹಬ್ಬದಲ್ಲಿ, ಶ್ರೀ ಶಂಕರಲಿಂಗೇಶ್ವರ ಜಾತ್ರೆಯಲ್ಲಿ, ಶ್ರೀ ಶಂಕರಲಿಂಗೇಶ್ವರ ನಾಟ್ಯ ಸಂಘ, ಮಕರ ಸಂಕ್ರಮಣದಲ್ಲಿ ಶ್ರೀ ಸಿದ್ಧರಾಮೇಶ್ವರ ನಾಟ್ಯ ಸಂಘ, ಬಸವ ಜಯಂತಿಯಂದು ಶ್ರೀ ಬಸವೇಶ್ವರ ನಾಟ್ಯ ಸಂಘಗಳು ಪ್ರತಿವರ್ಷ ತಪ್ಪದೆ ಕನ್ನಡ ಸಾಮಾಜಿಕ ನಾಟಕಗಳು ಅಭಿನಿಯಿಸುತ್ತಾರೆ. ವಳಸಂಗದ ಎಲ್ಲ ನಾಟಕ ಕಂಪನಿಗಳಲ್ಲಿ ಸ್ಥಳೀಯ ಕಲಾವಿದರೇ ಅಭಿನಯಿಸುತ್ತಾರೆ. ವಳಸಂಗ ಗ್ರಾಮದ ವೈಶಿಷ್ಟ್ಯದಂತೆ ಎಲ್ಲ ನಾಟಕಗಳು ಪ್ರದರ್ಶಿಸಲು ಹಣಕಾಸಿನ ಸಹಾಯ ಮಾಡುತ್ತಾರೆ.

ಶ್ರೀ ಚೌಡೇಶ್ವರಿ ನಾಟ್ಯ ಸಂಘ, ಶ್ರೀ ಶಂಕಲಿಂಗೇಶ್ವರ ನಾಟ್ಯ ಸಂಘ, ಶ್ರೀ ಸಿದ್ಧರಾಮೇಶ್ವರ ನಾಟ್ಯ ಸಂಘಗಳು ತಲಾ ೨೫-೩೦ ನಾಟಕಗಳು ಪ್ರದರ್ಶಿಸಿದ್ದಾರೆ. ತಮಗೆ ಅನುಕೂಲವಾದಾಗಲೆಲ್ಲಾ ನಾಟಕಗಳು ಅಭಿನಯಿಸಿದ್ದಾರೆ.

ಶ್ರೀ ಬಸವೇಶ್ವರ ನಾಟ್ಯ ಸಂಘದಿಂದ ನಿರಂತರವಾಗಿ ಬಸವ ಜಯಂತಿಯಂದು ನಾಟಕ ಪ್ರದರ್ಶಿಸಿದ್ದಾರೆ. ಇವರು ಸುಮಾರು ೭೫ ನಾಟಕಗಳು ಪ್ರದರ್ಶಿಸಿದ್ದಾರೆ. ಈ ಕಂಪನಿಗೆ ಶ್ರೀ ಬಸವೇಶ್ವರ ದೇವಾಲಯದಿಂದ ಧನಸಹಾಯ ದೊರೆಯುತ್ತದೆ. ಶ್ರೀ ಬಸವೇಶ್ವರ ನಾಟ್ಯ ಸಂಘದ ಹಿರಿಯ ಕಲಾವಿದರಾದ ಶಿವರುದ್ರಯ್ಯ ಸ್ವಾಮಿ ಅವರು ಯುವಕರಿಗೆ ನಾಟಕ ತರಬೇತಿ ನೀಡುತ್ತಾರೆ. ವಳಸಂಗ ಗ್ರಾಮದಲ್ಲಿ ಕನ್ನಡ ನಾಟಕಗಳ ಪ್ರಭಾವ ಬಹಳಷ್ಟಿದೆ. ಶ್ರೀ ಬಸವೇಶ್ವರ ರಂಗಭೂಮಿ ವೇದಿಕೆಯಲ್ಲಿ ಸೊಲ್ಲಾಪುರ ಜಿಲ್ಲೆಯ ಕನ್ನಡ ರಂಗಭೂಮಿ ಮಾಲಿಕೆ ಯಶಸ್ವಿಯಾಗಿದೆ.

### ೨) ಆಚೆಗಾಂವ

ದಕ್ಷಿಣ ಸೊಲ್ಲಾಪುರ ತಾಲೂಕಿನಲ್ಲಿ ಆಚೆಗಾಂವ ಗ್ರಾಮವಿದೆ. ಈ ಗ್ರಾಮದ ದೇವರಾದ ಶ್ರೀ ಶಾವರಸಿದ್ಧ ದೇವರ ಜಾತ್ರೆ ವೈಭವದಿಂದ ಆಚರಿಸುತ್ತಾರೆ. ಈ ದೇವಾಲಯದ ಕಮಿಟಿಯ ಆಶ್ರಯದಲ್ಲಿ ಶ್ರೀ ಶಾವರಸಿದ್ಧ ನಾಟ್ಯ ಸಂಘವಿದೆ.

ರಂಗಭೂಮಿ ಕಲಾವಿದ ಪ್ರಭಾಕರ ವಾಗದರಿ ಅವರು ಈ ಸಂಘದ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ. ಶ್ರೀ ಶಾವರಸಿದ್ಧ ನಾಟ್ಯ ಸಂಘದಿಂದ ನೂರಾರು ಸಾಮಾಜಿಕ ನಾಟಕ ಪ್ರದರ್ಶಿಸಿದ್ದಾರೆ.

ತವರು ಮನೆ, ಸತ್ಯಮೇವ ಜಯತೆ, ಧನಿಕರ ದೌರ್ಜನ್ಯ, ಕನಿಕರ ಇಲ್ಲದ ಧನಿಕರು, ಆದರ್ಶ ಪ್ರೇಮ, ದೇವರ ಆಟ ಬಲ್ಲವರು ಯಾರು? ಸ್ತ್ರೀರತ್ನ, ರತ್ನ ಮಾಂಗಲ್ಯ, ತಾಯಿಯ ಕರುಳು, ದೇವರು ಕೊಟ್ಟ ಮಗ, ಮಾತು ಬಿದ್ದಿತು ಮೌನ ಗೆದ್ದಿತು, ಬಡವ ಬದುಕಲೇಬೇಕು, ಹೆಜ್ಜೆ ತಪ್ಪಿದ ಹೆಣ್ಣು, ಶ್ರೀಮಂತನ ಸೊಕ್ಕು ಮುಂತಾಗಿ ನೂರಾರು ಸಾಮಾಜಿಕ ನಾಟಕಗಳನ್ನು ಆಚೆಗಾಂವ ಗ್ರಾಮದಲ್ಲಿ ಪ್ರದರ್ಶಿಸಲಾಗಿದೆ. ಆಚೆಗಾಂವ ಕನ್ನಡ ರಂಗಭೂಮಿಗೆ ಹಲವಾರು ಕಲಾವಿದರು ಸೇವೆ ಸಲ್ಲಿಸಿದ್ದಾರೆ.

### ೩) ವಡಗಾಂವ

ದಕ್ಷಿಣ ಸೋಲಾಪುರ ತಾಲೂಕಿನಲ್ಲಿ ವಡಗಾಂವ ಗ್ರಾಮವಿದೆ. ಈ ಗ್ರಾಮದಲ್ಲಿ ಶ್ರೀ ಮಲ್ಲಿಕಾರ್ಜುನ ದೇವರ ಜಾತ್ರೆ ವೈಭವದಿಂದ ಆಚರಿಸುತ್ತಾರೆ. ವಡಗಾಂವದ ಶ್ರೀ ಜಯ ಹನುಮಾನ ನಾಟ್ಯ ಸಂಘ ನೂರಾರು ನಾಟಕಗಳು ಅಭಿನಯಿಸಿದ್ದಾರೆ. ರಂಗಭೂಮಿ ಕಲಾವಿದ ಪ್ರಭಾಕರ ವಾಗದರಿ ಅವರು ಈ ಸಂಘದ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ.

ಅಣ್ಣ ಕೊಟ್ಟ ಮಾಂಗಲ್ಯ, ಸಿಡಿದೆದ್ದ ಶಿವಶಕ್ತಿ, ದೈವ ಗೆದ್ದವರು, ಧನಿಕರ ದೌರ್ಜನ್ಯ, ಬಡವ ಬದುಕಲೇಬೇಕು, ಮಾಂಗಲ್ಯ ಯಾರದು? ಮಡದಿ ಯಾರಿಗೆ? ಸೌಭಾಗ್ಯಲಕ್ಷ್ಮಿ, ಮಗ ತಂದ ಮಾಂಗಲ್ಯ, ಗರತಿ ಹೆಣ್ಣಿಗೆ ಗರ್ವದ ಗಂಡ, ಬೆಂಕಿಯಲ್ಲಿ ಅರಳಿದ ಹೂವು, ಸಮಾಜಕ್ಕೆ ಶಿಕ್ಷೆ, ಅಣ್ಣನ ಒಡಲು ಬಂಗಾರಕ್ಕೆ ಕೊಡಲು ಮುಂತಾಗಿ ನೂರಾರು ಸಾಮಾಜಿಕ ನಾಟಕಗಳು ಪ್ರದರ್ಶಿಸಿದ್ದಾರೆ. ವಡಗಾಂವ ಕನ್ನಡ ರಂಗಭೂಮಿಗೆ ಹಲವು ಕಲಾವಿದರ ಕೊಡುಗೆ ಅಪಾರವಾಗಿದೆ.

### ೪) ದಕ್ಷಿಣ ಸೊಲ್ಲಾಪುರ ನಗರ

ಹವ್ಯಾಸಿ ರಂಗಭೂಮಿ ಕಲಾವಿದರಾದ ಈರಣ್ಣ ನಾಡಿಗಾರ, ನೀಲಕಂಠ ವಿಭೂತೆ ಹಲವು ಕಲಾವಿದರ ತಂಡ ದಕ್ಷಿಣ ಸೊಲ್ಲಾಪುರ ನಗರದಲ್ಲಿ 'ಶ್ರೀ ಸಿದ್ಧರಾಮೇಶ್ವರ ನಾಟ್ಯ ಸಂಘ'ದಿಂದ ಪ್ರತಿವರ್ಷ ೩-೪ ಸಾಮಾಜಿಕ ನಾಟಕಗಳನ್ನು ಪ್ರದರ್ಶಿಸುತ್ತಾರೆ. ದವಾಣಿ ರಂಗ ಮಂದಿರ, ಲಿಂಗಶೆಟ್ಟಿ ರಂಗಮಂದಿರ ಹಾಗೂ ಹುತಾತ್ಮ ರಂಗಮಂದಿರಗಳಲ್ಲಿ ಇವರು ನಾಟಕ ಪ್ರದರ್ಶಿಸಿದ್ದಾರೆ. ಮಾಶಾಳದ ಮಲ್ಲಿನಾಥ ಆಲೆಗಾಂವ ಅವರ ಗರಡಿಯಲ್ಲಿ ಇವರು ಬೆಳೆದಿದ್ದಾರೆ.

ಸಾಕ್ಷರತಾ ಸಾಫಲ್ಯ, ಬಾಳು ಬೆಳಗಿತು, ಪಂಕಜ, ಬಂಜೆ ತೊಟ್ಟಿಲು, ಕಣ್ಣಿದ್ದು ಕುರುಡ, ಬಸ ಹಮಾಲ, ಹೆಣ್ಣಿನ ಜೀವನ, ದೇವರಿಗೆ ನೆನಪಿಲ್ಲ, ಮಗಳ ಮಾರಾಟ, ಅಳಿಯ ದೇವರು, ಶಂಖವಾದ್ಯ, ಬಸ್ ಕಂಡಕ್ಟರ್, ತಾಯಿಯ ಕರುಳು, ಕಲಿತ ಕಳ್ಳಿ, ಬಡವನ ಭವಿಷ್ಯ, ದಾರಿ ದೀಪ, ಗರುಡ ರಾಜ್ಯದಲ್ಲಿ ಘಟಸರ್ಪ, ಸಿಡಿದೆದ್ದ ಶಿವಶಕ್ತಿ, ಅಣ್ಣ ಕೊಟ್ಟ ಮಾಂಗಲ್ಯ ಮುಂತಾಗಿ ನೂರಾರು ಸಾಮಾಜಿಕ ನಾಟಕಗಳನ್ನು ದಕ್ಷಿಣ ಸೊಲ್ಲಾಪುರ ನಗರದಲ್ಲಿ ಪ್ರದರ್ಶಿಸಿದ್ದಾರೆ ಇವರು ಸುಸಜ್ಜಿತವಾದ ಸೊಲ್ಲಾಪುರದ ಎಲ್ಲ ರಂಗಮಂದಿರಗಳಲ್ಲಿ ನಾಟಕ ಪ್ರದರ್ಶಿಸಿದ್ದಾರೆ. ಸೋಲಾಪುರ ನಗರದಲ್ಲಿ ಕನ್ನಡ ನಾಟಕ ವೀಕ್ಷಿಸಲು ತಂಡೋಪ ತಂಡವಾಗಿ ಜಾತ್ರೆಗೆ ಆಗಮಿಸಿದಂತೆ ಜನ ಬರುತ್ತಾರೆ. ನಾಟಕ ಪ್ರದರ್ಶನದ ಸಮಯದಲ್ಲಿ ರಂಗಮಂದಿರದ ಹತ್ತಿರ ಸೊಲ್ಲಾಪುರ ಮಹಾನಗರಪಾಲಿಕೆಯ ವಿಶೇಷವಾದ ಬಸ್ಸುಗಳ ಸೌಕರ್ಯವಿರುತ್ತದೆ. ನಮ್ಮ ಕಲಾವಿದರು ಇಲ್ಲಿ ಒಂದು ಸಮಸ್ಯೆ ಅನುಭವಿಸುತ್ತಾರೆ. ನಾನು ಇವರ ಹಲವು ನಾಟಕ ವೀಕ್ಷಿಸಲು ಹೋಗಿದ್ದೇನೆ. ಸೊಲ್ಲಾಪುರದ ಸುಸಜ್ಜಿತವಾದ ರಂಗಮಂದಿರಗಳನ್ನು ಕೇವಲ ಮೂರು ಗಂಟೆಯ ಸಲುವಾಗಿ ಬಾಡಿಗೆಗೆ ಕೊಡುತ್ತಾರೆ. ಕನ್ನಡ ಸಾಮಾಜಿಕ ನಾಟಕಗಳು ಸಮಯಕ್ಕೆ ಸರಿಯಾಗಿ ಮುಗಿಯುವುದಿಲ್ಲ. ಸೊಲ್ಲಾಪುರ ಕನ್ನಡ ರಂಗಭೂಮಿ ಮಾಲಿಕೆಯಲ್ಲಿ ಸೊಲ್ಲಾಪುರ ಮಹಾನಗರ ಪಾಲಿಕೆಯ ನಗರ ಸೇವಕರಾದ ಚಂದ್ರಕಾಂತ ರಮಣಶೆಟ್ಟಿ ಅವರಿಗೆ ಈ ಸಮಸ್ಯೆ ಬಗೆಹರಿಸಲು ಮನವಿ ಮಾಡಲಾಗಿದೆ. ದಕ್ಷಿಣ ಸೊಲ್ಲಾಪುರ ನಗರದಲ್ಲಿ ಕನ್ನಡ ರಂಗಭೂಮಿಗೆ ಹಲವಾರು ಕಲಾವಿದರ ಕೊಡುಗೆ ಅಪಾರವಾಗಿದೆ.

### ೫) ಭಾರತರತ್ನ ಇಂದಿರಾ ನಗರ, ಸೊಲ್ಲಾಪುರ

ಭಾರತರತ್ನ ಇಂದಿರಾ ನಗರದಲ್ಲಿ ಶ್ರೀ ಶರಣ ಶಿವಲಿಂಗೇಶ್ವರ ನಾಟ್ಯ ಸಂಘವಿದೆ. ಇವರು ಪ್ರತಿ ವರ್ಷ ತಪ್ಪದೆ ಕನ್ನಡ ಸಾಮಾಜಿಕ ನಾಟಕ ಪ್ರದರ್ಶಿಸುತ್ತಾರೆ. ಈ ಪ್ರದೇಶದಲ್ಲಿ ಕನ್ನಡದ ಸಂಸ್ಕೃತಿಯ ಪ್ರಭಾವ ಬಹಳಷ್ಟಿದೆ.

ತಂಗಿಯ ಮನೆ, ಅಣ್ಣ-ತಮ್ಮ, ಅತ್ತಿಗೆ, ಕಲಿತಕಳ್ಳ, ಖಳನಾಯಕ ನೀನಲ್ಲ, ಎಚ್ಚರ ತಂಗಿ ಎಚ್ಚರ, ಚಿನ್ನದಗೊಂಬೆ, ರತ್ನಮಾಂಗಲ್ಯ, ಸತಿಸಂಸಾರದ ಜ್ಯೋತಿ, ಕೆಟ್ಟ ಮೇಲೆ ಬುದ್ಧಿ ಬಂತು, ಧರ್ಮದ ಕಣ್ಣೀರು ಮುಂತಾಗಿ ನೂರಾರು ಸಾಮಾಜಿಕ ನಾಟಕಗಳು ಇವರು ಪ್ರದರ್ಶಿಸಿದ್ದಾರೆ. ಈ ರಂಗಭೂಮಿ ವೇದಿಕೆಯಿಂದಲೇ ವಿಜಯಕುಮಾರ ಹಲಕಟ್ಟಿ ಅವರು ವೃತ್ತಿರಂಗಭೂಮಿ ಪ್ರವೇಶ ಮಾಡಿದರು. ಕರ್ನಾಟಕ ನಾಟಕ ಅಕಾಡೆಮಿಯ ಪ್ರಶಸ್ತಿ ವಿಜೇತರಾದ ಬಿ.ಬಿ. ಜೇವೂರ ಇಲ್ಲಿ ವಾಸವಾಗಿರುವುದರಿಂದ ಅವರ ಪ್ರಭಾವವಿದೆ. ಸೋಮಶೇಖರ ನಾವದಗಿ ಅವರು ಯುವ ರಂಗಭೂಮಿ ಕಲಾವಿದರಿಗೆ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

**೬) ನೀಲಮನಗರ ಎಸ್.ಐ.ಡಿ.ಸಿ. ಸೊಲ್ಲಾಪುರ**

ಸೊಲ್ಲಾಪುರದ ಶ್ರೀ ಸದ್ಗುರು ರೇವಣಸಿದ್ಧ ನಾಟ್ಯ ಸಂಘ ನೀಲಮನಗರದಲ್ಲಿ ಹಲವು ಸಾಮಾಜಿಕ ನಾಟಕಗಳು ಪ್ರದರ್ಶಿಸಿದ್ದಾರೆ. ಸಿದ್ದಪ್ಪ ನಾಲವಾರ, ಶಂಕರ ದೊಡ್ಡಮನಿ, ಮಲ್ಲಿಕಾರ್ಜುನ ಬಳೂರಗಿ, ಪ್ರಕಾಶ ಜೋಣಿ ಹೀಗೆ ಹಲವು ಕಲಾವಿದರು ನೂರಾರು ಸಾಮಾಜಿಕ ನಾಟಕಗಳು ಅಭಿನಯಿಸಿದ್ದಾರೆ.

**೭) ಮಂದ್ರೂಪ**

ದಕ್ಷಿಣ ಸೋಲಾಪುರ ತಾಲ್ಲೂಕಿನಲ್ಲಿ ಮಂದ್ರೂಪ ಗ್ರಾಮವಿದೆ. ಶ್ರೀ ಮಲ್ಲಿಕಾರ್ಜುನ ಕುಂಭಾರ ಅವರ ಶ್ರೀ ವೀರಭದ್ರೇಶ್ವರ ನಾಟ್ಯ ಸಂಘವಿದೆ. ಗ್ರಾಮದೇವರಾದ ಶ್ರೀ ಮಳಸಿದ್ದ ಹಾಗೂ ಚೌಡೇಶ್ವರಿ ಜಾತ್ರೆಯಲ್ಲಿ ಇವರು ಹಲವು ನಾಟಕಗಳು ಅಭಿನಯಿಸಿದ್ದಾರೆ. ಧನಿಕರ ದೌರ್ಜನ್ಯ, ಸೇಡಿನ ದುರಂತ, ಗೌರಿ ಗೆದ್ದಳು, ಗರುಡ ರಾಜ್ಯದಲ್ಲಿ ಘಟಸರ್ಪ ಮುಂತಾಗಿ ಹಲವು ಸಾಮಾಜಿಕ ನಾಟಕಗಳು ಅಭಿನಯಿಸಿದ್ದಾರೆ. ಮಂದ್ರೂಪ ಗ್ರಾಮದಲ್ಲಿ ನೂರಾರು ರಂಗಭೂಮಿ ಕಲಾವಿದರಿದ್ದಾರೆ.

**೮) ಬೂರಿ ಉಂಬರಗಿ**

ಅಕ್ಕಲಕೋಟ ತಾಲೂಕಿನ ಬೂರಿ ಉಂಬರಗಿ ಗ್ರಾಮದಲ್ಲಿ ಎರಡು ನಾಟ್ಯ ಸಂಘಗಳಿವೆ. ಶ್ರೀ ಬಸವೇಶ್ವರ ನಾಟ್ಯ ಸಂಘ ಹಾಗೂ ಶ್ರೀ ಲಕ್ಷ್ಮಿ ನಾಟ್ಯ ಸಂಘಗಳಿಂದ ನೂರಾರು ನಾಟಕಗಳು ಪ್ರದರ್ಶಿಸಲಾಗಿದೆ. ಬೂರಿ ಉಂಬರಗಿ ಗ್ರಾಮದಲ್ಲಿ ಶ್ರೀ ಬಸವೇಶ್ವರ ಹಾಗೂ ಶ್ರೀ ಲಕ್ಷ್ಮಿ ದೇವರ ಜಾತ್ರೆಗಳಲ್ಲಿ ಕನ್ನಡ ನಾಟಕಗಳು ಅಭಿನಯಿಸುತ್ತಾರೆ.

ಮಹಕಾರಿ, ಬಡವನ ಗೋಳು, ಗರತಿಗೆ ಗತಿ ಯಾರು, ಗೌಡ ನಗಲಿಲ್ಲ, ಸರಕಾರ ಉಳಿಯಲಿಲ್ಲ, ಪಾಪದ ತಂದೆ – ಪುಣ್ಯದ ಮಗ, ಮಗ ಹೋದರೂ ಮಾಂಗಲ್ಯ ಬೇಕು, ಬಸ ಹಮಾಲ, ಗುಣ ನೋಡಿ ತಾಳಿ ಕಟ್ಟು, ದನಿಕರ ದೌರ್ಜನ್ಯ, ಸ್ತ್ರೀರತ್ನ, ಗಂಡನ ಮಾನ – ಕಾರಸ್ಥಾನ, ಕನಿಕರ ಇಲ್ಲದ ಧನಿಕರು, ಸಮಾಜಕ್ಕೆ ಶಿಕ್ಷೆ, ಗರತಿ ಹೆಣ್ಣಿಗೆ ಗರ್ವದ ಗಂಡ ಮುಂತಾಗಿ ಹಲವು ಸಾಮಾಜಿಕ ನಾಟಕಗಳ ಮೂಲಕ ನೂರಾರು ಕನ್ನಡ ರಂಗಭೂಮಿ ಕಲಾವಿದರು ಬೆಳೆದಿದ್ದಾರೆ.

**೯) ಮಿರಜಗಿ**

ಅಕ್ಕಲಕೋಟ ತಾಲೂಕಿನಲ್ಲಿ ಮಿರಜಗಿ ಗ್ರಾಮವಿದೆ. ಮಿರಜಗಿಯ ಶ್ರೀ ಸಿದ್ಧರಾಮೇಶ್ವರ ನಾಟ್ಯ ಸಂಘದಿಂದ ನೂರಾರು ಸಾಮಾಜಿಕ ನಾಟಕಗಳು ಪ್ರದರ್ಶಿಸಿದ್ದಾರೆ. ಮಿರಜಗಿಯ ಗ್ರಾಮದೇವರಾದ ಶ್ರೀಸಿದ್ಧರಾಮೇಶ್ವರ ಮಕರ

ಸಂಕ್ರಮಣದ ಜಾತ್ರೆಯಲ್ಲಿ ಪ್ರತಿ ವರ್ಷ ತಪ್ಪದೆ ನಾಟಕ ಅಭಿನಯಿಸುತ್ತಾರೆ. ಮಿರಜಗಿಯಲ್ಲಿ ಕನ್ನಡ ಶಾಲೆ ಇಲ್ಲದ ಕಾರಣ ಇವರು ಮರಾಠಿ ಕಲಿತಿದ್ದಾರೆ. ಕನ್ನಡ ನಾಟಕ ಅಭಿನಯಿಸಲು ಇವರು ಮರಾಠಿಯಲ್ಲಿ ಸಂಗೀತ ಬರೆದುಕೊಂಡು ಕನ್ನಡ ಸಾಮಾಜಿಕ ನಾಟಕ ಅಭಿನಯಿಸುತ್ತಾರೆ.

ರತ್ನಮಾಂಗಲ್ಯ, ಮಂಗಲಾ ನನ್ನ ಅತ್ತಿಗೆ, ಸೂಳಿಗೆ ಏನು ಗೊತ್ತು ತಾಳಿಯ ಕಿಮ್ಮತ್ತು, ಗರುಡ ರಾಜ್ಯದಲ್ಲಿ ಘಟಸರ್ಪ, ಅಣ್ಣ ಕೊಟ್ಟ ಮಾಂಗಲ್ಯ, ಗರತಿ ಹೆಣ್ಣಿಗೆ ಗರ್ವದ ಗಂಡ ಮುಂತಾಗಿ ನೂರಾರು ಸಾಮಾಜಿಕ ನಾಟಕಗಳು ಇವರು ಅಭಿನಯಿಸಿದ್ದಾರೆ.

### ೧೦) ಕೊನ್ನಳ್ಳಿ

ಅಕ್ಕಲಕೋಟ ತಾಲೂಕಿನಲ್ಲಿ ಕೊನ್ನಳ್ಳಿ ಗ್ರಾಮವಿದೆ. ಕೊನ್ನಳ್ಳಿ ಗ್ರಾಮದ ಶ್ರೀ ಸಿದ್ಧರಾಮೇಶ್ವರ ನಾಟ್ಯ ಸಂಘದಿಂದ ನೂರಾರು ನಾಟಕಗಳು ಪ್ರದರ್ಶಿಸಿದ್ದಾರೆ. ಕೊನ್ನಳ್ಳಿ ಗ್ರಾಮದ ದೇವರಾದ ಲಕ್ಷ್ಮಿದೇವಿ ಜಾತ್ರೆಯಲ್ಲಿ ಪ್ರತಿ ವರ್ಷ ತಪ್ಪದೆ ನಾಟಕ ಅಭಿನಯಿಸಿದ್ದಾರೆ.

ಬಂಜೆ ತೊಟ್ಟಿಲು, ಪತಿಭಕ್ತಿ, ಬಸಹಮಾಲ ಕಣ್ಣಿಟ್ಟ ಹೆಣ್ಣು, ದಾರಿದೀಪ, ಸಂಗಮ, ಚಿನ್ನದಗೊಂಬೆ, ದಸರಾ, ಕಲಿತ ಕಳ್ಳ, ದೀಪಾ, ಸತಿ ಸಂಸಾರದ ಜ್ಯೋತಿ, ಆಶಾಲತಾ, ದೀಪಾವಳಿ, ಶಿವಶಕ್ತಿ, ಬಡವ ಬದುಕಲೇಬೇಕು. ಸತಿಯ ಸೌಭಾಗ್ಯ, ರತ್ನ ಮಾಂಗಲ್ಯ, ಕಳ್ಳ ಕಟ್ಟಿದ ತಾಳಿ, ಕಾರಸ್ಥಾನ, ಗರುಡ ರಾಜ್ಯದಲ್ಲಿ ಘಟಸರ್ಪ, ಸಿಡಿದೆದ್ದ ಶಿವಶಕ್ತಿ, ಮಗ ತಂದ ಮಾಂಗಲ್ಯ ಮುಂತಾಗಿ ನೂರಾರು ಸಾಮಾಜಿಕ ನಾಟಕಗಳು ಇವರು ಅಭಿನಯಿಸಿದ್ದಾರೆ. ಸಿದ್ಧಾರಾಮ ಹೆಬಳೆ ಅವರ ಗರಡಿಯಲ್ಲಿ ಹಲವು ಕಲಾವಿದರು ಬೆಳೆದಿದ್ದಾರೆ.

### ೧೧) ಇಬ್ರಾಹಿಂಪುರ

ಅಕ್ಕಲಕೋಟ ತಾಲೂಕಿನಲ್ಲಿ ಇಬ್ರಾಹಿಂಪುರ ಗ್ರಾಮವಿದೆ. ಇಬ್ರಾಹಿಂಪುರದ ಶ್ರೀ ಮಹಾಂತೇಶ್ವರ ನಾಟ್ಯ ಸಂಘವಿದೆ. ಉಗಾದಿ ಹಬ್ಬದ ೯ನೇ ದಿವಸ ಶ್ರೀ ಮಹಾಂತೇಶ್ವರ ಜಾತ್ರೆ ಆಚರಿಸುತ್ತಾರೆ. ಈ ಸಂಘದಿಂದ ನೂರಾರು ನಾಟಕಗಳು ಪ್ರದರ್ಶಿಸಿದ್ದಾರೆ.

ಬಡವ ಬದುಕಲೇಬೇಕು, ಕಳ್ಳ ಕಟ್ಟಿದ ತಾಳಿ, ಮಗ ಹೋದರು ಮಾಂಗಲ್ಯ ಬೇಕು, ಗರುಡ ರಾಜ್ಯದಲ್ಲಿ ಘಟಸರ್ಪ, ಗರತಿ ಹೆಣ್ಣಿಗೆ ಗರ್ವದ ಗಂಡ, ಅತ್ತಿಗೆ ಹೆತ್ತಮ್ಮ, ಸತಿ ಸಂಸಾರದ ಜ್ಯೋತಿ, ಮರಳಿ ಬಂದ ಮಾಂಗಲ್ಯ, ಮಡದಿ ಯಾರು–ಮಾಂಗಲ್ಯ ಯಾರದು? ನೂರಾರು ನಾಟಕಗಳು ಅಭಿನಯಿಸಿದ್ದಾರೆ. ನಿಂಬಾಳದ

ಪರಮೇಶ್ವರ ತಂಡ ಅವರ ಗರಡಿಯಲ್ಲಿ ಹಲವು ಕಲಾವಿದರು ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಇಬ್ರಾಹಿಪುರದ ವಿರಕ್ತಮಠದ ಪೀಠಾಧಿಪತಿಗಳಾದ ಶ್ರೀ ಮಹಾಂತೇಶ ಮಹಾಸ್ವಾಮಿಗಳು ರಂಗವೇದಿಕೆಗೆ ಆಗಮಿಸಿ ಚಾಲನೆ ನೀಡಿದಾಗ ನಾಟಕ ಪ್ರಾರಂಭವಾಗುತ್ತದೆ.

## ೧೨) ತೋಳನೂರ

ಅಕ್ಕಲಕೋಟ ತಾಲೂಕಿನಲ್ಲಿರುವ ತೋಳನೂರ ಗ್ರಾಮದಲ್ಲಿ ಎರಡು ನಾಟ್ಯ ಸಂಘಗಳಿವೆ. ತೋಳನೂರ ಗ್ರಾಮದ ಶ್ರೀ ಸಿದ್ದರಾಮೇಶ್ವರ ಜಾತ್ರೆಯಲ್ಲಿ ನಾಟಕ ಅಭಿನಯಿಸುತ್ತಾರೆ. ಶ್ರೀ ಸಿದ್ಧರಾಮೇಶ್ವರ ನಾಟ್ಯ ಸಂಘ ಹಾಗೂ ಶ್ರೀ ಬಸವೇಶ್ವರ ನಾಟ್ಯಸಂಘದಿಂದ ನೂರಾರು ನಾಟಕಗಳು ಅಭಿನಯಿಸಲಾಗಿದೆ. ತೋಳನೂರ ಗ್ರಾಮ ಕಲಾವಿದರ ತವರೂರು. ರಂಗಭೂಮಿ ಕಲಾವಿದರು, ನಿರ್ದೇಶಕರು ಹಾಗೂ ನಾಟಕ ರಚನಕಾರರಿದ್ದಾರೆ. ಬಡತನದ ಭೂತ, ಅಕ್ಷಯಾಂಬರ, ಕುರುಕ್ಷೇತ್ರ, ಲಂಕಾದಹನ, ಕುಂಕುಮ, ಸೌಭಾಗ್ಯಲಕ್ಷ್ಮಿ, ಹೆಣ್ಣಿನ ಜೀವನ, ಚಿನ್ನದ ಗೊಂಬೆ. ಶ್ರೀ ಸಿದ್ಧರಾಮೇಶ್ವರ, ರಕ್ತರಾತ್ರಿ, ಸಂಗೊಳ್ಳಿರಾಯಣ್ಣ ನೂರಾರು ಸಾಮಾಜಿಕ ನಾಟಕಗಳು ಅಭಿನಯಿಸಲಾಗಿದೆ. ಕರ್ನಾಟಕ ನಾಟಕ ಅಕಾಡೆಮಿ ಪುರಸ್ಕೃತ ನಾಟಕಕಾರ ಬಿ.ಬಿ. ಜೇವೂರ ಅವರ ಜನ್ಮಭೂಮಿ ತೋಳನೂರ. ಹೀಗಾಗಿ ತೋಳನೂರ ಗ್ರಾಮದ ಎಲ್ಲ ನಾಟಕಗಳ ನಿರ್ದೇಶಕರಾಗಿ ಬಿ.ಬಿ. ಜೇವೂರ ಅವರು ಸೇವೆ ಸಲ್ಲಿಸಿದ್ದಾರೆ.

## ೧೩) ಕಳ್ಳ ಸಲಗರ

ಅಕ್ಕಲಕೋಟ ತಾಲೂಕಿನಲ್ಲಿ ಕಳ್ಳ ಸಲಗರ ಗ್ರಾಮವಿದೆ. ಕಳ್ಳ ಸಲಗರ ಗ್ರಾಮದಲ್ಲಿ ಎರಡು ನಾಟ್ಯ ಸಂಘಗಳಿವೆ. ಶ್ರೀ ಜಯ ಹನುಮಾನ ಹಾಗೂ ಶ್ರೀ ಸೋಮೇಶ್ವರ. ಈ ಗ್ರಾಮದ ಹನುಮಾನ ಹಾಗೂ ಸೋಮೇಶ್ವರ ಜಾತ್ರೆಗಳಲ್ಲಿ ಪ್ರತಿವರ್ಷ ತಪ್ಪದೆ ನಾಟಕ ಅಭಿನಯಿಸುತ್ತಾರೆ.

ಅತ್ತಿಗೆಗೆ ಬಂದ ಅಗ್ನಿಪರೀಕ್ಷೆ, ತಾಯಿಗೆ ಮಗನ್ಯಾರು, ಕಲಿಯುಗದ ಭೀಮ, ತಾಳಿಯಿಲ್ಲದೆ ತಾಯಿಯಾದೆ, ಅಣ್ಣನ ಒಡಲು – ಬಂಗಾರದ ಕಡಲು, ಮಗ ತಂದ ಮಾಂಗಲ್ಯ, ಅಣ್ಣ ತಂಗಿ, ಸಂಗಮ, ಗರುಡ ರಾಜ್ಯದಲ್ಲಿ ಘಟಸರ್ಪ, ಚಿನ್ನದ ಗೊಂಬೆ, ಗೌರಿ ಗೆದ್ದಳು, ಸೇಡಿನ ದುರಂತ, ಮಗಹೋದರೂ ಮಾಂಗಲ್ಯ ಬೇಕು. ಧನಿಕರ ದೌರ್ಜನ್ಯ ಮುಂತಾಗಿ ಹಲವು ಸಾಮಾಜಿಕ ನಾಟಕ ಅಭಿನಯಿಸಿದ್ದಾರೆ. ಸಂಜಯ ಸಮಾಣಿ ಹಾಗೂ ಕವಿ ಅಣ್ಣಪ್ಪ ಕಾಲಿಭತ್ತೆ ಅವರು ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ.

### ೧೪) ಕರಜಗಿ

ಅಕ್ಕಲಕೋಟ ತಾಲೂಕಿನ ಕರಜಗಿ ಗ್ರಾಮದಲ್ಲಿ ಶ್ರೀ ಬಸವೇಶ್ವರ ನಾಟ್ಯ ಸಂಘವಿದೆ. ಇವರು ಹಲವು ನಾಟಕಗಳು ಪ್ರದರ್ಶಿಸಿದ್ದಾರೆ. ಸಂಗಮ, ಬಂಗಾರದ ಗುಡಿ, ದಾರಿ ದೀಪ, ಹುಚ್ಚ ಹಚ್ಚಿದ ದೀಪ, ಹೆಣ್ಣಿನ ಕಣ್ಣೀರು ಹಲವು ಸಾಮಾಜಿಕ ನಾಟಕಗಳು ಇವರು ಅಭಿನಯಿಸಿದ್ದಾರೆ. ಮಹಾದೇವಪ್ಪ ಕಟಾರೆ ಅವರು ಈ ಗ್ರಾಮದ ನಾಟಕ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ.

### ೧೫) ಶಿರವಳ

ಅಕ್ಕಲಕೋಟ ತಾಲೂಕಿನಲ್ಲಿ ಶಿರವಳ ಗ್ರಾಮವಿದೆ. ಶಿರವಳದ ಶ್ರೀ ಪಂಚಲಿಂಗೇಶ್ವರ ನಾಟ್ಯ ಸಂಘವಿದೆ. ಶಿರವಳ ಗ್ರಾಮದ ಶ್ರೀ ಪಂಚಲಿಂಗೇಶ್ವರ ಜಾತ್ರೆ ಪ್ರತಿ ವರ್ಷ ವೈಭವದಿಂದ ಆಚರಿಸುತ್ತಾರೆ. ಅಕ್ಷಯ ತೃತೀಯಾ ನಂತರ ಬರುವ ಸೋಮವಾರ ಜಾತ್ರೆ ನಡೆಯುತ್ತದೆ.

ಸತಿ ಸಂಸಾರದ ಜ್ಯೋತಿ, ಪ್ರಾಣ ಹೋದರೂ ಮೌನ ಬೇಕು, ಗೌರಿ ಗೆದ್ದಳು, ಧನಿಕರ ದೌರ್ಜನ್ಯ, ಗರುಡ ರಾಜ್ಯದಲ್ಲಿ ಘಟಸರ್ಪ, ನೂರಾರು ಸಾಮಾಜಿಕ ನಾಟಕ ಅಭಿನಯಿಸಿದ್ದಾರೆ.

### ೧೬) ತೋರಣಿ

ಅಕ್ಕಲಕೋಟ ತಾಲೂಕಿನಲ್ಲಿ ತೋರಣಿ ಗ್ರಾಮವಿದೆ. ತೋರಣಿ ಗ್ರಾಮದ ಶ್ರೀ ಗಾಳೇಶ್ವರ ನಾಟ್ಯ ಸಂಘದಿಂದ ಹಲವು ನಾಟಕಗಳು ಪ್ರದರ್ಶಿಸಿದ್ದಾರೆ. ವಿಷ ಸರ್ಪದ ಸಂಚು, ಗರುಡ ರಾಜ್ಯದಲ್ಲಿ ಘಟಸರ್ಪ, ಅಣ್ಣ ಕೊಟ್ಟ ಮಾಂಗಲ್ಯ ಹಲವು ಸಾಮಾಜಿಕ ನಾಟಕಗಳು ಅಭಿನಯಿಸಲಾಗಿದೆ.

### ೧೭) ಭೋಸಗಾ

ಅಕ್ಕಲಕೋಟ ತಾಲೂಕಿನಲ್ಲಿ ಭೋಸಗಾ ಗ್ರಾಮವಿದೆ. ಭೋಸಗಾ ಗ್ರಾಮದಲ್ಲಿ ಶ್ರೀ ಮಲ್ಲಿಕಾರ್ಜುನ ನಾಟ್ಯ ಸಂಘವಿದೆ. ಈ ಗ್ರಾಮದೇವರಾದ ಶ್ರೀ ಮಲ್ಲಿಕಾರ್ಜುನನ ಜಾತ್ರೆಯಲ್ಲಿ ನಾಟಕ ಅಭಿನಯಿಸುತ್ತಿದ್ದಾರೆ.

ತಾಯಿಗೆ ಮಗನ್ಯಾರು, ಅತ್ತಿಗೆಗೆ ಬಂದ ಅಗ್ನಿ ಪರೀಕ್ಷೆ, ಕಲಿಯುಗದ ಭೀಮ, ಹಯವದನ, ಕುರುಕ್ಷೇತ್ರ, ಅಣ್ಣ-ತಂಗಿ ಹಲವು ಸಾಮಾಜಿಕ ನಾಟಕ ಅಭಿನಯಿಸಿದ್ದಾರೆ. ದತ್ತಾ ಅಣ್ಣಾಡೊಂಗರೆ ಅವರು ಇಲ್ಲಿಯ ನಾಟಕ ಕಲೆಯ ಮಹಾಪೋಷಕರು. ಸೊಲ್ಲಾಪುರ ಜಿಲ್ಲೆಯ ಕನ್ನಡ ರಂಗಭೂಮಿ ಮಾಲಿಕೆಯಲ್ಲಿ ಇಲ್ಲಿಯ ಕಲಾವಿದರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

### ೧೮) ನಾಗೂರ

ಅಕ್ಕಲಕೋಟ ತಾಲೂಕಿನ ನಾಗೂರ ಗ್ರಾಮದಲ್ಲಿ ಹಲವು ಸಾಮಾಜಿಕ ನಾಟಕ ಅಭಿನಯಿಸಲಾಗಿದೆ. ಕಲಿಯುಗದ ಭೀಮ, ಕಳ್ಳ ಕಟ್ಟಿದ ತಾಳಿ, ಗೌಡರ ಗದ್ದಲ, ಹಲವು ಸಾಮಾಜಿಕ ನಾಟಕ ಅಭಿನಯಿಸಲಾಗಿದೆ. ಸೋಲಾಪುರ ಜಿಲ್ಲೆಯ ಕನ್ನಡ ರಂಗಭೂಮಿ ಮಾಲಿಕೆಯಲ್ಲಿ ಇಲ್ಲಿಯ ಕಲಾವಿದರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

### ೧೯) ಬಸವನ ಸಂಗೊಳಗಿ

ಅಕ್ಕಲಕೋಟ ತಾಲೂಕಿನಲ್ಲಿ ಬಸವನ ಸಂಗೊಳಗಿ ಗ್ರಾಮವಿದೆ. ಅಲ್ಲಿ ಶ್ರೀ ಬಸವೇಶ್ವರ ನಾಟ್ಯ ಸಂಘವಿದೆ. ಈ ಗ್ರಾಮದೇವರಾದ ಶ್ರೀ ಬಸವೇಶ್ವರ ಜಾತ್ರೆಯಲ್ಲಿ ನೂರಾರು ಸಾಮಾಜಿಕ ನಾಟಕಗಳು ಅಭಿನಯಿಸಲಾಗಿದೆ.

ಚಿನ್ನದ ಗೊಂಬೆ, ಗೌರಿ ಗೆದ್ದಳು, ಸೇಡಿನ ದುರಂತ ಹಲವು ನಾಟಕ ಅಭಿನಯಿಸಿದ್ದಾರೆ. ಸೊಲ್ಲಾಪುರ ರಂಗಭೂಮಿ ಮಾಲಿಕೆಯಲ್ಲಿ ಇಲ್ಲಿಯ ಕಲಾವಿದರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

❑

# ವೃತ್ತಿ, ನೇಪಥ್ಯ ಮತ್ತು ಗ್ರಾಮೀಣ ಕಲಾವಿದರು

## ೧) ಶೈಲಜಾ ದುಧನಿಕರ

ನಾಡಿನ ಹಲವಾರು ವೃತ್ತಿರಂಗಭೂಮಿ ಕಂಪನಿಗಳಲ್ಲಿ ಶೈಲಜಾ ದುಧನಿಕರ ಅಪಾರವಾದ ಸೇವೆ ಸಲ್ಲಿಸಿ, ಈಗ ಮೈಂದರ್ಗಿಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾರೆ. ಚಿಂದೋಡಿ ಶಾಂತವೀರಪ್ಪನವರ 'ಶ್ರೀ ಗುರು ಕೆ.ಬಿ.ಆರ್. ಡ್ರಾಮಾ ಕಂಪನಿ' ಚಿತ್ತರಗಿ ಗಂಗಾಧರ ಶಾಸ್ತ್ರಿಗಳ 'ಕುಮಾರ ವಿಜಯ ನಾಟ್ಯ ಸಂಘ' ಬಿ.ಆರ್. ಅರಶಿಣಗೋಡಿಯವರ 'ಶ್ರೀ ಹುಚ್ಚೇಶ್ವರ ನಾಟ್ಯ ಸಂಘ', ಗುಡಗೇರಿ ಬಸವರಾಜ ಅವರ 'ಶ್ರೀ ಸಂಗಮೇಶ್ವರ ನಾಟ್ಯ ಸಂಘ', ವೀರಸಂಗ ಶಿವಾಚಾರ್ಯರ ಶ್ರೀ ೧೦೦೮ ಜಗದ್ಗುರು ರೇಣುಕಾಚಾರ್ಯ ನಾಟ್ಯ ಸಂಘ', ಸಿದ್ದರಾಜ ಚಡಚಣರ 'ಶ್ರೀ ಗುರುರೇವಣಸಿದ್ಧ ನಾಟ್ಯ ಸಂಘ, ವಿಜಯ ಕುಮಾರ ಹಲಕಟ್ಟಿಯವರ 'ವಿಜಯ ಮಹಾಂತೇಶ್ವರ ನಾಟ್ಯ ಸಂಘ' ನಾಡಿನ ಹಲವು ವೃತ್ತಿರಂಗಭೂಮಿ ಕಂಪನಿಗಳಲ್ಲಿ ಶೈಲಜಾ ಪ್ರಸಿದ್ಧ ನಟಿಯಾಗಿ ಅಪಾರವಾದ ಸೇವೆ ಸಲ್ಲಿಸಿದ್ದಾರೆ.

ವರನಟ ನಟಸಾರ್ವಭೌಮ ಡಾ. ರಾಜಕುಮಾರ, ಎಂ.ವಿ. ರಾಜಮ್ಮ, ಪಂಡರೀಭಾಯಿ, ಲೀಲಾವತಿ ಇವರ ಚಲನಚಿತ್ರಗಳ ಪ್ರಭಾವದಿಂದ ಶೈಲಜಾ ನಟಿಯಾಗುವ ಕನಸುಗಳಿಂದ ರಂಗಭೂಮಿ ಪ್ರವೇಶ ಮಾಡಿ. ವೃತ್ತಿರಂಗ ಭೂಮಿಯ ಪ್ರಸಿದ್ಧ ನಟಿಯಾಗಿ ಬೆಳೆದರು.

ಚಿತ್ರಾಂಗದೆ, ವರ ನೋಡಿ ಹೆಣ್ಣು ಕೊಡು, ದೇವರಿಗೆ ನೆನಪಿಲ್ಲ, ಬಸ್ ಕಂಡಕ್ಟರ, ಚಿನ್ನದ ಗೊಂಬೆ, ಎಚ್ಚರ ತಂಗಿ ಎಚ್ಚರ, ದಾರಿದೀಪ, ಗೌಡರ ಗದ್ದಲ, ಹಸಿರು ಬಳೆ, ರೈತ ನಗಲಿಲ್ಲ ಸರಕಾರ ಉಳಿಯಲಿಲ್ಲ. ಮಾತಿಗಾಗಿ ಮಡದಿ ಕಳೆದುಕೊಂಡೆ ಮುಂತಾಗಿ ಹಲವಾರು ಐತಿಹಾಸಿಕ, ಪೌರಾಣಿಕ, ಸಾಮಾಜಿಕ ನಾಟಕಗಳಲ್ಲಿ ಶೈಲಜಾ ಅಭಿನಯಿಸಿದ್ದಾರೆ.

ನಾಡಿನ ವೃತ್ತಿರಂಗಭೂಮಿ ಇತಿಹಾಸದಲ್ಲಿ ಮೈಂದರ್ಗಿಯ ಹಲವು ವೃತ್ತಿರಂಗಭೂಮಿ ಕಂಪನಿಗಳು ಗತವೈಭವ ಇತಿಹಾಸ ನಿರ್ಮಿಸಿದವು. ಶೈಲಜಾ ಅವರು ಮೈಂದರ್ಗಿಯ ಹಲವು ವೃತ್ತಿರಂಗಭೂಮಿಗಳಲ್ಲಿ ಅಪಾರವಾದ ಸೇವೆ ಸಲ್ಲಿಸಿ ರಂಗಭೂಮಿ ಬದುಕಿನ ಚರಿತ್ರೆಯಂತೆ ಶೈಲಜಾ ದುಧನಿಕರ ಎಂದು

ಹೆಸರು ಪಡೆದು ಪ್ರಸಿದ್ಧರಾಗಿದ್ದಾರೆ. ಧಾರವಾಡ, ಹುಬ್ಬಳ್ಳಿ, ವಿಜಾಪುರ, ಸೊಲ್ಲಾಪುರ, ಗುಲಬರ್ಗಾ ಬೀದರ ಹಲವು ಜಿಲ್ಲೆಯ ಹಲವು ಹಳ್ಳಿಗಳಲ್ಲಿ ನಟನೆಯೊಂದಿಗೆ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ. ನಾಡಿನ ಪ್ರಸಿದ್ಧ ವೃತ್ತಿರಂಗ ಭೂಮಿಯ ನಟರಾದ ಸುಧೀರ, ಗುಡಗೇರಿ ಬಸವರಾಜ, ಎಲಬಾಲ ಸಿದ್ದನವರು. ವಸಂತರಾವ್ ನಾಕೋಡ, ಸುಮಿತ್ರಮ್ಮ ಕುಂದಾಪುರ, ವಿಜಯಾ ಗುಳೇದಗುಡ್ಡ, ಅನ್ನಪೂರ್ಣ ಸಾಗರ, ಸರೋಜಮ್ಮ ಧುತ್ತರಗಿ, ವೀರಯ್ಯ ಸ್ವಾಮಿ, ಸಿದ್ದರಾಜ ಚಡಚಣ ಮುಂತಾಗಿ ಹಲವು ಕಲಾವಿದರೊಂದಿಗೆ ಶೈಲಜಾ ಉತ್ತಮ ಅಭಿನಯ ಸಲ್ಲಿಸಿ ಪ್ರಸಿದ್ಧರಾದ ಕಲಾವಿದೆಯಾಗಿ ಬೆಳೆದಿದ್ದಾರೆ. ರಂಗಭೂಮಿಯ ಅಭಿನಯದಿಂದ ಉಪಜೀವನ ಸಾಗಿಸಿ ಹಲವು ನೋವು-ಯಾತನೆಗಳು ಅನುಭವಿಸಿದ್ದಾರೆ.

ಶೈಲಜಾ ದುಧನಿ ಅವರು ನೂರಾರು ನಾಟಕಗಳ ಸಾವಿರಾರು ಪ್ರದರ್ಶನಗಳನ್ನು ನೀಡಿದ್ದಾರೆ. ಅವರ ಮಕ್ಕಳಾದ ಆಶಾ, ಸೀಮಾ, ನೀತಾ ಅವರು ಸಹ ವೃತ್ತಿರಂಗಭೂಮಿ ಕಲಾವಿದೆಯರಾಗಿ ಅಪಾರವಾದ ಸೇವೆ ಸಲ್ಲಿಸುತ್ತಿದ್ದಾರೆ. ಶೈಲಜಾ ದುಧನಿಕರ ಅವರು ಪ್ರಸ್ತುತ ಸೊಲ್ಲಾಪುರ ಜಿಲ್ಲೆಯ ಅಕ್ಕಲಕೋಟದ ತಾಲೂಕಿನ ಮೈಂದರ್ಗಿಯಲ್ಲಿ ವಿಶ್ರಾಂತಿ ಜೀವನ ಕಳೆಯುತ್ತಿದ್ದಾರೆ.

೨) ನಂದಾ ಹಿರೇಮಠ

ವೃತ್ತಿರಂಗಭೂಮಿಯ ಹಿರಿಯ ಕಲಾವಿದೆಯಾದ ನಂದಾ ಹಿರೇಮಠ ಮೈಂದರ್ಗಿಯಲ್ಲಿ ವಾಸಿಸುತ್ತಾರೆ. ಬೈಲಹೊಂಗಲದ ಗುಡಗೇರಿ ಬಸವರಾಜ ಅವರ 'ಸಂಗಮೇಶ್ವರ ನಾಟ್ಯ ಸಂಘ'ದ ಕ್ಯಾಂಪಿನಲ್ಲಿ ರಂಗದ ವೇದಿಕೆಯಲ್ಲಿ ನಂದಾ ಜನಿಸಿದರು. ನಂದಾ ಅವರ ತಂದೆ ದತ್ತಾತ್ರೇಯ, ತಾಯಿ ಮಹಾದೇವಿ ದಂಪತಿಗಳು ವೃತ್ತಿರಂಗಭೂಮಿಯ ಕಲಾವಿದರು. ನಟನೆ, ಅಭಿನಯ ಹಾಗೂ ಹಾಡುಗಳಿಂದ ದತ್ತಾತ್ರೇಯ ಮಹಾದೇವಿಯವರು ಪ್ರಸಿದ್ಧರು. ನಂದಾ ತಮ್ಮ ತಂದೆ-ತಾಯಿಗಳಿಂದಲೇ ನಟನೆ, ಅಭಿನಯ ಹಾಗೂ ಹಾಡುಗಳು ಕಲಿತು ವೃತ್ತಿರಂಗಭೂಮಿ ಪ್ರವೇಶ ಮಾಡಿದರು.

ವೀರಯ್ಯ ಸ್ವಾಮಿಯವರ 'ಅಡವಿಸಿದ್ದೇಶ್ವರ ನಾಟ್ಯ ಸಂಘ' ಸಿದ್ಧಲಿಂಗೇಶ್ವರ ಸ್ವಾಮಿಯವರ 'ಶಿವಯೋಗೇಶ್ವರ ನಾಟ್ಯ ಸಂಘ' ಹಣಮಂತ ಕವಿಗಳ 'ಸಿದ್ಧಲಿಂಗೇಶ್ವರ ನಾಟ್ಯ ಸಂಘ', ಮಲಕಾಜೇಪ್ಪ ಮಡ್ಡೆ ಅವರ ಶ್ರೀ ೧೦೦೮ ಜಗದ್ಗುರು ರೇಣುಕಾಚಾರ್ಯ ನಾಟ್ಯ ಸಂಘ, ಸದಾಶಿವ ಸ್ವಾಮಿ ಅವರ 'ಶ್ರೀ ದಾನೇಶ್ವರಿ ನಾಟ್ಯ ಸಂಘ' ಸಿದ್ದ ನಲವತ್ತಾಡ ಅವರ 'ವೀರೇಶ್ವರ ನಾಟ್ಯ ಸಂಘ' ನಾಗಯ್ಯ ಸ್ವಾಮಿ ತುಂಟೋಜಿ ಅವರ 'ಘನಮಠೇಶ್ವರ ನಾಟ್ಯ ಸಂಘ', ಅಶೋಕ ಪಾಟೀಲ ಅವರ 'ಶ್ರೀ ಗುರುರೇವಣಸಿದ್ದ ನಾಟ್ಯ ಸಂಘ', ವಿಜಯ

ಹಲಕಟ್ಟಿಯವರ 'ಶ್ರೀ ಮಹಾಂತೇಶ್ವರ ನಾಟ್ಯ ಸಂಘ, ರೇಣುಕಾ ಹತ್ತೆ ಅವರ 'ಶ್ರೀ ಸ್ವಾಮಿ ಸಮರ್ಥ ನಾಟ್ಯ ಸಂಘ', ಹಲವು ವೃತ್ತಿರಂಗಭೂಮಿ ನಾಟಕ ಕಂಪನಿಗಳಲ್ಲಿ ನಂದಾ ಹಿರೇಮಠ ಅಪಾರವಾದ ಸೇವೆ ಸಲ್ಲಿಸಿದ್ದಾರೆ.

ವೃತ್ತಿರಂಗಭೂಮಿಯ ಕಲಾವಿದರಾದ ಗುರುಬಸಯ್ಯ ಅವರೊಂದಿಗೆ ೧೫ ಆಗಸ್ಟ ೧೯೮೦ರಲ್ಲಿ ನಂದಾ ವಿವಾಹವಾಯಿತು. ಅವರ ಹೊಸದಾದ ಜೀವನ ವೃತ್ತಿರಂಗಭೂಮಿಯಲ್ಲಿಯೇ ಕಳೆಯಿತು. ತಮ್ಮ ಬಾಳಿನಲ್ಲಿ ಅನೇಕ ನೋವು, ನಲಿವುಗಳನ್ನು ಕಂಡ ಕಲಾವಿದ ದಂಪತಿಗಳು ಸೂಳೆಮಗ, ವಿಕ್ರಮರಾಜ, ತಾಯಿ ಕರುಳು, ಅರಿಶಿಣ ಕುಂಕುಮ, ನನ್ನವರು ನನ್ನ ಹಡೆದವರು, ಹೇಮರೆಡ್ಡಿ ಮಲ್ಲಮ್ಮ, ಬಸ್ ಕಂಡಕ್ಟರ, ಗಂಗೆ-ಗೌರಿ, ಹಸಿರು ಬಳೆ, ಕಿವುಡ ಮಾಡಿದ ಕಿತಾಪತಿ, ದೇವರಿಗೆ ನೆನಪಿಲ್ಲ ಹಲವು ಐತಿಹಾಸಿಕ, ಸಾಮಾಜಿಕ, ಪೌರಾಣಿಕ ನಾಟಕಗಳಲ್ಲಿ ನಂದಾ-ಗುರು ಬಸಯ್ಯ ಅಭಿನಯಿಸಿದ್ದಾರೆ.

ಗುರುಬಸಯ್ಯ ಅವರ ನಿಧನದ ನಂತರ ನಂದಾ ಅವರು ಮೈಂದರ್ಗಿಯ ಹಲವು ವೃತ್ತಿರಂಗಭೂಮಿಯಲ್ಲಿ ಅಭಿನಯಿಸುತ್ತಾ, ಇಲ್ಲಿಯೇ ವಾಸವಾಗಿದ್ದಾರೆ. ನಂದಾ ಅವರ ಹಿರಿಯ ಮಗಳು ಭಾರತಿ ಪ್ರಸಿದ್ಧ ನಟಿ ಹಾಗೂ ನೃತ್ಯಗಾರ್ತಿಯಾಗಿ ವೃತ್ತಿರಂಗಭೂಮಿಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಮಗ ವೀರೇಶ ಪ್ರಸಿದ್ಧ ನಿರ್ದೇಶಕರಾಗಿ ಪ್ಯಾಡಮಾಸ್ತರರಾಗಿ ವೃತ್ತಿರಂಗಭೂಮಿಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

## ೩) ಗುರುಲಿಂಗಪ್ಪಾ ಚಡಚಣ

ಕಡು ಬಡತನದಿಂದ ನರಳುತ್ತಿರುವ ಗುರುಲಿಂಗಪ್ಪಾ ಸಿದ್ದಣ್ಣ ಅವರು ಚಡಚಣ ಗ್ರಾಮ ಬಿಟ್ಟು ಮೈಂದರ್ಗಿಗೆ ಆಗಮಿಸಿದರು. ೧೯೬೦ರಲ್ಲಿ ಮೈಂದರ್ಗಿಯ ಶ್ರೀ ೧೦೦೮ ಜಗದ್ಗುರು ರೇಣುಕಾಚಾರ್ಯ ನಾಟಕ ಕಂಪನಿಯ 'ಜಗಜ್ಯೋತಿ ಬಸವೇಶ್ವರ ನಾಟಕದಲ್ಲಿ ಗುರಲಿಂಗಪ್ಪಾ ಸಿದ್ದಣ್ಣ ಅಣ್ಣ-ತಮ್ಮರಿಬ್ಬರೂ ಬಣ್ಣ ಬಳಿದುಕೊಂಡು ರಂಗ ಪ್ರವೇಶ ಮಾಡಿದರು. ಬಸವೇಶ್ವರ ಪಾತ್ರದಲ್ಲಿ ಗುರುಲಿಂಗಪ್ಪಾ ಅಭಿನಯ ಪ್ರಸಿದ್ಧವಾಯಿತು. ಅಂದು ಬಸವೇಶ್ವರ ನಾಟಕ ಮುಗಿದ ಮೇಲೆ ಗುರುಲಿಂಗ ಗೇಟ ಹತ್ತಿರ ಬಂದು ನಿಲ್ಲುತ್ತಿದ್ದರು. ಪ್ರೇಕ್ಷಕರು ಅವರ ಜೋಳಿಗೆಗೆ ಹಣ ಹಾಕಿ ನಮಸ್ಕಾರ ಮಾಡುತ್ತಿದ್ದರೆಂದು ಲೇಖನದಲ್ಲಿ ಉಲ್ಲೇಖವಾಗಿದೆ. ನಿಜಬದುಕಿನಲ್ಲಿ ಅಣ್ಣ-ತಮ್ಮ ಇಬ್ಬರಿಗೂ ಒಂದು ಹೊತ್ತಿನ ಗಂಜಿಯೂ ದೊರೆಯಲಿಲ್ಲ.

ಅಂದು ಮೈಂದರ್ಗಿಯ ವೃತ್ತಿರಂಗಭೂಮಿಗಳಲ್ಲಿ ಗುರುಲಿಂಗಪ್ಪಾ ಸಿದ್ದಣ್ಣ ಅವರ ಉತ್ತಮ ಅಭಿನಯದಿಂದ ನಾಟಕಗಳು ಪ್ರಸಿದ್ಧ ಪ್ರಯೋಗಗಳು ಯಶಸ್ವಿಯಾದವು. ೧೯೬೦ ರಿಂದ ೧೯೭೨ರ ವರೆಗೆ ಮೈಂದರ್ಗಿ ಕಂಪನಿಗಳು ನಾಡಿನಾದ್ಯಂತ ಹೆಸರು ಗಳಿಸಿದವು. ಎಚ್.ಎನ್. ಹೂಗಾರ, ಕೆ.ಎನ್. ಸಾಳುಂಕೆ,

ಎಂ. ಜೋಶಿ, ಬಸವರಾಜ ಜಮಖಂಡಿ ಹಲವು ನಾಟಕ ರಚನಾಕಾರರ ಗರಡಿಯಲ್ಲಿ ಅಣ್ಣ-ತಮ್ಮ ಬೆಳೆದರು. ಮೈಂದರ್ಗಿಯ ಶ್ರೀ ೧೦೦೮ ಜಗದ್ಗುರು ರೇಣುಕಾಚಾರ್ಯ ಹಾಗೂ ಶ್ರೀ ಗುರುರೇವಣಸಿದ್ಧ ನಾಟಕ ಕಂಪನಿಗಳ ಸ್ಪರ್ಧೆ ಪ್ರಾರಂಭವಾಯಿತು. ಮೈಂದರ್ಗಿಯ ಎರಡು ಕಂಪನಿಗಳು ನಾಡಿನ ಹಲವು ಜಿಲ್ಲೆಗಳಲ್ಲಿ ಕ್ಯಾಂಪ್ ಹಾಕಿ ಜಯಬೇರಿ ಪಡೆದವು. ಕೆಲವು ದಿನಗಳ ನಂತರ ಗುರುಲಿಂಗಪ್ಪಾ ಸೋಲಾಪುರ ನಗರ ಪ್ರವೇಶ ಮಾಡಿದರೆ, ತಮ್ಮ ಸಿದ್ದಣ್ಣ ಬೆಂಗಳೂರಿಗೆ ಪ್ರವೇಶ ಮಾಡಿದರು. (ಸಿದ್ದಣ್ಣ ಚಡಚಣ ಅವರ ಕುರಿತು ಮುಂದಿನ ಪುಟದಲ್ಲಿದೆ).

ಗುರುಲಿಂಗಪ್ಪಾ ಚಡಚಣರು ಸೋಲಾಪುರ ನಗರದಲ್ಲಿ ನಾಟಕ ಅಭಿನಯದೊಂದಿಗೆ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದರು. ರಾಜಾ ಸತ್ಯ ಹರಿಶ್ಚಂದ್ರ, ರತ್ನಮಾಂಗಲ್ಯ, ಹೆಣ್ಣು ಬಾಳಿನ ಕಣ್ಣು, ಕೊಂಡು ತಂದ ಗಂಡ, ಗಂಡನ ಮಾನ, ದೇವರಿಗೆ ನೆನಪಿಲ್ಲ, ಕೈಲಾಗದ ಗಂಡ ಕೈಲಾಸಕಂಡ, ಮಲಮಗಳು, ನೀತಿ ತಪ್ಪಿದ ನ್ಯಾಯ, ಕಾಳಿಂಗ ಸರ್ಪ ಮುಂತಾಗಿ ಹಲವು ಪೌರಾಣಿಕ, ಸಾಮಾಜಿಕ ನಾಟಕಗಳಲ್ಲಿ ಗುರುಲಿಂಗಪ್ಪಾ ಚಡಚಣರು ಅಭಿನಯಕ್ಕೆ ಪ್ರಸಿದ್ಧರಾದರು. ಗುರುಲಿಂಗಪ್ಪಾ ಸೊಲ್ಲಾಪುರ ನಗರದಲ್ಲಿ ವಾಸವಾಗಿದ್ದು ಇದೀಗ ನಿಧನಹೊಂದಿದ್ದಾರೆ.

### ೪) ಸಿದ್ದಣ್ಣ ಚಡಚಣ

ಕಡು ಬಡತನದಿಂದ ನರಳುತ್ತಿದ್ದ ಗುರುಲಿಂಗಪ್ಪ ಮತ್ತು ಸಿದ್ದಣ್ಣ ಚಡಚಣ ಗ್ರಾಮ ಬಿಟ್ಟು ಮೈಂದರ್ಗಿಗೆ ಆಗಮಿಸಿದರು. ಗುರುಲಿಂಗಪ್ಪಾ-ಸಿದ್ದಣ್ಣ ಅಣ್ಣ-ತಮ್ಮಂದಿರಿಬ್ಬರನ್ನು ಕುರಿತು ಈಗಾಗಲೇ ವಿವರಿಸಿದ್ದೇನೆ. ಸಿದ್ದಣ್ಣ ಅವರ ಕುರಿತು ಇಲ್ಲಿ ವಿವರಿಸುತ್ತೇನೆ. ವೃತ್ತಿರಂಗಭೂಮಿಗೆ ಅಪಾರವಾದ ಸೇವೆ ಸಲ್ಲಿಸಿದವರಲ್ಲಿ ಸಿದ್ದಣ್ಣ ಒಬ್ಬರು. ಇಂದಿನ ರಂಗಕಲಾವಿದರಿಗೆ ಸಿದ್ದಣ್ಣ ಚಡಚಣ ಅಂದರೆ ಗೊತ್ತಾಗುವುದಿಲ್ಲ. ಸಿದ್ದಣ್ಣ ಅಪ್ಪಾಜಿ ಎಂದರೆ ಗೊತ್ತಾಗುತ್ತದೆ ಆದರೆ ಚಿತ್ರನಟ ಸುಧೀರ ಅವರ 'ಕರ್ನಾಟಕ ಕಲಾ ವೈಭವ ನಾಟ್ಯ ಸಂಘದ' ಹಿರಿಯ ಕಲಾವಿದ ಸಿದ್ದಣ್ಣ ಅಪ್ಪಾಜಿ ಎಂದರೆ ಇನ್ನೂ ಚೆನ್ನಾಗಿ ಪರಿಚಯವಾಗುತ್ತದೆ. ವೃತ್ತಿ ರಂಗ ಭೂಮಿಯ ಒಂದು ನಟನೆಯ ದೀಪ ಸೊಲ್ಲಾಪುರದಲ್ಲಿ ಬೆಳಗಿದರೆ, ಇನ್ನೊಂದು ದೀಪ ಬೆಂಗಳೂರಿನಲ್ಲಿ ಬೆಳಗಿತು.

೧೯೭೦ರಲ್ಲಿ ಮೈಂದರ್ಗಿಯ ಶ್ರೀ ೧೦೦೮ ಜಗದ್ಗುರು ನಾಟ್ಯ ಸಂಘ, ಶ್ರೀ ರೇವಣಸಿದ್ದ ನಾಟ್ಯ ಸಂಘ, ಗುಬ್ಬಿವೀರಣ್ಣ ನಾಟ್ಯ ಸಂಘ, ಬಸವರಾಜ ಗುಡಗೇರಿ ಮುಂತಾಗಿ ಹಲವಾರು ಕಂಪನಿಗಳು ಪ್ರಸಿದ್ಧವಾಗಿದ್ದವು. ೧೯೭೫ರಲ್ಲಿ ಚಿತ್ರನಟ ಸುಧೀರ ಅವರು ಸಿದ್ದಣ್ಣ ಚಡಚಣ ಅವರ ಅಭಿನಯ ಕಂಡು ಬೆಂಗಳೂರಿಗೆ

ಕರೆದುಕೊಂಡು ಹೋದರು. ಒಂದರ್ಥದಲ್ಲಿ ಮೈಂದರ್ಗಿಯ ವೃತ್ತಿರಂಗಭೂಮಿ ಕಂಪನಿಗಳು ಅನಾಥವಾದವು.

ಮೈಂದರ್ಗಿ ರಂಗಭೂಮಿ ಇತಿಹಾಸದ ಒಂದು ಹಿನ್ನೋಟ ಎಂಬ ಲೇಖನ ಬರೆದು ಸಂಯುಕ್ತ ಕರ್ನಾಟಕದಲ್ಲಿ ಪ್ರಕಟಿಸಿದೆ. ಸಿದ್ದರಾಜ ಚಡಚಣರ ಒಂದು ಹಳೆಯದಾದ ಫೋಟೋ. ಪ್ರಕಟಿಸಿದೆ ದಿನಾಂಕ : ೨೭.೦೧.೨೦೦೩ ರಂದು ಲೇಖನ ಪ್ರಕಟವಾದ ಬಳಿಕ ಮೈಂದರ್ಗಿ ರಂಗಭೂಮಿ ಕಲಾವಿದರು ನನ್ನ ಮನೆಗೆ ಬಂದರು. ಆಗ ನಾನು ಆಳಂದ ಹೈ ಕ ಶಿಕ್ಷಣ ಸಂಸ್ಥೆಯಲ್ಲಿ ಬಿ.ಎ. ಅಧ್ಯಯನ ಮಾಡುತ್ತಿದ್ದೆ. ಸಿದ್ದಣ್ಣ ಅವರು ಬೆಂಗಳೂರಿನಲ್ಲಿ ನಾಟಕ ಅಭಿನಯಿಸುತ್ತಿದ್ದಾರೆ ಎಂದು ಹೇಳಿ ನನಗೆ ಬೆಂಗಳೂರಿಗೆ ಹೋಗಲು ಒತ್ತಾಯಿಸಿದರು. ಬೆಂಗಳೂರು ಪ್ರವಾಸ ಪ್ರಾರಂಭವಾಯಿತು. ಬೆಂಗಳೂರಿನ ಗುಬ್ಬಿವೀರಣ್ಣ ರಂಗಮಂದಿರಕ್ಕೆ ಹೋಗಿ ಪತ್ರಿಕೆಯಲ್ಲಿ ಪ್ರಕಟವಾದ ಲೇಖನವನ್ನು ಅಲ್ಲಿದ್ದ ಕಲಾವಿದರೊಬ್ಬರಿಗೆ ತೋರಿಸಿದೆ. ಕಲಾವಿದರು 'ಅಪ್ಪಾಜಿ ನಿಮಗೆ ಕಾಣಲು ಹುಡುಗರೊಬ್ಬರು ಬಂದಿದ್ದಾರೆಂದು' ಹೇಳಿದರು ಅಪ್ಪಾಜಿ ನನಗೆ ಗುರುತಿಸಲಿಲ್ಲ. ನಾನು ಜನಿಸುವ ಮೊದಲೇ ಅವರು ಮೈಂದರ್ಗಿ ಕಂಪನಿಗೆ ವಿದಾಯ ಹೇಳಿ ಬೆಂಗಳೂರಿನಲ್ಲಿ ವಾಸಿಸಿದವರು. ಸಂಯುಕ್ತ ಕರ್ನಾಟಕದಲ್ಲಿ ಪ್ರಕಟವಾದ ಲೇಖನ, ತಂದೆಯವರ ಹೆಸರು ಹೇಳಿದ ಮೇಲೆ ಅಪ್ಪಾಜಿ ತಮ್ಮ ವಾಸದ ಮನೆಗೆ ಕರೆದುಕೊಂಡು ಹೋದರು.

ಅಂದು ಗುಬ್ಬಿ ವೀರಣ್ಣ ರಂಗಮಂದಿರದಲ್ಲಿ ಸುಧೀರ ಅವರ 'ಕರ್ನಾಟಕ ಕಲಾ ವೈಭವ ನಾಟ್ಯ ಸಂಘ' ದಿಂದ 'ಎಚ್ಚರ ತಂಗಿ ಎಚ್ಚರ' ನಾಟಕ ಪ್ರಾರಂಭವಾಯಿತು. ಸಿದ್ದಣ್ಣ ಅಪ್ಪಾಜಿ, ಪಂಚಗಲ ಕವಿ, ಮಾಲತಿ ಅವರ ಉತ್ತಮ ಅಭಿನಯದಿಂದ ದಿನಾಲು ಎರಡು ಆಟ ನಡೆಯುತ್ತಿದ್ದವು. ಮೂರು ದಿವಸ ಅವರ ಕ್ಯಾಂಪಿನಲ್ಲಿ ಕಾಲ ಕಳೆದೆ. ಚಿತ್ರನಟ–ನಟಿಯರಾದ ಸುಧೀರ, ಉಮಾಶ್ರೀ, ಡಿಂಗ್ರಿ ನಾಗರಾಜ, ಹಲವು ಹಿರಿಯ ಕಲಾವಿದರೊಂದಿಗೆ ನಾಟಕ ಅಭಿನಯಿಸಿದ ನೂರಾರು ಫೋಟೋಗಳು ಸಿದ್ದಣ್ಣ ಅವರ ಹತ್ತಿರ ಇದ್ದವು. ಅವರ ಎಲ್ಲ ದಾಖಲೆ ನನಗೆ ಕೊಡಲು ನಿರಾಕರಿಸಿದರು. 'ಸಿದ್ದಣ್ಣ ಅವರ ರಂಗಭೂಮಿ ಕೊಡುಗೆ' ಕುರಿತು ಒಂದು ಮಹಾಪ್ರಬಂಧ ಬರೆಯುವಷ್ಟು ದಾಖಲೆಗಳಿದ್ದವು. ಹಿರಿಯ ಕಲಾವಿದರಾದ ಸಿದ್ದಣ್ಣ ಅವರಿಗೆ ಕರ್ನಾಟಕ ಕಲಾ ವೈಭವ ಸಂಘದ ಕಲಾವಿದರು ಅಪ್ಪಾಜಿ ಎಂದು ಪ್ರೀತಿಯಿಂದ ಕರೆಯುತ್ತಿದ್ದರು. ಮೈಂದರ್ಗಿಗೆ ಹಿಂತಿರುಗಿ ಬರುವಾಗ "ಕೇಂದ್ರ ಹಾಗೂ ರಾಜ್ಯ ಸರಕಾರಗಳ ಮಾಸಾಶನದ ಸಲುವಾಗಿ ಅರ್ಜಿ ಹಾಕುತ್ತಿದ್ದೇನೆ. ಅದರ ಎಲ್ಲ ಕೆಲಸವಾದ ಮೇಲೆ ನನ್ನ ಎಲ್ಲ ದಾಖಲೆ ನಿನಗೆ ಕೊಡುತ್ತೇನೆಂದು" ಅಪ್ಪಾಜಿ ಹೇಳಿದರು. ಅವರ ಪಕ್ಕದಲ್ಲಿಂದ ಪಂಚಗಲ ಕವಿಗಳು ಅವರ ದಾಖಲೆ ನನಗೆ ಕೊಟ್ಟರು.

ಸಿದ್ದಣ್ಣ ಚಡಚಣರು 'ಕರ್ನಾಟಕ ಕಲಾ ವೈಭವ ನಾಟ್ಯ ಸಂಘ'ದಲ್ಲಿ ಅಪಾರವಾದ ಸೇವೆ ಸಲ್ಲಿಸಿದರು. ಹಿರಿಯರಾದ ಅವರಿಗೆ ವಯಸ್ಸಾಯಿತು. ಕ್ಯಾಂಪ ಒಂದರಲ್ಲಿ ಅವರ ದಾಖಲೆಗಳು ಕಳೆದು ಹೋದವು. ಈ ವಿಷಯ ನನಗೆ ಹೇಳುವಾಗ ಅವರು ಕಣ್ಣೀರಿಟ್ಟರು.

ಕರ್ನಾಟಕ ಕಲಾ ವೈಭವ ನಾಟ್ಯ ಸಂಘದ ಹಿರಿಯ ಕಲಾವಿದರಾಗಿ, ನಿರ್ದೇಶಕರಾಗಿ ಅಪಾರವಾದ ಸೇವೆ ಸಲ್ಲಿಸಿದ್ದಾರೆ. ಇಂಥ ಹಿರಿಯ ಕಲಾವಿದರಿಗೆ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಬೇಕಾಗಿತ್ತು. ಗೌರವಿಸಲಿಲ್ಲ. ಹಲವು ವರ್ಷಗಳ ನಂತರ ಸಿದ್ದಣ್ಣ ಅಪ್ಪಾಜಿಯವರು ಮೈಂದರ್ಗಿಗೆ ಆಗಮಿಸಿದರು. ೨೦೧೧ರ ಸೋಲಾಪುರ ಗಡಿನಾಡಿನ ಉತ್ಸವದಲ್ಲಿ ಸಿದ್ದಣ್ಣ ಚಡಚಣ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಿದೆ. ಪ್ರಶಸ್ತಿ ಸ್ವೀಕರಿಸಿ, ಆನಂದವನ್ನು ಅನುಭವಿಸಿದ ಹಿರಿಯ ಜೀವ ನಮ್ಮನ್ನು ಅಗಲಿ ಹೋಯಿತು. ಈ ಲೇಖನದ ಮೂಲಕ ಅವರ ಆತ್ಮಕ್ಕೆ ಚಿರಶಾಂತಿ ಲಭಿಸಲೆಂದು ಹಾರೈಸುತ್ತೇನೆ.

ಮೈಂದರ್ಗಿ ವೃತ್ತಿರಂಗಭೂಮಿಗಳೆರಡು
ಅಂದು ಅನಾಥವಾದವು
ಗುರಲಿಂಗಪ್ಪಾ ಸೋಲಾಪುರದಲ್ಲಿ ಬೆಳಗಿದ
ಸಿದ್ಧಣ್ಣ ಅಪ್ಪಾಜಿ ಬೆಂಗಳೂರಿನಲ್ಲಿ ಬೆಳಗಿತು.
ವೃತ್ತಿರಂಗಭೂಮಿಗೆ ಅಣ್ಣ-ತಮ್ಮರಿಬ್ಬರ ವಿದಾಯ.

**೫) ಕೇಶವ ಮಸೂತಿ**

ವೃತ್ತಿರಂಗಭೂಮಿಯ ಹಿರಿಯ ಕಲಾವಿದರು ಕೇಶವ ಮಸೂತಿ ಅಕ್ಕಲಕೋಟ ತಾಲೂಕಿನ ಮೈಂದರ್ಗಿಯಲ್ಲಿ ಜನಿಸಿದರು. ಇವರ ತಂದೆ ಕಲ್ಲಪ್ಪಾ, ತಾಯಿ ಮಹಾದೇವಿ ಕೇಶವ ಅವರು ೫ನೇ ತರಗತಿಯವರೆಗೆ ಶಾಲೆ ಕಲಿತರು. ಮೈಂದರ್ಗಿಯ ಶ್ರೀ ೧೦೦೮ ಜಗದ್ಗುರು ರೇಣುಕಾಚಾರ್ಯ ನಾಟ್ಯ ಸಂಘದಲ್ಲಿ ಅಭಿನಯಿಸುತ್ತಾ ರಂಗ ಪ್ರವೇಶ ಮಾಡಿದರು. ಮೈಂದರ್ಗಿ ಶ್ರೀ ೧೦೦೮ ಜಗದ್ಗುರು ರೇಣುಕಾಚಾರ್ಯ ನಾಟ್ಯ ಸಂಘದಲ್ಲಿ ಕೇಶವ ಮಸೂತಿ ಹಾಸ್ಯ ನಟನಾಗಿ ಪ್ರಸಿದ್ದಿಪಡೆದರು.

ಹುಮನಾಬಾದ, ಭಾಲ್ಕಿ, ಔರಾದ, ರಾಜೇಶ್ವರದಲ್ಲಿ ಶೀ ೧೦೦೮ ಜಗದ್ಗುರು ರೇಣುಕಾಚಾರ್ಯ ನಾಟ್ಯ ಸಂಘ ಹಲವು ದಿನಗಳವರೆಗೆ ಕ್ಯಾಂಪ್ ಹಾಕಿ ಇತಿಹಾಸ ನಿರ್ಮಿಸಿದೆ. ಈ ಸಂದರ್ಭದಲ್ಲಿ ಕೇಶವ ಮಸೂತಿ ಅಭಿನಯ ನಟನೆ ಹಾಗೂ ಹಾಸ್ಯ ಪಾತ್ರಕ್ಕೆ ಮನೆಮಾತಾದರು. ಮಲಮಗಳು, ರಾಜಾ ಸತ್ಯ ಹರಿಶ್ಚಂದ್ರ, ಹೇಮರೆಡ್ಡಿ, ದೇವರ ಗಂಟೆ, ಜಾಣ ಜಾರಿ ಬಿದ್ದ, ಸತಿ ಸಂಸಾರದ ಜ್ಯೋತಿ, ಬಂಗಾರದ ಮನುಷ್ಯ, ಸಹೋದರರ ಸವಾಲು, ಕೈಲಾಗದ ಗಂಡ ಕೈಲಾಸ ಕಂಡ,

ಬಸ್ ಕಂಡಕ್ಟರ, ಬಸ್ ಹಮಾಲ, ಚಿನ್ನದ ಗೊಂಬೆ, ಹಸಿರು ಬಳೆ, ನನ್ನ ಗಂಡ ಬಲುಭಂಡ, ದೇವರಿಗೆ ನೆನಪಿಲ್ಲ, ಬಂಜೆ ತೊಟ್ಟಿಲು, ಗೌಡತಿ ಗದ್ದಲ ಹಲವು ಐತಿಹಾಸಿಕ, ಪೌರಾಣಿಕ, ಸಾಮಾಜಿಕ ನಾಟಕಗಳಲ್ಲಿ ಕೇಶವ ಮಸೂತಿ ಅಭಿನಯಿಸಿದ್ದಾರೆ.

ಕೇಶವ ಮಸೂತಿ ಅವರು ನಾಟಕದ ಅಭಿನಯದೊಂದಿಗೆ ನಿರ್ದೇಶನ ಸಹ ಮಾಡಿದ್ದಾರೆ. ನೇಪಥ್ಯ ಕೆಲಸಗಾರರಾಗಿಯೂ ಸೇವೆ ಸಲ್ಲಿಸುತ್ತಾರೆ. ಅವರಿಗೆ ೨೦೧೧ರ ಸೋಲಾಪುರ ಗಡಿನಾಡ ಉತ್ಸವದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಮೈಂದರ್ಗಿಯ ಶ್ರೀ ೧೦೦೮ ಜಗದ್ಗುರು ರೇಣುಕಾಚಾರ್ಯ ನಾಟ್ಯ ಸಂಘದಲ್ಲಿ ಈಗಲೂ ಸಹ ಕೇಶವ ಮಸೂತಿ ಅವರು ಸೇವೆ ಸಲ್ಲಿಸುತ್ತಿದ್ದಾರೆ.

### ೬) ಈರಣ್ಣಾ ನಿಂಬಾಳ

ಅಕ್ಕಲಕೋಟ ತಾಲೂಕಿನ ಮೈಂದರ್ಗಿಯಲ್ಲಿ ಈರಣ್ಣಾ ನಿಂಬಾಳ ಜನಿಸಿದರು. ಮೈಂದರ್ಗಿಯ ಶ್ರೀ ಗುರು ರೇವಣಸಿದ್ಧ ನಾಟ್ಯ ಸಂಘದಲ್ಲಿ ಭೀಮಶಾ ಹುಲಮನಿ ಅವರು ಈರಣ್ಣ ಅವರಿಗೆ ಬಣ್ಣ ಬಳಿದು ರಂಗ ಪ್ರವೇಶ ಮಾಡಿಸಿದರು. ಹಿರಿಯ ರಂಗಕಲಾವಿದರಾದ ಭೀಮಣ್ಣಾ ಹುಲಮನಿ, ಸಿದ್ಧಣ್ಣ ಚಡಚಣಾರ ಗರಡಿಯಲ್ಲಿ ಈರಣ್ಣಾ ನಿಂಬಾಳ ಬೆಳೆದರು.

ಮೈಂದರ್ಗಿಯ ಶ್ರೀ ೧೦೦೮ ಜಗದ್ಗುರು ರೇಣುಕಾಚಾರ್ಯ, ಶ್ರೀ ಗುರುರೇವಣಸಿದ್ಧ ಹಲವು ನಾಟಕ ಕಂಪನಿಗಳಲ್ಲಿ ನಟರಾಗಿ, ನಿರ್ದೇಶಕರಾಗಿ ಈರಣ್ಣಾ ಸೇವೆ ಸಲ್ಲಿಸಿದ್ದಾರೆ. ಉಮೇಶ ಹೆಗಡೆ ಅವರ 'ಸಂಗೀತ ಕಲಾ ನಾಟ್ಯ ಸಂಘ' ಸಿದ್ಧಯ್ಯ ಸ್ವಾಮಿ ಅವರ 'ಮಾಣಿಕೇಶ್ವರಿ ನಾಟ್ಯ ಸಂಘ, ವೀರಯ್ಯ ಸ್ವಾಮಿ ಅವರ 'ಅಡವಿಸಿದ್ದೇಶ್ವರ ನಾಟ್ಯ ಸಂಘ, ಶಿವಲಿಂಗಯ್ಯ ಸ್ವಾಮಿ ಅವರ 'ಶ್ರೀ ಶಿವಲಿಂಗೇಶ್ವರ ನಾಟ್ಯ ಸಂಘ, ಹಣಮಂತ ಕವಿಗಳ 'ಶ್ರೀ ಸಿದ್ಧಲಿಂಗೇಶ್ವರ ನಾಟ್ಯ ಸಂಘ, ಸದಾಶಿವಸ್ವಾಮಿ ಅವರ 'ಶ್ರೀ ದಾನಮ್ಮದೇವಿ ನಾಟ್ಯ ಸಂಘ, ಸಿದ್ದು ನಲವತ್ತಾಡ ಅವರ ಶ್ರೀ ವೀರೇಶ್ವರ ನಾಟ್ಯ ಸಂಘ, ನಾಗಯ್ಯ ಸ್ವಾಮಿ ಅವರ 'ಶ್ರೀ ಘನ ಮಹದೇಶ್ವರ, ನಾಟ್ಯ ಸಂಘ, ಎಲ್.ಬಿ. ಶೇಖಮಾಸ್ತರ ಅವರ 'ಕುಮಾರೇಶ್ವರ ನಾಟ್ಯ ಸಂಘ, ರೇಣುಕಾ ಹತ್ತೆ ಅವರ ಶ್ರೀ ಸ್ವಾಮಿ ಸಮರ್ಥ ನಾಟ್ಯ ಸಂಘ ಹೀಗೆ ನಾಡಿನ ಹಲವು ವೃತ್ತಿರಂಗಭೂಮಿಗಳಲ್ಲಿ ಈರಣ್ಣಾ ನಿಂಬಾಳ ಅವರು ಸೇವೆ ಸಲ್ಲಿಸಿದ್ದಾರೆ.

ಚಲನಚಿತ್ರ ನಟರಾದ ಸುಧೀರ, ಟೆನಿಸ್ ಕೃಷ್ಣ, ಡಿಂಗ್ರಿ ನಾಗರಾಜ ಹಲವು ಕಲಾವಿದರೊಂದಿಗೆ ಅಭಿನಯಿಸಿದ್ದಾರೆ. ಈರಣ್ಣಾ ನಿಂಬಾಳ ಪ್ರಸಿದ್ಧ ಹಾಸ್ಯ ನಟರಾಗಿ ಹೆಸರು ಮಾಡಿದವರು. ತಾಯಿಯ ಕರುಳು, ಅರಿಶಿಣ ಕುಂಕುಮ, ನನ್ನವರು ನನ್ನ

ಹಡೆದವರು, ಬದುಕು ಬಂಗಾರವಾಯಿತು. ಹೇಮರೆಡ್ಡಿ ಮಲ್ಲಮ್ಮ, ಬಸ್ ಕಂಡಕ್ಟರ್, ಬಸ್ ಹಮಾಲ, ಜಗಜ್ಯೋತಿ ಬಸವೇಶ್ವರ, ಗಂಗೆ ಗೌರಿ, ಮಾನವಂತರ ಮನೆತನ, ಹಸಿರು ಬಳೆ, ಹಲವು ಪೌರಾಣಿಕ, ಸಾಮಾಜಿಕ ನಾಟಕಗಳಲ್ಲಿ ಈರಣ್ಣಾ ವಿಭಿನ್ನವಾದ ಪಾತ್ರ ಅಭಿನಯಿಸುವ ಮೂಲಕ ಪ್ರೇಕ್ಷಕರು ಮೆಚ್ಚಿದ ಕಲಾವಿದರಾಗಿದ್ದಾರೆ. ಈರಣ್ಣಾ ಹಲವು ಏಳು ಬೀಳು, ಕಷ್ಟ ಕಾರ್ಪರ್ಣ್ಯಗಳ ನಡುವೆಯೂ ಹಲವು ವೃತ್ತಿರಂಗಭೂಮಿಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

ನಾಟಕ ಕಲೆ ಇವರ ಉಪಜೀವನದ ವೃತ್ತಿಯಾಗಿದೆ. ನಾಡಿನ ಹಲವು ವೃತ್ತಿರಂಗಭೂಮಿಗಳು ಇವರಿಗೆ ಕೈ ಮುಗಿದು ಬಾ ಕಲಾವಿದನೆ ಎಂದು ಸ್ವಾಗತ ಮಾಡುತ್ತವೆ. ಈರಣಾ ನಿಂಬಾಳ ಅವರಿಗೆ ಹಂಪಿ ಉತ್ಸವ, ಬಾದಾಮಿ ಉತ್ಸವಗಳಲ್ಲಿ ಪ್ರಶಸ್ತಿನೀಡಿ ಗೌರವಿಸಲಾಗಿದೆ. ಮೈಂದರ್ಗಿಯ ಶ್ರೀ ೧೦೦೮ ಜಗದ್ಗುರು ರೇಣುಕಾಚಾರ್ಯ ನಾಟ್ಯ ಸಂಘದಲ್ಲಿ ಈರಣ್ಣಾ ನಿಂಬಾಳ ಅವರು ಹಿರಿಯ ನಟರಾಗಿ, ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

## ೭) ಓಂಕಾರ ಬುರುಡ

ಅಕ್ಕಲಕೋಟ ತಾಲೂಕಿನ ಮೈಂದರ್ಗಿಯಲ್ಲಿ ಓಂಕಾರ ಬುರುಡ ಅವರು ಜನಿಸಿದರು. ಅವರ ತಂದೆ ಸಿದ್ರಾಮಪ್ಪಾ, ತಾಯಿ ನರಸಮ್ಮ. ಇವರ ತಂದೆ ಸಿದ್ರಾಮಪ್ಪಾ ಪ್ರಸಿದ್ಧ ಬಯಲಾಟದ ಕಲಾವಿದರು ಹಾಗೂ ಮೋಡಿ ಭಾಷೆಯ ತಜ್ಞರು. ಓಂಕಾರ ನನ್ನ ಪ್ರೀತಿಯ ಗೆಳೆಯನೂ ಹೌದು. ಮೈಂದರ್ಗಿಯ ಶ್ರೀ ಜಯ ಹನುಮಾನ ನಾಟ್ಯ ಸಂಘದ 'ಸಿಂಧೂರ ಲಕ್ಷ್ಮಣ' ನಾಟಕದಲ್ಲಿ ಓಂಕಾರ ಮುಖಕ್ಕೆ ಬಣ್ಣ ಬಳಿದು ನರಸ್ಯಾನ ಪಾತ್ರ ಅಭಿನಯಿಸುವ ಮೂಲಕ ರಂಗ ಪ್ರವೇಶ ಮಾಡಿದರು. ಅವರು ರಂಗಪ್ರವೇಶ ಮಾಡಿದರೆ ನಾನು ರಂಗಕಲಾವಿದರ ಕುರಿತು ಲೇಖನ ಬರೆಯಲು ಪ್ರಾರಂಭಿಸಿದೆ. ವೃತ್ತಿರಂಗಭೂಮಿಯ ಹಲವು ನಾಟಕ ಕಂಪನಿಗಳಲ್ಲಿ ಓಂಕಾರ ಮೊದಲು ಹಾಸ್ಯ ಪಾತ್ರ ಅಭಿನಯಿಸಿ, ನಂತರ ಪ್ರಮುಖ ಪಾತ್ರ ಅಭಿನಯಿಸಲು ಪ್ರಾರಂಭಿಸಿದರು.

ಸಿಂಧೂರ ಲಕ್ಷ್ಮಣ, ಮದುವೆಯಾದರೂ ಮಾಂಗಲ್ಯ ಉಳಿಯಲಿಲ್ಲ, ಮಾತು ಕೊಟ್ಟ ಮುತ್ತೈದೆ, ನೋಡಿದ್ದು ಅಂಗಾರ–ಸಿಕ್ಕಿದ್ದು ಬಂಗಾರ, ನನ್ನವರು–ನನ್ನ ಹಡೆದವರು, ತಾಯಿಯ ಹಾಲು ವಿಷವಾಯಿತು. ಬಸ್ ಕಂಡಕ್ಟರ್, ಕಲಿಯುಗದ ಪೂಜಾರಿ, ಕೈಲಾಗದ ಗಂಡ ಕೈಲಾಸ ಕಂಡ, ಚಿನ್ನದ ಗೊಂಬೆ ಮುಂತಾಗಿ ಹಲವು ಸಾಮಾಜಿಕ ಪೌರಾಣಿಕ ನಾಟಕಗಳಲ್ಲಿ ಓಂಕಾರ ವಿಭಿನ್ನವಾದ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ.

ಬೆಳಕು ವಿನ್ಯಾಸ, ವಸ್ತ್ರ ವಿನ್ಯಾಸ, ರಂಗಸಜ್ಜಿಕೆ, ಮೇಕಪ್, ನೇಪಥ್ಯ

ಕೆಲಸ, ನಟನೆ ಹಾಗೂ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಾರೆ. ಓಂಕಾರ ಅವರ ಸಂಸಾರದ ರಥ ಬಹಳ ದೊಡ್ಡದು. ದಿನಾಲು ಪರಿಶ್ರಮದಿಂದ ದುಡಿದು ರಥ ಎಳೆಯುವದರೊಂದಿಗೆ ರಂಗಭೂಮಿಯ ರಥ ಎಳೆಯುತ್ತಾರೆ. ವೃತ್ತಿರಂಗ-ಭೂಮಿಯಿಂದ ಹಲವು ನೋವು-ಯಾತನೆ ಅನುಭವಿಸಿದರು.

ಮೈಂದರ್ಗಿಯ ಮಲಕಾಜೇಪ್ಪ ಮಡ್ಡೆ ಅವರ ಶ್ರೀ ೧೦೦೮ ಜಗದ್ಗುರು ರೇಣುಕಾಚಾರ್ಯ ನಾಟ್ಯಸಂಘದಲ್ಲಿ ಅಪಾರವಾದ ಸೇವೆ ಸಲ್ಲಿಸಿದ್ದಾರೆ. ೨೦೧೧ರಲ್ಲಿ ಓಂಕಾರ ಬುರುಡ ಅವರು ಶ್ರೀ ಸಿದ್ಧರಾಮೇಶ್ವರ ನಾಟ್ಯ ಸಂಘ ಸ್ಥಾಪನೆ ಮಾಡುತ್ತಾರೆ. ಪ್ರತಿ ವರ್ಷದ ಶ್ರೀ ಶಿವಚಲೇಶ್ವರ ಜಾತ್ರೆಯಲ್ಲಿ ಇವರು ಕ್ಯಾಂಪ್ ಹಾಕುತ್ತಾರೆ. ಯುವಕರ ಕಲಾ ತಂಡದೊಂದಿಗೆ ಓಂಕಾರ ಬುರುಡ ಕರ್ನಾಟಕ ಮಹಾರಾಷ್ಟ್ರದ ಹಳ್ಳಿ-ಹಳ್ಳಿಯ ಜಾತ್ರೆಗಳಲ್ಲಿ ನಾಟಕ ಅಭಿನಯಿಸಲು ಹೋಗುತ್ತಾರೆ. ಕುಟುಂಬದ ರಥ, ರಂಗಭೂಮಿ ರಥ ಹಾಗೂ ಸಮಾಜದ ರಥ ಎಳೆಯವಲ್ಲಿ ಓಂಕಾರ ಎತ್ತಿದ ಕೈ ಓಂಕಾರ ಬುರುಡ ಮೈಂದರ್ಗಿ ಯುವ ರಂಗಭೂಮಿ ಕಲಾವಿದರಿಗೆ ತರಬೇತಿ ನೀಡುತ್ತಾರೆ. ವೃತ್ತಿರಂಗಭೂಮಿ ಹಾಗೂ ಬದುಕಿನ ರಂಗಭೂಮಿಗಳಲ್ಲಿ ಪರಿಶ್ರಮ ಪಡುವ ಗೆಳೆಯ ಓಂಕಾರರಿಗೆ ಸುಖ ಎಂಬುದು ಗೊತ್ತೇ ಇಲ್ಲ. ಗೆಳೆಯನಿಗೆ ಸುಖದಿಂದ ಇರುವ ದಿನಗಳು ಬೇಗನೆ ಆಗಮಿಸಲೆಂದು ದೇವರಲ್ಲಿ ಪ್ರಾರ್ಥಿಸುತ್ತೇನೆ.

### ೮) ಲಕ್ಷ್ಮಣ ಬುರುಡ

ಅಕ್ಕಲಕೋಟ ತಾಲೂಕಿನ ಮೈಂದರ್ಗಿಯಲ್ಲಿ ಲಕ್ಷ್ಮಣ ಬುರುಡ ಅವರು ಜನಿಸಿದರು. ತಂದೆ ಬೈರಪ್ಪ ತಾಯಿ ಶೀಲವಂತಿ ಲಕ್ಷ್ಮಣ ಬುರುಡ, ಓಂಕಾರ ಬುರುಡ ಇಬ್ಬರೂ ಒಂದೇ ರಂಗಭೂಮಿಯಲ್ಲಿ ಪ್ರವೇಶ ಮಾಡಿದರು. ಮೈಂದರ್ಗಿಯ ಶ್ರೀ ಜಯ ಹನುಮಾನ ನಾಟ್ಯ ಸಂಘದ 'ಸಿಂಧೂರ ಲಕ್ಷ್ಮಣ' ನಾಟಕದಲ್ಲಿ ಲಕ್ಷ್ಮಣ 'ಸಿಂಧೂರ ಲಕ್ಷ್ಮಣ' ಪಾತ್ರ ಅಭಿನಯಿಸಿ ಪೇಕ್ಷಕರ ಮೆಚ್ಚುಗೆಯ ಕಲಾವಿದರಾಗಿ ಪ್ರಸಿದ್ಧರಾಗುತ್ತಾರೆ.

ಸಿಂಧೂರ ಲಕ್ಷ್ಮಣ, ಮದುವೆಯಾದರೂ ಮಾಂಗಲ್ಯ ಉಳಿಯಲಿಲ್ಲ, ಮಾತು ಕೊಟ್ಟ ಮುತ್ತೈದೆ, ನೋಡಿದ್ದು ಅಂಗಾರ-ಸಿಕ್ಕಿದ್ದು ಬಂಗಾರ, ನನ್ನವರು-ನನ್ನ ಹಡೆದವರು. ತಾಯಿಯ ಹಾಲು ವಿಷಯವಾಯಿತು. ಬಸ್ ಕಂಡಕ್ಟರ್, ಕಲಿಯುಗದ ಪೂಜಾರಿ, ಕೈಲಾಗದ ಗಂಡ ಕೈಲಾಸ ಕಂಡ ಚಿನ್ನದ ಗೊಂಬೆ, ಹಲವು ಸಾಮಾಜಿಕ, ಪೌರಾಣಿಕ ನಾಟಕಗಳಲ್ಲಿ ಲಕ್ಷ್ಮಣ ಖಳನಾಯಕ ಪಾತ್ರ ಅಭಿನಯಿಸುತ್ತಾರೆ.

ಮೈಂದರ್ಗಿಯ ಮಲಕಾಜೇಪ್ಪ ಮಡ್ಡೆ ಅವರ ಶ್ರೀ ೧೦೦೮ ಜಗದ್ಗುರು ರೇಣುಕಾಚಾರ್ಯ ನಾಟ್ಯ ಸಂಘದಲ್ಲಿ ಅಪಾರವಾದ ಸೇವೆ ಸಲ್ಲಿಸುತ್ತಿದ್ದಾರೆ. ಲಕ್ಷ್ಮಣ ಬುರುಡ ಅವರು ಓಂಕಾರ ಬುರುಡ ಅವರ ಶ್ರೀ ಸಿದ್ಧರಾಮೇಶ್ವರ ನಾಟ್ಯ ಸಂಘದ

ಹಳ್ಳಿ-ಹಳ್ಳಿಗೆ ನಾಟಕ ಅಭಿನಯಿಸಲು ಹೋಗುತ್ತಾರೆ. ಸೋಲಾಪುರ ಜಿಲ್ಲೆಯ ಕನ್ನಡ ರಂಗಭೂಮಿ ಮಾಲಿಕೆಯಲ್ಲಿ ಲಕ್ಷ್ಮಣ ಬುರುಡ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

**೯) ಶಿವಚಲಪ್ಪಾ ಮುಂಡೂಡಗಿ**

ಅಕ್ಕಲಕೋಟ ತಾಲೂಕಿನ ಮೈಂದರ್ಗಿಯಲ್ಲಿ ಶಿವಚಲಪ್ಪಾ ಮುಂಡೂಡಗಿ ಜನಿಸಿದರು. ತಂದೆ ಕರಬಸಪ್ಪಾ, ತಾಯಿ ದುಂಡವ್ವ, ಮೈಂದರ್ಗಿಯ ಗುರಬಸಪ್ಪಾ ಗೊಬ್ಬುರ ಅವರ 'ಶ್ರೀ ಬಸವೇಶ್ವರ ನಾಟ್ಯ ಸಂಘದಲ್ಲಿ 'ಬಾಸಿಂಗ ಬಲ' ನಾಟಕದಲ್ಲಿ ಶಿವಚಲಪ್ಪಾ 'ಪ್ರಕಾಶ' ಪಾತ್ರ ಅಭಿನಯಿಸುವ ಮೂಲಕ ರಂಗ ಪ್ರವೇಶ ಮಾಡಿದರು. ಶಿವಚಲಪ್ಪಾ ಮುಂಡೂಡಗಿ ಅವರು ಉತ್ತಮ ಅಭಿನಯದಿಂದ ವೃತ್ತಿರಂಗಭೂಮಿಗೆ ಪ್ರವೇಶ ಮಾಡಿದರು.

ಮೈಂದರ್ಗಿಯ 'ಶ್ರೀ ೧೦೦೮ ಜಗದ್ಗುರು ರೇಣುಕಾಚಾರ್ಯ'. ಶ್ರೀ ರೇವಣಸಿದ್ಧ ನಾಟ್ಯ ಸಂಘ', ವಿಜಯ ಮಹಾಂತೇಶ್ವರ ನಾಟ್ಯ ಸಂಘ, ಬಿ.ಆರ್. ಅರಶಿಣಗೋಡೆ ಅವರ 'ಶ್ರೀ ಹುಚ್ಚೇಶ್ವರ ನಾಟ್ಯ ಸಂಘ', ಗುಡಗೇರಿ ಬಸವರಾಜ ಅವರ ಸಂಗಮೇಶ್ವರ ನಾಟ್ಯ ಸಂಘ ಹೀಗೆ ನಾಡಿನ ಹಲವು ವೃತ್ತಿರಂಗ ಭೂಮಿಗಳಲ್ಲಿ ಶಿವಚಲಪ್ಪಾ ಮುಂಡೂಡಗಿ ಅಪಾರವಾದ ಸೇವೆ ಸಲ್ಲಿಸಿದ್ದಾರೆ.

ಚಲನಚಿತ್ರ ನಟರಾದ ಸುಧೀರ, ಡಿಂಗ್ರಿ ನಾಗರಾಜ, ಪಂಕಜ, ಟೆನಿಸ್ ಕೃಷ್ಣ, ಲಲಿತಾ ಹಾಗೂ ಕಿರುತೆರೆಯ ಹಲವು ಕಲಾವಿದರೊಂದಿಗೆ ಶಿವಚಲಪ್ಪಾ ಮುಂಡೂಡಗಿ ಅವರು ಅಭಿನಯಿಸಿದ್ದಾರೆ. ರಂಗಸಜ್ಜಿಕೆ ನಿರ್ಮಾಣ, ನೇಪಥ್ಯ ಕೆಲಸಗಾರರಾಗಿ, ನಟರಾಗಿ ಹಾಗೂ ಹಳ್ಳಿ-ಹಳ್ಳಿಗೆ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಬಾಸಿಂಗ ಬಲ, ಬಸ್ ಕಂಡಕ್ಟರ, ರತ್ನ ಮಾಂಗಲ್ಯ ಕೈಲಾಗದ ಗಂಡ ಕೈಲಾಸ ಕಂಡ, ಬಸ್ ಹಮಾಲ, ಗಂಡನ ಆಜ್ಞೆ, ಗಂಡನ ಮನೆ, ಗೌಡರ ಗದ್ದಲ, ಬದುಕು ಬಂಗಾರವಾಯಿತು. ಚಿನ್ನದ ಗೊಂಬೆ, ಬಸವೇಶ್ವರ ಮಹಾತ್ಮೆ, ಹೇಮರೆಡ್ಡಿ ಮಲ್ಲಮ್ಮ, ರಾಜಾ ಸತ್ಯ ಹರಿಶ್ಚಂದ್ರ ಮುಂತಾಗಿ ಹಲವು ಪೌರಾಣಿಕ ಐತಿಹಾಸಿಕ, ಸಾಮಾಜಿಕ ನಾಟಕಗಳಲ್ಲಿ ಶಿವಚಲಪ್ಪಾ ಪ್ರಮುಖ ಪಾತ್ರಗಳು ಅಭಿನಯಿಸಿದ್ದಾರೆ.

ವೃತ್ತಿ ರಂಗಭೂಮಿಯಿಂದಲೇ ಇವರ ಉಪಜೀವನವಿದೆ. ಹಿರಿಯ ರಂಗಭೂಮಿ ಕಲಾವಿದ ಶಿವಚಲಪ್ಪಾ ಮುಂಡೂಡಗಿ ಹಲವು ನೋವು ಯಾತನೆಗಳನ್ನು ಅನುಭವಿಸುತ್ತಿದ್ದಾರೆ. ರಂಗಸಜ್ಜಿಕೆ ನಿರ್ಮಾಣದ ಕೆಲಸ ಮಾಡುತ್ತಾ ಉಪಜೀವನ ಸಾಗಿಸುತ್ತಿದ್ದಾರೆ.

## ೧೦) ಅಶೋಕ ಪಾಟೀಲ

ಅಕ್ಕಲಕೋಟ ತಾಲ್ಲೂಕಿನ ಮೈಂದರ್ಗಿಯಲ್ಲಿ ಅಶೋಕ ಪಾಟೀಲರು ಜನಿಸಿದರು. ತಂದೆ ಜಗದೇವಪ್ಪ, ತಾಯಿ ಗಂಗಾಬಾಯಿ, ಶಾಲಾ ದಿನಗಳಲ್ಲಿ ಅಶೋಕ ಪಾಟೀಲರು ರಂಗಭೂಮಿ ಪ್ರವೇಶ ಮಾಡಿದರು. ಮೈಂದರ್ಗಿಯ ವೃತ್ತಿರಂಗಭೂಮಿ ನಾಟಕ ಕಂಪನಿಗಳಾದ ಶ್ರೀ ರೇಣುಕಾಚಾರ್ಯ, ಶ್ರೀ ರೇವಣಸಿದ್ಧ, ಶ್ರೀ ವಿಜಯ ಮಹಾಂತೇಶ್ವರ ನಾಟ್ಯ ಸಂಘದಲ್ಲಿ ಅಶೋಕ ಪಾಟೀಲರು ಅಭಿನಯಿಸಿದ್ದಾರೆ.

ಗೌರಿ ಗೆದ್ದಳು, ಮಾತು ಕೊಟ್ಟ ಮುತ್ತೈದಿ, ಬದುಕು ಬಂಗಾರವಾಯಿತು. ಕಾಳಿಂಗ ಸರ್ಪ, ಹಸಿರು ಬಳೆ, ಶ್ರೀ ಶಿವಚಲೇಶ್ವರ ಮಹಾತ್ಮೆ, ಶ್ರೀ ಗುಡಾಪುರ ದಾನಮ್ಮದೇವಿ ಮಹಾತ್ಮೆ, ಕೈಲಾಗದ ಗಂಡ ಕೈಲಾಸ ಕಂಡ, ಸಿಂಧೂರ ಲಕ್ಷ್ಮಣ, ವಿಜಯಪುರದ ವೀರಪುತ್ರರು, ಹಲವು ಪೌರಾಣಿಕ, ಐತಿಹಾಸಿಕ, ಸಾಮಾಜಿಕ ನಾಟಕಗಳಲ್ಲಿ ಅಶೋಕ ಪಾಟೀಲರು ವಿಭಿನ್ನವಾದ ಪಾತ್ರ ಅಭಿನಯಿಸಿದ್ದಾರೆ.

ಮೈಂದರ್ಗಿಯ ಹಲವು ವೃತ್ತಿರಂಗಭೂಮಿ ಹಾಗೂ ಹವ್ಯಾಸಿ ರಂಗಭೂಮಿ ಕಲೆ ಉಳಿಸಿ ಬೆಳೆಸಲು ಧನಸಹಾಯ ನೀಡಿದ್ದಾರೆ. ಸಿದ್ದಣ್ಣ ಚಡಚಣ ಅವರು ಶ್ರೀ ಗುರುರೇವಣಸಿದ್ದ ನಾಟ್ಯ ಸಂಘ ಪುನಃ ಪ್ರಾರಂಭಿಸಲು ಅಶೋಕ ಪಾಟೀಲರು ಮುಂದೆ ಆಗಮಿಸಿದರು. ಇವರ ಕಂಪನಿ ಮೈಂದರ್ಗಿಯಲ್ಲಿ ಕ್ಯಾಂಪ ಹಾಕಿದಾಗ ಚಲನ ಚಿತ್ರನಟರಾದ ಟೆನಿಸ್ ಕೃಷ್ಣ ಅವರಿಗೆ ಕರೆಯಿಸಿದರು. ಮೈಂದರ್ಗಿ ಕ್ಯಾಂಪ್ ಯಶಸ್ವಿಯಾದ ಬಳಿಕ ಇವರ ಕಂಪನಿ ಶಹಾಬಾದ ಶರಣಬಸವೇಶ್ವರ ದೇವಾಲಯದ ಹತ್ತಿರ ಕ್ಯಾಂಪ್ ಹಾಕಿತು. ಅಂದಿನ ಗುಲಬರ್ಗಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಬಲವಂತರಾವ್ ಪಾಟೀಲರು ನಾಟಕ ವೀಕ್ಷಿಸಲು ಆಗಮಿಸಿದ್ದರು. (ಇಂದು ಬಲವಂತ ರಾವ್ ಪಾಟೀಲರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾಗಿದ್ದಾರೆ) ಅಶೋಕ ಪಾಟೀಲರ ಧನಸಹಾಯದಿಂದ ಶ್ರೀ ಗುರುಪಟ್ಟದ ರೇವಣಸಿದ್ಧ ನಾಟ್ಯ ಸಂಘ ಹಲವು ವರ್ಷ ಜಯಭೇರಿ ಪಡೆಯುತ್ತಲೇ. ನೆಲಸಮವಾಯಿತು. ಅಶೋಕ ಪಾಟೀಲರು ವೃತ್ತಿರಂಗಭೂಮಿ ಉಳಿಸಿ ಬೆಳೆಸಲು ಅಪಾರವಾದ ಸೇವೆ ಸಲ್ಲಿಸಿದ್ದಾರೆ.

## ೧೧) ಮಹಾಂತೇಶ ಅಂಕಲಗಿ

ಅಕ್ಕಲಕೋಟ ತಾಲೂಕಿನ ದುಧನಿಯಲ್ಲಿ ಮಹಾಂತೇಶ ಅಂಕಲಗಿ ಜನಿಸಿದರು. ಇವರ ತಂದೆ ಶಿವರಾಯ ಪ್ರಸಿದ್ಧ ರಂಗಭೂಮಿ ಕಲಾವಿದರು. ತಾಯಿ ಶಕುಂತಲಾ. ೧೯೭೬ರಲ್ಲಿ 'ಶ್ರೀ ಭಾಗ್ಯವಂತ ನಾಟ್ಯ ಸಂಘ' ಸ್ಥಾಪಿಸಿ ವೃತ್ತಿರಂಗಭೂಮಿಗೆ ಪ್ರವೇಶ ಮಾಡಿದರು. ಕರ್ನಾಟಕ-ಮಹಾರಾಷ್ಟ್ರದ ಹಲವು ಪ್ರದೇಶಗಳಲ್ಲಿ ಕ್ಯಾಂಪ್

ಹಾಕಿ ಯಶಸ್ವಿಯಾಗುತ್ತವೆ. ಕಂಪನಿ ಹಾನಿಗೆ ಒಳಗಾಗುತ್ತದೆ. ವೃತ್ತಿರಂಗಭೂಮಿಯಿಂದ ಹಲವು ನೋವು ಅನುಭವಿಸಿದ ಮಹಾಂತೇಶ ರಂಗಭೂಮಿಗೆ ವಿದಾಯ ಹೇಳದೆ, ಹವ್ಯಾಸಿ ಶ್ರೀ ಬಾಲಾಜಿ ನಾಟ್ಯ ಸಂಘಕ್ಕೆ ಪ್ರವೇಶ ಮಾಡುತ್ತಾರೆ.

ಕಂಪನಿಯ ಮಾಲೀಕರಾಗಿ ನಟರಾಗಿ, ನಿರ್ದೇಶಕರಾಗಿ ಮಹಾಂತೇಶ ಅಂಕಲಗಿ ಅಪಾರವಾಗಿ ಸೇವೆ ಸಲ್ಲಿಸಿದ್ದಾರೆ. ಶ್ರೀ ಶಂಕರ ಮೇತ್ರೆ ಅವರ ದುಧನಿಯ ಹವ್ಯಾಸಿ ಶ್ರೀ ಬಾಲಾಜಿ ನಾಟ್ಯ ಸಂಘದಲ್ಲಿ ಮಹಾಂತೇಶ ಅಂಕಲಗಿ ಖಳನಾಯಕನ ಗರಡಿಯಲ್ಲಿ ಮಹಾಂತೇಶ ಅಂಕಲಗಿ ಅವರು ಬೆಳೆಯುತ್ತಾರೆ.

ಕಲಿತ ಕಳ್ಳ, ರಕ್ತ ಸಿಂಧೂರ, ಗರುಡ ರಾಜ್ಯದಲ್ಲಿ ಘಟಸರ್ಪ, ತೊಟ್ಟಿಲು ತೂಗಲಿಲ್ಲ ಭಾಗ್ಯ ಬದುಕಲಿಲ್ಲ. ರೈತ ನಗಲಿಲ್ಲ–ಸರಕಾರ ಉಳಿಯಲ್ಲಿಲ್ಲ. ದುರಂತ ನಾಯಕಿ, ಗಂಗಿ ಹಿಡಿಶ್ಯಾಳ ಗುಂಗ, ಮುಡಿಯೇರಿದ ಮಲ್ಲಿಗೆ, ಸತ್ಯಮೇವ ಜಯತೆ, ಇಂದಿನ ಭಾರತ, ಮನೆಯ ಮಾನ ಅಣ್ಣನ ಪ್ರಾಣ, ನಾನು ಮಾಡಿದ ಮಂತ್ರಿ, ಕುಂಕಮ ತಂದ ಕೈಲಾಸ ಹೀಗೆ ಸುಮಾರು ಐವತ್ತಕ್ಕಿಂತಲೂ ಹೆಚ್ಚಿನ ಸಂಖ್ಯೆಯ ನಾಟಕಗಳು ಅಭಿನಯಿಸಿದ್ದಾರೆ.

ದುಧನಿ ಬಾಲಾಜಿ ನಾಟ್ಯ ಸಂಘದ ರಂಗವೇದಿಕೆಗೆ ಮಹಾಂತೇಶ ಅಂಕಲಗಿ ಖಳನಾಯಕನ ಪಾತ್ರ ಅಭಿನಯಿಸಲು ಬಹಳ ಮಹತ್ವ ಪಡೆದಿದೆ. ರಂಗವೇದಿಕೆಗೆ ಮಹಾಂತೇಶ ಅಂಕಲಗಿ ಅವರು ಕಾರಿನೊಳಗೆ ಆಗಮಿಸುತ್ತಾರೆ. ಚಲಚಿತ್ರಗಳಲ್ಲಿ ಖಳನಾಯಕರಿಗೆ ಬೇಕಾಗುವ ಸಲಕರಣೆಗಳು ರಂಗಭೂಮಿ ಮೇಲೆ ತರುವ ಮೂಲಕ ಹೊಸ ಪ್ರಯೋಗ ಮಾಡಿದ್ದಾರೆ. ಮಹಾಂತೇಶ ಅಂಕಲಗಿ ನಿಜ ಜೀವನದಲ್ಲಿ ಹಲವು ನೋವು ಯಾತನೆಗಳು ಅನುಭವಿಸುತ್ತಾರೆ.

## ೧೨) ಈರಣ್ಣಾ ನಾಶಿಗರ

ಸೋಲಾಪುರ ನಗರದ ಪ್ರಸಿದ್ಧ ಮರಾಠಿ ದಿನಪತ್ರಿಕೆಯಾದ ದೈನಿಕ ಸಂಚಾರದಲ್ಲಿ ಈರಣ್ಣಾ ನಾಶಿಗರ ಹಿರಿಯ ಲಿಪಿಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರ ತಂದೆ ಶಿವಶರಣ, ತಾಯಿ ದೊಂಡಾಬಾಯಿ. ಆರನೇ ತರಗತಿಯಲ್ಲಿರುವಾಗಲೇ ೧೯೬೯ರಲ್ಲಿ 'ಸಾಕ್ಷರತಾ ಸಾಫಲ್ಯ', ೧೯೭೦ರಲ್ಲಿ 'ಬಾಳು ಬೆಳಗಿತು' ಸಾಮಾಜಿಕ ನಾಟಕ ಅಭಿನಯಿಸಿದರು. ಮಾದನ ಹಿಪ್ಪರ್ಗಾ ಶ್ರೀ ಶಿವಲಿಂಗೇಶ್ವರ ನಾಟ್ಯ ಸಂಘದಲ್ಲಿ ಬಂಜೆ ತೊಟ್ಟಿಲು, ಪಂಕಜ, ಬಸ್ ಹಮಾಲ, ಹೆಣ್ಣಿನ ಜೀವನ ಹಲವು ಸಾಮಾಜಿಕ ನಾಟಕಗಳಲ್ಲಿ ಈರಣ್ಣಾ ಹಾಸ್ಯ ಪಾತ್ರ ಅಭಿನಯಿಸಿದರು.

ಸೋಲಾಪುರದ ಶ್ರೀ ಸಂಗಮೇಶ್ವರ ಮಹಾವಿದ್ಯಾಲಯದಲ್ಲಿ ಬಿ.ಕಾಂ ಅಧ್ಯಯನಕ್ಕೆ ಪ್ರವೇಶ ಪಡೆದರು. ಈ ಸಂಸ್ಥೆಯ ಶ್ರೀ ಸಿದ್ದೇಶ್ವರ ಬೋರ್ಡಿಂಗದಲ್ಲಿ ವಾಸಿಸುವ ವ್ಯವಸ್ಥೆ ಮಾಡಿಕೊಂಡರು. ಸಂಗಮೇಶ್ವರ ಮಹಾವಿದ್ಯಾಲಯದಲ್ಲಿ

ಹಲವು ಕನ್ನಡ ಸಾಮಾಜಿಕ ನಾಟಕಗಳು ಅಭಿನಯಿಸುತ್ತಿದ್ದರು. ೧೯೭೬ ದೇವರಿಗೆ ನೆನಪಿಲ್ಲ, ೧೯೭೭ ಮಗಳ ಮಾರಾಟ, ೧೯೭೬-೭೭ ಅಳಿಯ ದೇವರು, ಮಾಮುಲ, ೧೯೭೮ ಶಂಕವಾದ್ಯ ನಾಟಕಗಳು ಇವರು ಸಂಗಮೇಶ್ವರ ಮಹಾವಿದ್ಯಾಲಯಗಳಲ್ಲಿ ಅಭಿನಯಿಸಿದರು. ೧೯೭೬-೭೭ರ ಸಂಗಮೇಶ್ವರ ಮಹಾವಿದ್ಯಾಲಯದ ಸ್ಮರಣ ಸಂಚಿಯಲ್ಲಿ ಕನ್ನಡ ನಾಟಕಗಳಿಗೆ ಪ್ರಥಮ ಬಹುಮಾನ ಲಭಿಸಿದೆಯೆಂದು ಉಲ್ಲೇಖವಿದೆ. ಈ ಬಹುಮಾನ ಪ್ರಶಸ್ತಿಯನ್ನು ಈರಣ್ಣಾ ನಾಶಿಗರ ಅವರಿಗೆ ಲಭಿಸಿದೆ.

ಈರಣ್ಣಾ ನಾಶಿಗರ ಅವರು ತಮ್ಮ ನೌಕರಿಯ ಕಾಯಕದೊಂದಿಗೆ ಸೋಲಾಪುರದಲ್ಲಿ 'ಶ್ರೀ ಸಿದ್ಧರಾಮೇಶ್ವರ ನಾಟ್ಯ ಸಂಘ' ಸ್ಥಾಪಿಸಿ ಅದರ ಮೂಲಕ ನೂರಾರು ನಾಟಕಗಳಲ್ಲಿ ಅಭಿನಯಿಸಿದ್ದಾರೆ.

ಬಸ್ ಕಂಡಕ್ಟರ, ತಾಯಿಯ ಕರುಳು, ದಾರಿ ದೀಪ, ಗರುಡ ರಾಜ್ಯದಲ್ಲಿ ಘಟಸರ್ಪ, ಸಿಡಿದೆದ್ದ ಶಿವಶಕ್ತಿ, ಅಣ್ಣ ಕೊಟ್ಟ ಮಾಂಗಲ್ಯ ನೂರಾರು ನಾಟಕಗಳು ಅಭಿನಯಿಸಿದ್ದಾರೆ. ಸೋಲಾಪುರ ಮಹಾನಗರ ಪಾಲಿಕೆಯ 'ಹುತಾತ್ಮ ಸ್ಮೃತಿ ರಂಗ ಮಂದಿರದಲ್ಲಿ' ಇವರು ನಾಟಕಗಳು ಅಭಿನಯಿಸಿದ್ದಾರೆ.

### ೧೩) ನೀಲಕಂಠ ವಿಭೂತೆ

ಅಕ್ಕಲಕೋಟ ತಾಲೂಕಿನ ಕರಜಗಿ ಗ್ರಾಮದಲ್ಲಿ ನೀಲಕಂಠ ವಿಭೂತೆ ಜನಿಸಿದರು. ಇವರು ಸೋಲಾಪುರ ನಗರದಲ್ಲಿ ವಾಸವಾಗಿ ನೂರಾರು ನಾಟಕಗಳು ಅಭಿನಯಿಸಿದ್ದಾರೆ. ರಕ್ತದೀಪ, ಕಣ್ಣು ಹೊಡೆದ ಹೆಣ್ಣು, ಶ್ರೀಮಂತನ ಸೊಕ್ಕು, ಜೀವನ ಸಂಘರ್ಷ, ಗೌರಿಗೆದ್ದಳು, ಆಶಾಲತಾ, ಅತ್ತಿಗೆ ಹೆತ್ತಮ್ಮ, ಸೇಡು ಬಾಳಿಗೊಂದು ಕೇಡು, ಮಾತು ಕೊಟ್ಟ ಮುತ್ತೈದೆ, ಗರತಿ ಹೆಣ್ಣಿಗೆ ಗರ್ವದ ಗಂಡ, ಗರುಡ ರಾಜ್ಯದಲ್ಲಿ ಘಟಸರ್ಪ, ಸಿಡಿದೆದ್ದ ಶಿವಶಕ್ತಿ, ಅಣ್ಣ ಕೊಟ್ಟ ಮಾಂಗಲ್ಯ ನೂರಾರು ನಾಟಕಗಳು ಇವರು ಅಭಿನಯಿಸಿದ್ದಾರೆ.

ಸೊಲ್ಲಾಪುರದ ಶ್ರೀ ಸಿದ್ಧರಾಮೇಶ್ವರ ನಾಟ್ಯ ಸಂಘದ ಮೂಲಕ ಹಲವಾರು ಕಲಾವಿದರೊಂದಿಗೆ ಪ್ರತಿವರ್ಷ ನಾಟಕ ಅಭಿನಯಿಸಲು ಇವರು ಮುಂದೆ ಬರುತ್ತಾರೆ. ಸೊಲ್ಲಾಪುರದ ಸುಸಜ್ಜಿತವಾದ ಬಸವಂತಿ ರಂಗಮಂದಿರ, ದಮಾಣಿ ರಂಗ ಮಂದಿರ, ಹುತಾತ್ಮ ರಂಗಮಂದಿರಗಳಲ್ಲಿ ಇವರು ನಾಟಕ ಅಭಿನಯಿಸಿದ್ದಾರೆ. ಇವರು ನಟರಾಗಿ, ನಿರ್ದೇಶಕರಾಗಿ ಅಪಾರವಾದ ಸೇವೆ ಸಲ್ಲಿಸುತ್ತಿದ್ದಾರೆ. ಸೋಲಾಪುರ ಕನ್ನಡ ರಂಗಭೂಮಿ ಮಾಲಿಕೆಯಲ್ಲಿ ಇವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

## ೧೪) ಸೂರ್ಯಕಾಂತಿ ರೇವತಗಾವ

ಅಕ್ಕಲಕೋಟ ತಾಲೂಕಿನ ಕರಜಗಿ ಗ್ರಾಮದಲ್ಲಿ ಸೂರ್ಯಕಾಂತಿ ರೇವತಗಾವ ಅವರು ಜನಿಸಿದರು. ತಂದೆ ಈರಪ್ಪಾ, ತಾಯಿ ಬಂಗಾರೆವ್ವ. ಶಾಲಾದಿನಗಳಲ್ಲಿ ಸೂರ್ಯಕಾಂತಿ, ಗೌರಿ ಗೆದ್ದಳು ನಾಟಕ ಅಭಿನಯಿಸುವ ಮೂಲಕ ರಂಗಪ್ರವೇಶ ಮಾಡಿದರು. ಸಂಸಾರದ ಉಪಜೀವನದ ಸಲುವಾಗಿ ಸೋಲಾಪುರದಲ್ಲಿ ವಾಸಿಸಿದ್ದಾರೆ. ಶ್ರೀ ಸಿದ್ಧರಾಮೇಶ್ವರ ನಾಟ್ಯ ಸಂಘದಲ್ಲಿ ಇವರು ನೂರಾರು ನಾಟಕಗಳಲ್ಲಿ ಅಭಿನಯಿಸಿದ್ದಾರೆ.

ಶ್ರೀಮಂತನ ಸೊಕ್ಕು, ಆಶಾಲತಾ, ಸೇಡು ಬಾಳಿಗೊಂದು ಕೇಡು, ಜೀವನ ಸಂಘರ್ಷ, ಗರತಿ ಹೆಣ್ಣಿಗೆ ಗರ್ವದ ಗಂಡ, ಗರುಡ ರಾಜ್ಯದಲ್ಲಿ ಘಟಸರ್ಪ, ಅಣ್ಣ ಕೊಟ್ಟ ಮಾಂಗಲ್ಯ ಮುಂತಾಗಿ ನೂರಾರು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಸೋಲಾಪುರದ ಸುಸಜ್ಜಿತವಾದ ಬಸವಂತಿ ರಂಗಮಂದಿರ, ದಮಾಣಿ ರಂಗಮಂದಿರ, ಹುತಾತ್ಮ ರಂಗಮಂದಿರಗಳಲ್ಲಿ ಇವರು ಅಭಿನಯಿಸಿದ್ದಾರೆ.

## ೧೫) ಚಂದ್ರಕಾಂತ ಅಂಬಲಗಿ

ಚಂದ್ರಕಾಂತ ಅಂಬಲಗಿ ಅವರು ಸೊಲ್ಲಾಪುರದಲ್ಲಿ ವಾಸಿಸುತ್ತಾರೆ. ಶ್ರೀ ಸಿದ್ಧರಾಮೇಶ್ವರ ನಾಟ್ಯ ಸಂಘದಲ್ಲಿ ಇವರು ನೂರಾರು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಇವರ ತಂದೆ ವೀರಭದ್ರಪ್ಪಾ, ತಾಯಿ ಕಸ್ತೂರಿಬಾಯಿ. ಮಾತು ಕೊಟ್ಟ ಮುತ್ತೈದೆ, ಗರತಿ ಹೆಣ್ಣಿಗೆ ಗರ್ವದ ಗಂಡ, ಪ್ರಾಣ ಹೋದರು ಮಾನಬೇಕು, ಅಣ್ಣ ಕೊಟ್ಟ ಮಾಂಗಲ್ಯ ಮುಂತಾಗಿ ಹಲವು ನಾಟಕಗಳಲ್ಲಿ ಇವರು ಅಭಿನಯಿಸಿದ್ದಾರೆ. ಸೊಲ್ಲಾಪುರದ ಸುಸಜ್ಜಿತ ಬಸವಂತ ರಂಗಮಂದಿರ, ದಮಾಣಿ ರಂಗಮಂದಿರ, ಹುತಾತ್ಮ ರಂಗಮಂದಿರಗಳಲ್ಲಿ ಇವರು ನಾಟಕ ಅಭಿನಯಿಸಿದ್ದಾರೆ. ಸೊಲ್ಲಾಪುರ ಕನ್ನಡ ರಂಗಭೂಮಿ ಮಾಲಿಕೆಯಲ್ಲಿ ಇವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

## ೧೬) ರಾಜಶೇಖರ ಸ್ವಾಮಿ

ರಾಜಶೇಖರ ಅಂಬಲಗಿ ಅವರು ಸೊಲ್ಲಾಪುರದಲ್ಲಿ ವಾಸಿಸುತ್ತಾರೆ. ಸೊಲ್ಲಾಪುರದ ಶ್ರೀ ಸಿದ್ಧರಾಮೇಶ್ವರ ನಾಟ್ಯಸಂಘದಲ್ಲಿ ಇವರು ನೂರಾರು ನಾಟಕಗಳು ಅಭಿನಯಿಸಿದ್ದಾರೆ. ಮಾತು ಕೊಟ್ಟ ಮುತ್ತೈದಿ, ಗರತಿ ಹೆಣ್ಣಿಗೆ ಗರ್ವದ ಗಂಡ, ಪ್ರಾಣ ಹೋದರೂ ಮಾನಬೇಕು. ಅಣ್ಣ ಕೊಟ್ಟ ಮಾಂಗಲ್ಯ ಹೀಗೆ ಹಲವಾರು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಸೊಲ್ಲಾಪುರದ ಸುಸಜ್ಜಿತ ಬಸವಂತಿ ರಂಗಮಂದಿರ, ದಮಾಣಿ ರಂಗಮಂದಿರ, ಹುತಾತ್ಮಾ ರಂಗಮಂದಿರಗಳಲ್ಲಿ ಇವರು ನಾಟಕ

ಅಭಿನಯಿಸಿದ್ದಾರೆ. ಸೊಲ್ಲಾಪುರ ಕನ್ನಡ ರಂಗಭೂಮಿ ಮಾಲಿಕೆಯಲ್ಲಿ ಇವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

**೧೭) ಚನ್ನಯ್ಯ ಹಿರೇಮಠ**

ಚನ್ನಯ್ಯ ಹಿರೇಮಠ ಅವರು ಸೊಲ್ಲಾಪುರದಲ್ಲಿ ವಾಸವಾಗಿದ್ದಾರೆ. ಸೋಲಾಪುರದ ಶ್ರೀ ಸಿದ್ಧರಾಮೇಶ್ವರ ನಾಟ್ಯಸಂಘದಲ್ಲಿ ಹಲವಾರು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಚೆನ್ನಯ್ಯ ಖಳನಾಯಕನ ಪಾತ್ರ ಅಭಿನಯಿಸಿ ಪ್ರಸಿದ್ಧರಾಗಿದ್ದಾರೆ. ಸಿಂಧೂರ ಲಕ್ಷ್ಮಣ, ಸಂಗಮ, ಭಾರತೀಯ ಬ್ರಿಟಿಷರು, ಪ್ರಾಣ ಹೋದರೂ ಮಾನ ಬೇಕು, ಅಣ್ಣ ಕೊಟ್ಟ ಮಾಂಗಲ್ಯ ಹೀಗೆ ಹಲವಾರು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಸೋಲಾಪುರದ ಸುಸಜ್ಜಿತವಾದ ಬಸವಂತಿ ರಂಗಮಂದಿರ, ದಮಾಣಿ ರಂಗಮಂದಿರ, ಹುತಾತ್ಮಾ ರಂಗಮಂದಿರಗಳಲ್ಲಿ ಇವರು ನಾಟಕ ಅಭಿನಯಿಸಿದ್ದಾರೆ. ಸೋಲಾಪುರ ಕನ್ನಡ ರಂಗಭೂಮಿ ಮಾಲಿಕೆಯಲ್ಲಿ ಇವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

**೧೮) ಶ್ರೀಮಂತ ದುಧನಿ**

ಸೋಲಾಪುರದ ನರಸಿಂಗಜಿ ಮಿಲ್ಲಿನ ಕಾರ್ಮಿಕರಾಗಿ ಶ್ರೀಮಂತ ದುಧನಿ ಅವರು ಕೆಲಸ ಮಾಡುತ್ತಾ ರಂಗ ಪ್ರವೇಶ ಮಾಡಿದರು. ಸೋಲಾಪುರದ ಶ್ರೀ ಸಿದ್ಧರಾಮೇಶ್ವರ ನಾಟ್ಯ ಸಂಘದ ಹಲವಾರು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ದಾರಿದೀಪ, ಬಡವನ ಭವಿಷ್ಯ, ಕವಿಕೊಟ್ಟ ಹೊಸ ಬಾಳು, ಅಣ್ಣ ಕೊಟ್ಟ ಮಾಂಗಲ್ಯ ಹೀಗೆ ಹಲವಾರು ಸಾಮಾಜಿಕ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಸೋಲಾಪುರದ ಸುಸಜ್ಜಿತವಾದ ಹುತಾತ್ಮಾ ರಂಗಮಂದಿರದಲ್ಲಿ ನಾಟಕ ಅಭಿನಯಿಸಿದ್ದಾರೆ.

**೧೯) ಮಲ್ಲಿಕಾರ್ಜುನ ಪಾಟೀಲ**

ಮಲ್ಲಿಕಾರ್ಜುನ ಪಾಟೀಲ ಅವರು ಸೋಲಾಪುರದಲ್ಲಿ ವಾಸವಾಗಿದ್ದಾರೆ. ಸೋಲಾಪುರದ ಶ್ರೀ ಸಿದ್ಧರಾಮೇಶ್ವರ ನಾಟ್ಯಸಂಘದಲ್ಲಿ ಹಲವು ನಾಟಕಗಳು ಅಭಿನಯಿಸಿದ್ದಾರೆ. ಆಶಾಲತಾ, ದಾರಿದೀಪ, ಗರುಡ ರಾಜ್ಯದಲ್ಲಿ ಘಟಸರ್ಪ, ಸಿಡಿದೆದ್ದ ಶಿವಶಕ್ತಿ, ಅಣ್ಣ ಕೊಟ್ಟ ಮಾಂಗಲ್ಯ ಮುಂತಾದ ಹಲವಾರು ನಾಟಕಗಳಲ್ಲಿ ಇವರು ಅಭಿನಯಿಸಿದ್ದಾರೆ. ಸೋಲಾಪುರದ ಸುಸಜ್ಜಿತವಾದ ಹುತಾತ್ಮಾ ರಂಗಮಂದಿರದಲ್ಲಿ ಅಭಿನಯಿಸಿದ್ದಾರೆ. ಸೋಲಾಪುರ ಕನ್ನಡ ರಂಗಭೂಮಿ ಮಾಲಿಕೆಯಲ್ಲಿ ಇವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

೨೦) ಮಲ್ಲಪ್ಪಾ ಕುಂಭಾರ

ದಕ್ಷಿಣ ಸೋಲಾಪುರ ತಾಲೂಕಿನ ಮಂದ್ರೂಪ ಗ್ರಾಮದಲ್ಲಿ ಮಲ್ಲಪ್ಪಾ ಕುಂಭಾರ ಜನಿಸಿದರು. ನಟರಾಗಿ, ನಿರ್ದೇಶಕರಾಗಿ ಹಾಗೂ ರಂಗಸಜ್ಜಿಕೆ ನಿರ್ಮಾಣ ಮಾಡುತ್ತಾರೆ. ಮಂದ್ರೂಪ ಗ್ರಾಮದ ಶ್ರೀ ಚೌಡೇಶ್ವರಿಯ ಜಾತ್ರೆಯಲ್ಲಿ ಪ್ರತಿ ವರ್ಷ ಇವರು ನಾಟಕ ಪ್ರದರ್ಶಿಸುತ್ತಾರೆ.

ಕಲಿತ ಕಳ್ಳ, ಬಡವ ಬದುಕಲೇಬೇಕು, ಸಾವಿರ ಹಳ್ಳಿಯ ಸರದಾರ, ಗುರಿ ಸಾಧಿಸಿದ ರಣಧೀರರು, ಸೇಡಿನ ಕ್ರಾಂತಿ, ರೈತನ ಮಕ್ಕಳು, ಕವಿ ಕೊಟ್ಟ ಹೊಸ ಬಾಳು, ಜೊತೆಗೆ ಹಲವಾರು ಸಾಮಾಜಿಕ ನಾಟಕಗಳಲ್ಲಿ ಇವರು ಅಭಿನಯಿಸಿದ್ದಾರೆ. ಇವರು ನಾಟಕ ರಚನಾಕಾರರಿಗೆ, ಕಲಾವಿದರಿಗೆ ಹಾಗೂ ಸಂಗೀತಗಾರರಿಗೆ ಧನಸಹಾಯ ನೀಡಿದ್ದಾರೆ. ಹವ್ಯಾಸಿ ರಂಗಭೂಮಿಗೆ ಇವರ ಕೊಡುಗೆ ಅಪಾರವಾಗಿದೆ.

೨೧) ಸಿದ್ದಾರಾಮ ಕುಂಭಾರ

ದಕ್ಷಿಣ ಸೋಲಾಪುರ ತಾಲೂಕಿನ ಮಂದ್ರೂಪ ಗ್ರಾಮದಲ್ಲಿ ಸಿದ್ದಾರಾಮ ಕುಂಭಾರ ಜನಿಸಿದರು. ತಂದೆ ಸೋಮಣ್ಣಾ, ತಾಯಿ ಭಾಗೀರಥಿ, ಮಲ್ಲಪ್ಪಾ ಕುಂಭಾರ ಅವರ 'ಶ್ರೀ ವೀರಭದ್ರೇಶ್ವರ ನಾಟ್ಯ ಸಂಘ'ದಲ್ಲಿ ಇವರು ಹಲವು ನಾಟಕಗಳು ಅಭಿನಯಿಸಿದ್ದಾರೆ. ಕಲಿತ ಕಳ್ಳ ಬಡವ ಬದುಕಲೇಬೇಕು, ಸಾವಿರ ಹಳ್ಳಿ ಸರದಾರ, ಗುರಿ ಸಾಧಿಸಿದ ರಣಧೀರರು, ಸೇಡಿನ ಕ್ರಾಂತಿ, ರೈತನ ಮಕ್ಕಳು, ಕವಿ ಕೊಟ್ಟ ಹೊಸ ಬಾಳು ಮುಂತಾಗಿ ಹಲವು ಸಾಮಾಜಿಕ ನಾಟಕಗಳಲ್ಲಿ ವಿಭಿನ್ನವಾದ ಪಾತ್ರ ಅಭಿನಯಿಸಿದ್ದಾರೆ. ಇವರಿಗೆ ಕನ್ನಡ ಓದಲು, ಬರೆಯಲು ಬರುವದಿಲ್ಲ. ಮರಾಠಿಯಲ್ಲಿ ಬರೆದುಕೊಂಡು ಕನ್ನಡ ನಾಟಕ ಅಭಿನಯಿಸಿದ್ದಾರೆ.

೨೨) ಕೃಷ್ಣಾ ದೇಶಮುಖ

ದಕ್ಷಿಣ ಸೋಲಾಪುರ ತಾಲೂಕಿನ ಮಂದ್ರೂಪ ಗ್ರಾಮದಲ್ಲಿ ಕೃಷ್ಣಾ ದೇಶಮುಖರು ಜನಿಸಿದರು. ತಂದೆ ನಾರಾಯಣ, ತಾಯಿ ಕಾಶಿಬಾಯಿ. ಮಲ್ಲಪ್ಪಾ ಕುಂಭಾರ ಅವರ ಶ್ರೀ ವೀರಭದ್ರೇಶ್ವರ ನಾಟ್ಯ ಸಂಘದಲ್ಲಿ ಇವರು ಹಲವು ನಾಟಕಗಳು ಅಭಿನಯಿಸಿದ್ದಾರೆ. ಕಲಿತ ಕಳ್ಳ, ಬಡವ ಬದುಕಲೇಬೇಕು, ಸಾವಿರ ಹಳ್ಳಿ ಸರದಾರ, ಗುರಿ ಸಾಧಿಸಿದ ರಣಧೀರರು, ಸೇಡಿನ ಕ್ರಾಂತಿ, ರೈತನ ಮಕ್ಕಳು, ಕವಿ ಕೊಟ್ಟ ಹೊಸ ಬಾಳು ಮುಂತಾಗಿ ಹಲವು ಸಾಮಾಜಿಕ ನಾಟಕಗಳಲ್ಲಿ ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಹವ್ಯಾಸಿರಂಗಭೂಮಿಗೆ ಕೃಷ್ಣಾ ದೇಶಮುಖರು ಅಪಾರವಾದ ಸೇವೆ ಸಲ್ಲಿಸಿದ್ದಾರೆ.

### ೨೩) ಈರಣ್ಣಾ ಮೇತ್ರೆ

ದಕ್ಷಿಣ ಸೋಲಾಪುರ ತಾಲೂಕಿನ ಮಂದ್ರೂಪ ಗ್ರಾಮದಲ್ಲಿ ಈರಣ್ಣಾ ಮೇತ್ರೆ ಜನಿಸಿದರು. ಮಲ್ಲಪ್ಪಾ ಕುಂಭಾರ ಅವರ ಶ್ರೀ ವೀರಭದ್ರೇಶ್ವರ ನಾಟ್ಯ ಸಂಘದಲ್ಲಿ ಹಲವು ನಾಟಕಗಳು ಅಭಿನಯಿಸಿದ್ದಾರೆ. ಕಲಿತ ಕಳ್ಳ, ಬಡವ ಬದುಕಲೇಬೇಕು. ಸಾವಿರ ಹಳ್ಳಿ ಸರದಾರ, ಗುರಿ ಸಾಧಿಸಿದ ರಣಧೀರರು, ಸೇಡಿನ ಕ್ರಾಂತಿ, ರೈತನ ಮಕ್ಕಳು, ಕವಿ ಕೊಟ್ಟ ಹೊಸ ಬಾಳು, ಹಲವು ಸಾಮಾಜಿಕ ನಾಟಕಗಳಲ್ಲಿ ಕಥಾ ನಾಯಕನ ಪ್ರಮುಖ ಪಾತ್ರ ಅಭಿನಯಿಸಿದ್ದಾರೆ. ನಟರಾಗಿ, ನಿರ್ದೇಶಕರಾಗಿ ಸಂಗೀತಗಾರರಾಗಿ ಹಾಗೂ ರಂಗಸಜ್ಜಿಕೆ ನಿರ್ಮಾಣ ಮಾಡುತ್ತಾರೆ. ಹವ್ಯಾಸಿ ರಂಗಭೂಮಿಗೆ ಈರಣ್ಣಾ ಮೇತ್ರೆ ಅವರ ಕೊಡುಗೆ ಅಪಾರವಾಗಿದೆ.

### ೨೪) ಸುಭಾಶ ಸುತಾರ

ದಕ್ಷಿಣ ಸೋಲಾಪುರ ತಾಲೂಕಿನ ಮಂದ್ರೂಪ ಗ್ರಾಮದಲ್ಲಿ ಸುಭಾಶ ಸುತಾರ ಜನಿಸಿದರು ಮಲ್ಲಪ್ಪಾ ಕುಂಭಾರ ಅವರ ಶ್ರೀ ವೀರಭದ್ರೇಶ್ವರ ನಾಟ್ಯ ಸಂಘದಲ್ಲಿ ಹಲವು ನಾಟಕಗಳು ಅಭಿನಯಿಸಿದ್ದಾರೆ. ಕಲಿತ ಕಳ್ಳ, ಬಡವ ಬದುಕಲೇಬೇಕು, ಸಾವಿರ ಹಳ್ಳಿ ಸರದಾರ, ಗುರಿ ಸಾಧಿಸಿದ ರಣಧೀರರು, ಸೇಡಿನ ಕ್ರಾಂತಿ, ರೈತರು ಮಕ್ಕಳು, ಕವಿ ಕೊಟ್ಟ ಹೊಸ ಬಾಳು, ಹಲವು ಸಾಮಾಜಿಕ ನಾಟಕಗಳಲ್ಲಿ ಪಾತ್ರ ಅಭಿನಯಿಸಿದ್ದಾರೆ. ನಟರಾಗಿ, ನಿರ್ದೇಶಕರಾಗಿ, ಸಂಗೀತಗಾರರಾಗಿ ಹಾಗೂ ರಂಗಸಜ್ಜಿಕೆ ನಿರ್ಮಾಣ ಮಾಡುತ್ತಾರೆ. ಹವ್ಯಾಸಿ ರಂಗಭೂಮಿಗೆ ಸುಭಾಶ ಸುತಾರ ಅವರ ಕೊಡುಗೆ ಅಪಾರವಾಗಿದೆ.

### ೨೫) ಸುರೇಶ ಕುಂಭಾರ

ದಕ್ಷಿಣ ಸೋಲಾಪುರ ತಾಲೂಕಿನ ಮಂದ್ರೂಪ ಗ್ರಾಮದಲ್ಲಿ ಸುರೇಶ ಕುಂಭಾರ ಜನಿಸಿದರು. ಇವರು ಮಲ್ಲಪ್ಪಾ ಕುಂಭಾರ ಅವರ ಶ್ರೀ ವೀರಭದ್ರೇಶ್ವರ ನಾಟ್ಯ ಸಂಘದಲ್ಲಿ ಹಲವು ನಾಟಕಗಳು ಅಭಿನಯಿಸಿದ್ದಾರೆ. ಕಲಿತ ಕಳ್ಳ, ಬಡವ ಬದುಕಲೇಬೇಕು, ಸಾವಿರ ಹಳ್ಳಿ ಸರದಾರ, ಗುರಿ ಸಾಧಿಸಿದ ರಣಧೀರರು, ಸೇಡಿನ ಕ್ರಾಂತಿ ಮುಂತಾಗಿ ನೂರಾರು ಪ್ರದರ್ಶನಗಳಲ್ಲಿ ಅಭಿನಯಿಸಿದ್ದಾರೆ.

### ೨೬) ನಾಗೇಂದ್ರಪ್ಪಾ ಗೌಡಗಾಂವ

ದಕ್ಷಿಣ ಸೋಲಾಪುರ ತಾಲೂಕಿನ ಮಂದ್ರೂಪ ಗ್ರಾಮದ ನಾಗೇಂದ್ರಪ್ಪಾ ಗೌಡಗಾಂವ ಹವ್ಯಾಸಿ ರಂಗಭೂಮಿ ಕಲಾವಿದ. ಮಲ್ಲಪ್ಪಾ ಕುಂಭಾರ ಅವರ 'ಶ್ರೀ ವೀರಭದ್ರೇಶ್ವರ ನಾಟ್ಯ ಸಂಘ'ದಲ್ಲಿ ಇವರು ಹಲವು ನಾಟಕಗಳು ಅಭಿನಯಿಸಿದ್ದಾರೆ.

ಕಲಿತಕಳ್ಳ, ಬಡವ ಬದುಕಲೇಬೇಕು, ಸಾವಿರಹಳ್ಳಿ ಸರದಾರ, ಗುರಿ ಸಾಧಿಸಿದ ರಣಧೀರರು, ಸೇಡಿನ ಕ್ರಾಂತಿ, ರೈತನ ಮಕ್ಕಳು, ಕವಿಕೊಟ್ಟ ಹೊಸ ಬಾಳು, ಹಲವು ಸಾಮಾಜಿಕ ನಾಟಕಗಳಲ್ಲಿ ವಿಭಿನ್ನವಾದ ಪಾತ್ರ ಅಭಿನಯಿಸಿದ್ದಾರೆ. ಹವ್ಯಾಸಿ ರಂಗಭೂಮಿಗೆ ನಾಗೇಂದ್ರಪ್ಪಾ ಗೌಡಗಾಂವ ಕೊಡುಗೆ ಅಪಾರವಾಗಿದೆ.

೨೭) ವೀರೇಶ ಹಿರೇಮಠ

ಅಕ್ಕಲಕೋಟ ತಾಲೂಕಿನ ಮೈಂದರ್ಗಿಯಲ್ಲಿ ವೀರೇಶ ಹಿರೇಮಠ ವಾಸಿಸುತ್ತಾರೆ. ವೃತ್ತಿರಂಗಭೂಮಿ ಕಲಾವಿದರಾದ ನಂದಾ ಹಿರೇಮಠ ಅವರ ಉದರದಿಂದ ವೀರೇಶ ಜನಿಸಿದರು. ತಾಯಿಯ ಪ್ರಭಾವದಿಂದ ರಂಗಭೂಮಿಯ ಹಾಡುಗಳು ಹಾಡುವುದನ್ನು ಕಲಿತರು. ಬಾಲ್ಯದಿಂದಲೂ ರಂಗಭೂಮಿಯಲ್ಲಿಯೇ ಬೆಳೆದ ವೀರೇಶ ಪ್ಯಾಡ ಮಾಸ್ತರರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ವೃತ್ತಿರಂಗಭೂಮಿಯ ಕಲಾವಿದೆಯಾದ ನೀತಾ ದುಧನಿಕರ ಅವರೊಂದಿಗೆ ವಿವಾಹವಾಗಿ, ದಂಪತಿಗಳಿಬ್ಬರೂ ವೃತ್ತಿರಂಗಭೂಮಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಈ ಕಲೆಯಿಂದಲೇ ಇವರ ಉಪಜೀವನವಿದೆ. ವೃತ್ತಿರಂಗಭೂಮಿಯ ಬದುಕಿನಲ್ಲಿ ಹಲವಾರು ಯಾತನೆಗಳನ್ನು ಅನುಭವಿಸಿದ್ದಾರೆ. ಕರ್ನಾಟಕ-ಮಹಾರಾಷ್ಟ್ರದ ಹಲವಾರು ಹಳ್ಳಿ-ಹಳ್ಳಿಗೆ ನಾಟಕ ನಿರ್ದೇಶಕರಾಗಿ ಅಪಾರವಾದ ಸೇವೆ ಸಲ್ಲಿಸಿದ್ದಾರೆ. ವೀರೇಶ ಪ್ರಸಿದ್ಧ ಪ್ಯಾಡ ಮಾಸ್ತರೆಂದು ಪ್ರಸಿದ್ಧರಾಗಿದ್ದರೆ, ಹೆಂಡತಿ ನಟಿಯಾಗಿ ಸೇವೆ ಮಾಡುತ್ತಿದ್ದಾರೆ.

೨೮) ನೀತಾ ಹಿರೇಮಠ

ಅಕ್ಕಲಕೋಟ ತಾಲೂಕಿನ ಮೈಂದರ್ಗಿಯಲ್ಲಿ ನೀತಾ ವಾಸಿಸುತ್ತಾರೆ. ವೃತ್ತಿರಂಗಭೂಮಿಯ ಕಲಾವಿದೆಯಾದ ಶೈಲಜಾ ದುಧನಿಕರ ಅವರ ಮೂರನೇ ಮಗಳು ನೀತಾ, ಹಾಡು, ನೃತ್ಯ, ಅಭಿನಯಗಳನ್ನು ತಾಯಿಯಿಂದಲೇ ಕಲಿತು ವೃತ್ತಿರಂಗಭೂಮಿಗೆ ಪ್ರವೇಶ ಮಾಡಿದರು. ಪ್ರಸಿದ್ಧ ಪ್ಯಾಡ ಮಾಸ್ತರ ವೀರೇಶ ಅವರೊಂದಿಗೆ ವಿವಾಹವಾಗಿ, ದಂಪತಿಗಳು ವೃತ್ತಿರಂಗಭೂಮಿ ಹಾಗೂ ಅಮೆಚೂರು ಕಂಪನಿಗಳಲ್ಲಿ ಸೇವೆ ಸಲ್ಲಿಸುತ್ತಾರೆ. ಕರ್ನಾಟಕ-ಮಹಾರಾಷ್ಟ್ರದ ಹಳ್ಳಿ-ಹಳ್ಳಿಯ ಅಮೆಚೂರು ನಾಟಕ ಕಂಪನಿಗಳಲ್ಲಿ ನೂರಾರು ನಾಟಕಗಳಲ್ಲಿ ಇವರು ಅಭಿನಯಿಸಿದ್ದಾರೆ. ನೀತಾ ಹಿರೇಮಠ ರಂಗಭೂಮಿಗೆ ಅಪಾರವಾದ ಸೇವೆ ಸಲ್ಲಿಸುತ್ತಿದ್ದಾರೆ.

೨೯) ಶಿವಲಿಂಗಪ್ಪಾ ಹಸರಮನಿ

ಅಕ್ಕಲಕೋಟ ತಾಲೂಕಿನ ಮೈಂದರ್ಗಿಯಲ್ಲಿ ಶಿವಲಿಂಗಪ್ಪಾ ಜನಿಸಿದರು.

ಚಿಕ್ಕ ವಯಸ್ಸಿನಿಂದ ಅವರು ಮೈಂದರ್ಗಿಯ ಮಲತಾಜೇಪ್ಪ ಮಡ್ಡೆ ಅವರ 'ಶ್ರೀ ೧೦೦೮ ಜಗದ್ಗುರು ರೇಣುಕಾಚಾರ್ಯ ನಾಟ್ಯ ಸಂಘದಲ್ಲಿ ನೇಪಥ್ಯ ಕೆಲಸಗಾರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ವೃತ್ತಿರಂಗಭೂಮಿಯ ನಟ-ನಟಿಯರಿಗೆ ಬೇಕಾಗುವ ಉಡುಪು-ಬಣ್ಣ, ಕಲಾವಿದರಿಗೆ ಸಹಾಯಕರಾಗಿ ಕೆಲಸ ಮಾಡುತ್ತಾರೆ. ರಂಗಸಜ್ಜಿಕೆ ನಿರ್ಮಾಣ, ನಾಟಕ ಪರದೆಗಳು ಎಳೆಯುವುದು ಹೀಗೆ ವಿಭಿನ್ನವಾದ ಕಲಾವಿದರ ಸೇವಕರಾಗಿ ಕೆಲಸ ಮಾಡುತ್ತಾರೆ. ಹಗಲು ನಾಟಕ ಪ್ರಚಾರ ಮಾಡಲು ಹೋಗುತ್ತಾರೆ. ವೃತ್ತಿರಂಗಭೂಮಿಯಲ್ಲಿ ಕಸ ಗುಡಿಸುವ ಕೆಲಸ ಮಾಡುತ್ತಾರೆ. ಶಿವಲಿಂಗಪ್ಪಾ ಹಸರಮನಿ ಅವರು ಅಪಾರವಾದ ಸೇವೆ ಸಲ್ಲಿಸಿದ್ದಾರೆ.

**೩೦) ಈರಣ್ಣಾ ಭರಮಾ**

ಅಕ್ಕಲಕೋಟ ತಾಲೂಕಿನ ಮೈಂದರ್ಗಿಯಲ್ಲಿ ಈರಣ್ಣಾ ಭರಮಾ ವಾಸಿಸುತ್ತಾರೆ. ಮೈಂದರ್ಗಿಯ ಶ್ರೀ ಗುರು ರೇವಣಸಿದ್ದ ನಾಟ್ಯ ಸಂಘದಲ್ಲಿ ೧೦ ವರ್ಷ ರಂಗ ನಿರ್ದೇಶಕರಾಗಿ, ಹಾರ್ಮೋನಿಯಂ ಸೇವೆ ಮಾಡಿದ್ದಾರೆ. ಸೋಲಾಪುರ ಜಿಲ್ಲೆಯ ಹಳ್ಳಿ-ಹಳ್ಳಿ ನಾಟಕಗಳಿಗೆ ಮಾಸ್ತರ್ ಆಗಿ ಹೆಸರು ಗಳಿಸಿದ್ದಾರೆ. ೧೯೯೮ರಲ್ಲಿ ಬೆಂಗಳೂರು ಕರ್ನಾಟಕ ಸಂಗೀತ ಮತ್ತು ನೃತ್ಯ ಅಕಾಡೆಮಿ ಇವರು ಸೋಲಾಪುರ ಲಿಂಗಶೆಟ್ಟಿ ರಂಗಮಂದಿರಲ್ಲಿ 'ಸಂಗೀತ ನೃತ್ಯ ಮಹೋತ್ಸವ ಆಚರಿಸಿದರು. ಇದರಲ್ಲಿ ಈರಣ್ಣಾ ಭರಮಾ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

**೩೧) ಸಿದ್ದಮ್ಮ ಕೊಲಾಟಿ**

ಅಕ್ಕಲಕೋಟ ತಾಲೂಕಿನ ಮೈಂದರ್ಗಿಯಲ್ಲಿ ಸಿದ್ದಮ್ಮ ಜನಿಸಿದರು. ತಂದೆ ಬಾಬು, ತಾಯಿ ಶಾಂತಾ ಸಿದ್ದಮ್ಮ ಆರನೇ ತರಗತಿಯಲ್ಲಿರುವಾಗಲೇ ರಂಗಭೂಮಿ ಪ್ರವೇಶ ಮಾಡಿದರು. ಮೈಂದರ್ಗಿಯ ವೃತ್ತಿರಂಗಭೂಮಿಗಳಾದ ಶ್ರೀ ರೇಣುಕಾಚಾರ್ಯ ಶ್ರೀ ರೇವಣಸಿದ್ಧ, ಶ್ರೀ ಮಹಾಂತೇಶ್ವರ ನಾಟಕ ಕಂಪನಿಗಳಲ್ಲಿ ಹಲವು ವರ್ಷ ಸೇವೆ ಸಲ್ಲಿಸಿದ್ದಾರೆ.

ತಂಗಿಯ ಮನೆ, ಸಿಂಧೂರ ಲಕ್ಷ್ಮಣ, ರೈತನ ಮಕ್ಕಳ, ಮರ ಒಂದು ಫಲ ಎರಡು, ಬಂದರೇ ನೋಡು ಮಾವಾ, ಪತಿಭಕ್ತಿ, ಅಣ್ಣ-ತಂಗಿ, ಚಿನ್ನದ ಗೊಂಬೆ, ಬಸ್ ಕಂಡಕ್ಟರ್, ಸತಿ ಸಂಸಾರದ ಜ್ಯೋತಿ, ಬಂಜೆ ತೊಟ್ಟಿಲು, ಗೌಡರ ಗದ್ದಲ ಮುಂತಾದ ಪೌರಾಣಿಕ, ಸಾಮಾಜಿಕ ಹಲವು ನಾಟಕಗಳಲ್ಲಿ ಇವರು ಅಭಿನಯಿಸಿದ್ದಾರೆ.

ಬಸವರಾಜ ಗುಡಗೇರಿ ಅವರ 'ಸಂಗಮೇಶ್ವರ ನಾಟ್ಯ ಸಂಘ' ಆಲಮೇಲದಲ್ಲಿ ಕ್ಯಾಂಪ್ ಹಾಕಿದರು. ಸಿದ್ದಮ್ಮ ಕೊಲಾಟಿ ಅವರು ಆಲಮೇಲದ ಕ್ಯಾಂಪನಲ್ಲಿ

ಬಸವರಾಜ ಗುಡಿಗೇರಿ ಅವರೊಂದಿಗೆ ಅಭಿನಯಿಸಿದರು. ವೃತ್ತಿರಂಗಭೂಮಿ ಹಾಗೂ ಹವ್ಯಾಸ ರಂಗಭೂಮಿಗೆ ಸಿದ್ದಮ್ಮ ಕೊಲಾಟಿ ಅವರ ಸೇವೆ ಅಪಾರವಾಗಿದೆ.

**೩೨) ಮಮತಾ ಕೊಲಾಟಿ**

ಅಕ್ಕಲಕೋಟ ತಾಲೂಕಿನ ಮೈಂದರ್ಗಿಯಲ್ಲಿ ಮಮತಾ ಜನಿಸಿದರು. ತಂದೆ ಬಾಬು, ತಾಯಿ ಶಾಂತಾ. ೫ನೇ ತರಗತಿ ಇರುವಾಗಲೇ ಅಕ್ಕ ಸಿದ್ದಮ್ಮ ಅವರ ಪ್ರಭಾವದಿಂದ ರಂಗಭೂಮಿ ಪ್ರವೇಶ ಮಾಡಿದರು. ಮೈಂದರ್ಗಿಯ ವೃತ್ತಿರಂಗಭೂಮಿ ನಾಟಕ ಕಂಪನಿಗಳಾದ ಶ್ರೀ ರೇಣುಕಾಚಾರ್ಯ ಶ್ರೀ ರೇವಣಸಿದ್ಧ, ಶ್ರೀ ವೀರಭದ್ರೇಶ್ವರ ಹಲವು ಕಂಪನಿಗಳಲ್ಲಿ ಅಭಿನಯಿಸಿದರು. ಕರ್ನಾಟಕ–ಮಹಾರಾಷ್ಟ್ರದ ಹಳ್ಳಿ–ಹಳ್ಳಿ ಅಮೆಚೂರ ಕಂಪನಿಗಳಲ್ಲಿ ಇವರು ನೂರಾರು ನಾಟಕಗಳು ಅಭಿನಯಿಸಿದ್ದಾರೆ.

ಸಂಸಾರದ ಜ್ಯೋತಿ, ಬಸ ಹಮಾಲ, ವರ ಒಂದು ಫಲ ಎರಡು, ಹೆಜ್ಜೆ ತಪ್ಪಿದ ಹೆಣ್ಣು, ಬಂಜೆ ತೊಟ್ಟಿಲು, ಆದರ್ಶ ಪ್ರೇಮ, ಗಂಡ ಹಿಡಿದ ಮುಂಡ, ತಾಯಿಯ ಕರುಳು, ಶ್ರೀ ಶಿವಾಚಲೇಶ್ವರ ಮಹಾತ್ಮ, ಹಲವು ಪೌರಾಣಿಕ ಸಾಮಾಜಿಕ ನಾಟಕಗಳಲ್ಲಿ ಇವರು ಅಭಿನಯಿಸಿದ್ದಾಳೆ. ಅಮೆಚೂರ ನಾಟಕಗಳಿಗೆ ಇವರ ಸೇವೆ ಅಪಾರವಾಗಿದೆ.

**೩೩) ಸಿನ್ನಪ್ಪಾ ಭರಮಾ**

ಅಕ್ಕಲಕೋಟ ತಾಲೂಕಿನ ಮೈಂದರ್ಗಿಯಲ್ಲಿ ಸಿನ್ನಪ್ಪಾ ಭರಮಾ ಅವರು ಜನಿಸಿದರು. ತಂದೆ ಮಲ್ಲಿಕಾರ್ಜುನ, ತಾಯಿ ಈರಾಭಾಯಿ. ಸಿನ್ನಪ್ಪಾ ಟಿ.ಸಿ.ಎಚ್. ಅಭ್ಯಾಸ ಮಾಡಿದರು. ಶಿಕ್ಷಕರಾಗಿ ಸೇವೆ ಮಾಡುವ ಸದವಕಾಶ ದೊರೆಯಲಿಲ್ಲ. ಓಂಕಾರ ಬುರುಡ ಅವರ 'ಶ್ರೀ ಸಿದ್ಧರಾಮೇಶ್ವರ ನಾಟ್ಯ ಸಂಘ'ದಲ್ಲಿ ಹಲವು ನಾಟಕಗಳಲ್ಲಿ ಅಭಿನಯಿಸಿದ್ದಾರೆ.

ಧರ್ಮದ ಕಣ್ಣೀರು, ಸಿಂಧೂರ ಲಕ್ಷ್ಮಣ, ಕೆರಳಿದ ಕಾಳಿಂಗ ಸರ್ಪ, ತಾಯಿಯ ಹಾಲು ವಿಷವಾಯಿತು ಮುಂತಾಗಿ ಹಲವು ನಾಟಕಗಳಲ್ಲಿ ಹಾಸ್ಯ ಪಾತ್ರ ಇವರು ಅಭಿನಯಿಸಿದ್ದಾರೆ. ಕರ್ನಾಟಕ ಮಹಾರಾಷ್ಟ್ರದ ಹಳ್ಳಿ–ಹಳ್ಳಿಯ ಅಮೆಚೂರ ನಾಟಕವಾಡಲು ಹೋಗುತ್ತಾರೆ. ಸೋಲಾಪುರ ಕನ್ನಡ ರಂಗಭೂಮಿ ಮಾಲಿಕೆಯಲ್ಲಿ ಸಿನ್ನಪ್ಪಾ ಭರಮಾ ಇವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

**೩೪) ಬಸವರಾಜ ಮೈಂದರ್ಗಿಕರ**

ಅಕ್ಕಲಕೋಟ ತಾಲೂಕಿನ ಮೈಂದರ್ಗಿಯಲ್ಲಿ ಬಸವರಾಜ ಜನಿಸಿದರು. ತಂದೆ ಶರಣಪ್ಪಾ, ತಾಯಿ ಗುರುಬಾಯಿ, ಮೈಂದರ್ಗಿಯ ಶ್ರೀ ಶಿವಾಚಲೇಶ್ವರ

ಹೈಸ್ಕೂಲಿನ ಜವಾನರಾಗಿ ಇವರು ಸೇವೆ ಸಲ್ಲಿಸುತ್ತಿದ್ದಾರೆ. ಮೈಂದರ್ಗಿಯ ವೃತ್ತಿರಂಗಭೂಮಿ ಕಂಪನಿಗಳಾದ ಶ್ರೀ ರೇಣುಕಾಚಾರ್ಯ, ಶ್ರೀ ರೇವಣಸಿದ್ಧ, ಶ್ರೀ ವೀರಭದ್ರೇಶ್ವರ, ಶ್ರೀ ಸಿದ್ಧರಾಮೇಶ್ವರ ನಾಟ್ಯ ಸಂಘಗಳಲ್ಲಿ ಇವರು ಸೇವೆ ಸಲ್ಲಿಸಿದ್ದಾರೆ. ಎಚ್ಚರ ತಂಗಿ ಎಚ್ಚರ, ಮಾಂಗಲ್ಯ ಹೋದರು ಮಗ ಬೇಕು, ಮಲಮಗಳು, ಧರ್ಮದ ಕಣ್ಣೀರು ಮುಂತಾಗಿ ಇವರು ಹಲವಾರು ನಾಟಕಗಳಲ್ಲಿ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ಸೋಲಾಪುರ ಕನ್ನಡ ರಂಗಭೂಮಿ ಮಾಲಿಕೆಯಲ್ಲಿ ಬಸವರಾಜ ಮೈಂದರ್ಗಿಕರ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

**೩೫) ಚಂದ್ರಶಾ ಕೂತಲಿ**

ಅಕ್ಕಲಕೋಟ ತಾಲೂಕಿನ ದುಧನಿಯಲ್ಲಿ ಚಂದ್ರಶಾ ಜನಿಸಿದರು. ತಂದೆ ಸಿದ್ರಾಮಪ್ಪ, ತಾಯಿ ಪುತಳಾಬಾಯಿ. ೭ನೇ ತರಗತಿಯಲ್ಲಿರುವಾಗಲೇ 'ಬಡವ ಬದುಕಲೇ ಬೇಕು' ನಾಟಕದಿಂದ ರಂಗ ಪ್ರವೇಶ ಮಾಡಿದರು. ಬಾಲ್ಯದ ದಿನಗಳಲ್ಲಿಯೇ ಸಂಪೂರ್ಣ ರಾಮಾಯಣ ನಾಟಕ ಅಭಿನಯಿಸಿ ಪ್ರಸಿದ್ಧರಾದರು. ದುಧನಿಯ ಶ್ರೀ ಮಲ್ಲಿಕಾರ್ಜುನ, ಶ್ರೀ ಶಾಂತಲಿಂಗೇಶ್ವರ ನಾಟಕ ಕಂಪನಿಗಳಲ್ಲಿ ಹಲವಾರು ನಾಟಕ ಅಭಿನಯಿಸಿದರು.

ಚಂದ್ರಶಾ ಕೂತಲಿ ಅವರು ನಿಂಬಾಳದ ಪರಮೇಶ್ವರ ತಿಂಡೆ ಅವರ ಗರಡಿಯಲ್ಲಿ ಬೆಳೆದು ಶ್ರೀ ಬಾಲಾಜಿ ನಾಟ್ಯ ಸಂಘಕ್ಕೆ ಪ್ರವೇಶ ಮಾಡಿದರು. ಶಂಕರ ಮೇತ್ರಿ ಅವರ 'ಶ್ರೀ ಬಾಲಾಜಿ ನಾಟ್ಯ ಸಂಘ'ದಿಂದ ನೂರಾರು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಚಂದ್ರಶಾ ಕೂತಲಿ ಅವರು ಖಳನಾಯಕನ ಪಾತ್ರ ಅಭಿನಯಿಸಿ ಪ್ರಸಿದ್ಧ ಕಲಾವಿದರಾಗಿ ಹೆಸರು ಮಾಡಿದ್ದಾರೆ. ಹವ್ಯಾಸಿ ರಂಗಭೂಮಿಗೆ ಅವರ ಸೇವೆ ಅನನ್ಯವಾಗಿದೆ.

**೩೬) ಶಿವರಾಯ ಅಂಕಲಗಿ**

ಅಕ್ಕಲಕೋಟ ತಾಲೂಕಿನ ದುಧನಿಯಲ್ಲಿ ಶಿವರಾಯ ಜನಿಸಿದರು. ತಂದೆ ಈರಪ್ಪ, ತಾಯಿ ಬಸಮ್ಮ. ಇವರು ದುಧನಿಯ ಪ್ರಸಿದ್ಧ ಜಾನಪದ ಹಾಡುಗಾರರು. ಶಿವರಾಯ ಅಂಕಲಗಿ ಅವರು ರಂಗಭೂಮಿ ಕಲಾವಿದರು. ದುಧನಿಯ ಶ್ರೀ ಸಿದ್ಧರಾಮೇಶ್ವರ, ಶ್ರೀ ಶಾಂತಲಿಂಗೇಶ್ವರ, ಶ್ರೀ ಬಾಲಾಜಿ ನಾಟ್ಯ ಸಂಘದ ನಾಟಕಗಳಲ್ಲಿ ಇವರು ಅಭಿನಯಿಸಿದ್ದಾರೆ. ಕಾರಸ್ಥಾನ, ಜೀವನ ಯಾತ್ರೆ, ಗಂಡನ ಮನೆ, ದಾರಿ ದೀಪ, ಅಣ್ಣ-ತಂಗಿ ಮುಂತಾಗಿ ಹಲವು ಸಾಮಾಜಿಕ ನಾಟಕಗಳಲ್ಲಿ ಇವರು ಅಭಿನಯಿಸಿದ್ದಾರೆ. ಇವರ ಮಗ ಮಹಾಂತೇಶ ಅಂಕಲಗಿ ಹವ್ಯಾಸಿ ರಂಗಭೂಮಿಯ

ಹಿರಿಯ ಕಲಾವಿದರು. ಹವ್ಯಾಸಿ ರಂಗಭೂಮಿಗೆ ಶಿವರಾಯ ಅಂಕಲಗಿ ಅವರ ಕೊಡುಗೆ ಅನನ್ಯವಾಗಿದೆ.

### ೩೭) ರೇವಣಸಿದ್ದ ಹುಲಮನಿ

ಅಕ್ಕಲಕೋಟ ತಾಲೂಕಿನ ಮೈಂದರ್ಗಿಯಲ್ಲಿ ರೇವಣಸಿದ್ದ ಜನಿಸಿದರು. ತಂದೆ ಭೀಮಣ್ಣ, ತಾಯಿ ಸುಗಲಾಬಾಯಿ. ಮೈಂದರ್ಗಿಯ ಶ್ರೀ ಗುರುರೇವಣಸಿದ್ದ ನಾಟ್ಯ ಸಂಘದ ಮಾಲೀಕರಾದ ಭೀಮಶಾ ಹುಲಮನಿ ಅವರ ಮಗ. ತಂದೆಯ ಪ್ರಭಾವದಿಂದ ರೇವಣಸಿದ್ದ ಬಾಲಕನಾಗಿದ್ದಾಗ ಆಳಂದದಲ್ಲಿ ರೇವಣಸಿದ್ದ ಕಂಪನಿಯ ಕ್ಯಾಂಪಿನಲ್ಲಿ ರಾಜಾ ಸತ್ಯ ಹರಿಶ್ಚಂದ್ರ ನಾಟಕದಲ್ಲಿ ರೋಹಿತನ ಪಾತ್ರ ಅಭಿನಯಿಸುವ ಮೂಲಕ ಇವರು ರಂಗ ಪ್ರವೇಶ ಮಾಡಿದರು.

ಓಂಕಾರ ಬುರುಡ ಅವರ 'ಶ್ರೀ ಸಿದ್ದರಾಮೇಶ್ವರ ನಾಟ್ಯ ಸಂಘ'ದ ಹಲವು ಸಾಮಾಜಿಕ ನಾಟಕಗಳಲ್ಲಿ ರೇವಣಸಿದ್ದ ಖಳನಾಯಕನ ಪಾತ್ರ ಅಭಿನಯಿಸುತ್ತಾರೆ. ರಂಗಕಲೆ ಅವರ ತಂದೆಯವರಿಂದ ರಕ್ತಗತವಾಗಿ ಆಗಮಿಸಿದೆ. ಧರ್ಮದ ಕಣ್ಣೀರು. ತಾಯಿಗೆ ತಕ್ಕಮಗ, ರಾಜಾ ಸತ್ಯ ಹರಿಶ್ಚಂದ್ರ ಹೀಗೆ ನೂರಾರು ನಾಟಕಗಳಲ್ಲಿ ಇವರು ಅಭಿನಯಿಸಿದ್ದಾರೆ. ಹಳ್ಳಿ–ಹಳ್ಳಿಯ ಅಮೆಚೂರ ನಾಟಕ ಕಂಪೆನಿಗಳಲ್ಲಿ ಅಭಿನಯಿಸಲು ಹೋಗುತ್ತಾರೆ. ಇವರ ಕುಟುಂಬದ ಹಿರಿಯರು ರಂಗಭೂಮಿಯ ಸಲುವಾಗಿ ಹಲವು ಯಾತನೆಗಳನ್ನು ಅನುಭವಿಸಿದ್ದಾರೆ.

### ೩೮) ವಾಗೀಶ ಪಾಟೀಲ

ಹವ್ಯಾಸಿ ರಂಗಭೂಮಿಯ ಪ್ರಸಿದ್ಧ ಕಲಾವಿದ ವಾಗೀಶ ಪಾಟೀಲ. ಆಳಂದ ತಾಲೂಕಿನ ಸರಸಂಬಾದಲ್ಲಿ ಅವರ ಜನನವಾಯಿತು. ತಂದೆ ಗುರುಶಾಂತಪ್ಪ, ತಾಯಿ ಚನ್ನಮ್ಮ. ತಾಳಿಯಿಲ್ಲದೆ ತಾಯಿಯಾದೆ ನಾಟಕದಲ್ಲಿ ಮುಖಕ್ಕೆ ಬಣ್ಣ ಬಳಿದು ರಂಗಪ್ರವೇಶ ಮಾಡಿದರು. ಶಂಕರ ಮೇತ್ರಿ ಅವರ ಹವ್ಯಾಸಿ 'ಶ್ರೀ ಬಾಲಾಜಿ ನಾಟ್ಯ ಸಂಘ'ದಲ್ಲಿ ವಾಗೀಶ ಪಾಟೀಲರು ವಿಭಿನ್ನವಾದ ಪಾತ್ರ ಅಭಿನಯಿಸಿ ಹೆಸರು ಮಾಡಿದರು.

ನಿಂಬಾಳದ ಪರಮೇಶ್ವರ ವೆಂಡೆ ಅವರ ಗರಡಿಯಲ್ಲಿ ವಾಗೀಶ ಪಾಟೀಲರು ಬೆಳೆಯುತ್ತಾರೆ. ಕಲಿತ ಕಳ್ಳಿ, ರಕ್ತ ಸಿಂಧೂರ, ಗರುಡ ರಾಜ್ಯದಲ್ಲಿ ಘಟಸರ್ಪ, ತೊಟ್ಟಿಲು ತೂಗಲಿಲ್ಲ, ದುರಂತ ನಾಯಕಿ, ಗಂಗಿ ಹಿಡಿಸ್ಯಾಳ ಗುಂಗ, ಮುಡಿಯೇರಿದ ಮಲ್ಲಿಗೆ, ಸತ್ಯಮೇವ ಜಯತೆ, ಇಂದಿನ ಭಾರತ, ಮನೆಯ ಮಾನ ಅಣ್ಣನ ಮಾನ, ನಾನು ಮಾಡಿದ ಮಂತ್ರ, ಕುಂಕುಮ ತಂದ ಕೈಲಾಸ ಹೀಗೆ ಸುಮಾರು ಐವತ್ತಕ್ಕಿಂತಲೂ ಹೆಚ್ಚಿನ ಸಂಖ್ಯೆಯ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

ದುಧನಿ ಶ್ರೀ ಬಾಲಾಜಿ ರಂಗಭೂಮಿ ವೇದಿಕೆಯಲ್ಲಿ ವಾಗೀಶ ಪಾಟೀಲರು ವಿಭಿನ್ನವಾದ ಪಾತ್ರ ಅಭಿನಯಿಸಿದ್ದಾರೆ. ನಾಡಿನ ವೃತ್ತಿರಂಗಭೂಮಿ ಹಾಗೂ ಹವ್ಯಾಸಿ ರಂಗಭೂಮಿಯ ಗತವೈಭವ ಇತಿಹಾಸವಿದೆ. ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ರಂಗಭೂಮಿ ತುರಿತು ಅಧ್ಯಯನ ನಡೆದಿದೆ. ಸೊಲ್ಲಾಪುರ ಜಿಲ್ಲೆಯ ಕನ್ನಡ ರಂಗಭೂಮಿ ಕುರಿತು ಅಧ್ಯಯನ, ಸಂಶೋಧನೆಗಳು ನಡೆದಿವೆ. ನಾಡಿನ ರಂಗಭೂಮಿ ಇತಿಹಾಸದಲ್ಲಿ ಶಂಕರ ಮೇತ್ರೆ ಅವರ ಶ್ರೀ ಬಾಲಾಜಿ ನಾಟ್ಯ ಸಂಘ ಚಲನಚಿತ್ರಗಳಿಗೆ ಮೀರಿ ವಿನೂತನವಾದ ನಾಟಕ ಪ್ರಯೋಗ ಮಾಡಿ ಯಶಸ್ವಿಯಾಗಿದೆ.

ವಾಗೀಶ ಪಾಟೀಲರು ಹಲವು ಸಾಮಾಜಿಕ ನಾಟಕಗಳಲ್ಲಿ ಪಿ.ಎಸ್.ಐ. ಪಾತ್ರ ಅಭಿನಯಿಸಿದ್ದಾರೆ. ರಂಗಭೂಮಿ ವೇದಿಕೆಗೆ ವಾಗೀಶ ಪಿ.ಎಸ್.ಐ. ಪಾತ್ರದಲ್ಲಿ ಆಗಮಿಸುವಾಗ, ಪೊಲೀಸ್ ವ್ಯಾನ್, ಪೊಲೀಸ್ ಸಿಬ್ಬಂದಿ, ಶ್ವಾನದಳದೊಂದಿಗೆ ಆಗಮಿಸುತ್ತಾರೆ. ರಂಗಭೂಮಿ ವೇದಿಕೆಯಲ್ಲಿ ಇಂಥ ನಾಟಕ ಪ್ರಯೋಗಗಳನ್ನು ಮಾಡಿದ ಕೀರ್ತಿ ದುಧನಿ ಹವ್ಯಾಸಿ ರಂಗಭೂಮಿಗಿದೆ.

ವಾಗೀಶ ಪಾಟೀಲರ ಉತ್ತಮ ಅಭಿನಯದಿಂದ ಪ್ರೇಮಾ ಬದಾಮಿಯವರು ಅವರನ್ನು ತಮ್ಮ ಕಂಪನಿಗೆ ಕರೆದುಕೊಂಡು ಹೋಗುತ್ತಾರೆ. ನಾಡಿನ ಪ್ರಮುಖ ನಟನಟಿಯರೊಂದಿಗೆ ವಾಗೀಶ ನಾಟಕ ಅಭಿನಯಿಸಿದ್ದಾರೆ. ಬಸವರಾಜ ಗುಡಗೇರಿ, ಟೆನಿಸ್ ಕೃಷ್ಣ, ಪ್ರೇಮಾ ಬದಾಮಿ ಹಲವು ಕಲಾವಿದರೊಂದಿಗೆ ಅಭಿನಯಿಸಿದ್ದಾರೆ. ಟಿ.ಎಸ್. ರಂಗ ಅವರ ಕಿರುತೆರೆಯ 'ಮೌನಕ್ರಾಂತಿ' ಧಾರವಾಹಿಯಲ್ಲಿ ವಾಗೀಶ ಅಭಿನಯಸಿದ್ದಾರೆ. ನಟರಾಜ ಏಣಗಿ ಅವರ ಕಿರುತೆರೆಯ ಕಿನ್ನರಿ ಧಾರಾವಾಹಿಯಲ್ಲಿ ವಾಗೀಶ ಅಭಿನಯಿಸಿದ್ದಾರೆ.

ಹಿರಿಯ ರಂಗ ಕಲಾವಿದರಾದ ಬಸವರಾಜ ಗುಡಗೇರಿ ಅವರ 'ಕೆಡಿಸಿದ್ದು ಯಾರು?' ನಾಟಕ ಶ್ರೀ ಬಾಲಾಜಿ ನಾಟ್ಯ ಸಂಘದಿಂದ ಪ್ರದರ್ಶಿಸಿದ್ದಾರೆ. ಈ ನಾಟಕ ವೀಕ್ಷಿಸಲು ಬಸವರಾಜ ಗುಡಗೇರಿ ಅವರು ದುಧನಿಗೆ ಆಗಮಿಸಿ, ನಾಟಕ ನೋಡಿದ್ದಾರೆ. ನಾಟಕ ಮುಗಿದ ಮೇಲೆ ಕಂಪನಿಯ ಮಾಲೀಕರಾದ ಶಂಕರ ಮೇತ್ರೆ, ವಾಗೀಶ್ ಪಾಟೀಲ, ಮಹಾಂತೇಶ ಅಂಕಲಗಿ, ಆಮೋಗಿ ಜತಾಪುರ, ಗುರುಶಾಂತ ಪರಮಶೆಟ್ಟಿ ಮುಂತಾಗಿ ಹಲವು ಕಲಾವಿದರಿಗೆ ಅಭಿನಂದನೆ ಸಲ್ಲಿಸಿದ್ದಾರೆ.

ಪ್ರೇಮಾ ಬದಾಮಿ ಅವರ 'ಶ್ರೀ ಭಾಗ್ಯವಂತ ನಾಟ್ಯ ಸಂಘ'ದಲ್ಲಿ ವಾಗೀಶ್ ಪಾಟೀಲರು ಹಲವಾರು ನಾಟಕ ಅಭಿನಯಿಸಿದ್ದಾರೆ. ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರೇಮಾ ಬದಾಮಿ ಅವರ 'ಎಲ್ಲೋ ಜೋಗಪ್ಪ ನಿನ್ನ ಅರಮನೆ' ನಾಟಕದಲ್ಲಿ ವಾಗೀಶ್ ಅಭಿನಯಿಸಿದ್ದಾರೆ. ವಾಗೀಶ್ ನಟರಾಗಿ. ನಿರ್ದೇಶಕರಾಗಿ ರಂಗಭೂಮಿಗೆ ಅಪಾರವಾದ ಸೇವೆ ಸಲ್ಲಿಸಿದ್ದಾರೆ. ಕರ್ನಾಟಕ-ಮಹಾರಾಷ್ಟ್ರದ ಹಳ್ಳಿ-ಹಳ್ಳಿಯಲ್ಲಿ ನಾಟಕಗಳಿಗೆ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ.

ವೃತ್ತಿರಂಗಭೂಮಿ, ಹವ್ಯಾಸಿ ರಂಗಭೂಮಿ ಹಾಗೂ ಗ್ರಾಮೀಣ ರಂಗಭೂಮಿ ನಾಟಕಗಳು ಪ್ರದರ್ಶಿಸುವಾಗ ಕೆಲವು ಆಕಸ್ಮಿಕ ಸಮಸ್ಯೆಗಳು ಎದುರಾಗುತ್ತವೆ. ನಾಟಕ ಪ್ರಾರಂಭವಾಗುವ ಸಮಯದಲ್ಲಿ ಕೆಲವೊಮ್ಮೆ ಪಾತ್ರಧಾರಿಗಳು ಕಡಿಮೆ ಬೀಳುತ್ತಾರೆ. ಇಂಥ ಗಂಭೀರ ಸಮಯದಲ್ಲಿ ಯಾವ ರಂಗಭೂಮಿ ಕಲಾವಿದರು ವಾಗೀಶ್ ಅವರನ್ನು ಸಂಪರ್ಕಿಸಿದರೂ. ಅವರು ಬಂದು ಪಾತ್ರ ಅಭಿನಯಿಸುತ್ತಾರೆ. "ಕನ್ನಡ ಭಾಷೆ, ಕಲೆ, ಸಾಹಿತ್ಯ, ನೆಲ, ಜಲ, ಸಂಸ್ಕೃತಿ ವಿಷಯದಲ್ಲಿ ತೊಂದರೆಯಾಗದಂತೆ ನೋಡುವುದು ನನ್ನ ಕೆಲಸ. ವೃತ್ತಿರಂಗಭೂಮಿ, ಗ್ರಾಮೀಣ ರಂಗಭೂಮಿ ವೇದಿಕೆಗಳಿಗೆ ಅಪಮಾನವಾಗಬಾರದು. ಕಲಾವಿದರ ನಿಜ ಜೀವನದ ಬದುಕು ನೋವಿನಿಂದ ಇರುತ್ತದೆ. ನಿಜವಾದ ಕಲಾವಿದರನ್ನು ಗುರುತಿಸುವ ಕೆಲಸ ಅಕಾಡೆಮಿ ಸರಕಾರಗಳಿಂದ ಆಗಲಿ" ಎನ್ನುತ್ತಾರೆ ವಾಗೀಶ ಪಾಟೀಲ.

ವಾಗೀಶ ಪಾಟೀಲ ರಂಗಕಲೆಯ ಹೆಮ್ಮೆಯ ನಟ. ಮುಂದಿನ ದಿನಗಳಲ್ಲಿ ರಂಗವೇದಿಕೆಯ ಮೇಲೆ ಚಲನಚಿತ್ರಗಳಿಗೆ ಮೀರಿ ಹೊಸದಾದ ವಿನೂತನವಾದ ನಾಟಕ ಪ್ರಯೋಗಗಳನ್ನು ಮಾಡುತ್ತೇವೆ. ಕರ್ನಾಟಕ ಸರಕಾರ ಹಾಗೂ ಕರ್ನಾಟಕ ನಾಟಕ ಅಕಾಡೆಮಿ ನಮ್ಮ ನಾಟಕಗಳನ್ನು ವೀಕ್ಷಿಸಲು ಆಗಮಿಸಬೇಕೆಂದು ಸಂದರ್ಶನದಲ್ಲಿ ಹೇಳಿದರು. ಸೋಲಾಪುರ ರಂಗ ಕೈಪಿಡಿ ತಯಾರಿಸುವಾಗ, ನಮ್ಮ ಮನೆಗೆ ಆಗಮಿಸಿ ಮಾಹಿತಿ ನೀಡಿದ ವಾಗೀಶ್ ಪಾಟೀಲರಿಗೆ ಕೃತಜ್ಞತೆಗಳು.

**೩೯) ಗುರುಶಾಂತ ಪರಮಶೆಟ್ಟಿ**

ಹವ್ಯಾಸಿ ರಂಗಭೂಮಿ ಪ್ರಸಿದ್ಧ ಕಲಾವಿದ ಗುರುಶಾಂತ ಪರಮಶೆಟ್ಟಿ, ನಿಂಬಾಳದ ಪರಮೇಶ್ವರ ತಿಂಡೆ ಅವರ ಗರಡಿಯಲ್ಲಿ ಬೆಳೆದು ಮಧನಿಯ ಶ್ರೀ ಬಾಲಾಜಿ ನಾಟ್ಯ ಸಂಘದಲ್ಲಿ ಅಭಿನಯಿಸಿದ್ದಾರೆ. ಕಲಿತ ಕಳ್ಳ, ರಕ್ತ ಸಿಂಧೂರ, ಗರುಡ ರಾಜ್ಯದಲ್ಲಿ ಘಟಸರ್ಪ, ತೊಟ್ಟಿಲು ತೂಗಲಿಲ್ಲ, ದುರಂತ ನಾಯಕಿ, ಗಂಗಿ ಹಿಡಶ್ಯಾಳ ಗುಂಗ, ಮುಡಿಯೇರಿದ ಮಲ್ಲಿಗೆ, ಸತ್ಯಮೇವ ಜಯತೆ, ಇಂದಿನ ಭಾರತ, ನಾ ಮಾಡಿದ ಮಂತ್ರಿ, ಕುಂಕುಮ ತಂದ ಕೈಲಾಸ ಮುಂತಾಗಿ ಐವತ್ತಕ್ಕಿಂತಲೂ ಹೆಚ್ಚಿನ ಸಂಖ್ಯೆಯ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

ಮಧನಿಯ ಶ್ರೀ ಬಾಲಾಜಿ ನಾಟ್ಯ ಸಂಘದ ಮಾಲೀಕರಾದ ಶಂಕರ ಮೇತ್ರಿ ಅವರ ಇನ್ನೊಂದು ವಿಶೇಷತೆ ಇಲ್ಲಿ ವಿವರಿಸುತ್ತೇನೆ. ಗುರುಶಾಂತ ಪರಮಶೆಟ್ಟಿ ಹಾಸ್ಯಕಲಾವಿದ ಇವರ ಉತ್ತಮ ಅಭಿನಯದಿಂದ ಈ ಕಂಪನಿ ನಾಟಕಗಳು ಪ್ರಸಿದ್ಧವಾಗಿವೆ. ಹಾಸ್ಯ ಕಲಾವಿದರಾದ ಗುರುಶಾಂತ ಪರಮಶೆಟ್ಟಿ ಪಾತ್ರಕ್ಕೆ ಬೇಕಾಗುವ ಹೊಸದಾದ ಬಟ್ಟೆ ಖರೀದಿಸುತ್ತಾರೆ. ಮಧನಿಯ ಹವ್ಯಾಸಿ ರಂಗ ಕಲಾವಿದರು ನಟನೆ, ಅಭಿನಯ, ಉಡುಪು, ವಿನ್ಯಾಸಕ್ಕೆ ಬಹಳ ಮಹತ್ವ ಕೊಡುತ್ತಾರೆ. ಗುರುಶಾಂತ ಪರಮಶೆಟ್ಟಿ ಪ್ರಸಿದ್ಧ ಹವ್ಯಾಸ ರಂಗಭೂಮಿ ಕಲಾವಿದರು.

### ೪೦) ಅಮೋಗಿ ಜತಾಪುರೆ

ಅಕ್ಕಲಕೋಟ ತಾಲ್ಲೂಕಿನ ಜತಾಪುರ ಗ್ರಾಮದ ಹಿರಿಯ ರಂಗಭೂಮಿ ಕಲಾವಿದ ಅಮೋಗಿ ಜತಾಪುರೆ. ನಿಂಬಾಳದ ಪರಮೇಶ್ವರ ಶಿಂಡೆ ಅವರ ಗರಡಿಯಲ್ಲಿ ಬೆಳೆದು ಶ್ರೀ ಬಾಲಾಜಿ ನಾಟ್ಯ ಸಂಘದಲ್ಲಿ ಅಭಿನಯಿಸುತ್ತಿದ್ದಾರೆ. ಅವರು ಖಳನಾಯಕನ ಪಾತ್ರದಲ್ಲಿ ಅಭಿನಯಿಸುತ್ತಾರೆ. ಕಲಿತ ಕಳ್ಳ, ರಕ್ತ ಸಿಂಧೂರ, ಗರುಡ ರಾಜ್ಯದಲ್ಲಿ ಘಟಸರ್ಪ, ತೊಟ್ಟಿಲು ತೂಗಲಿಲ್ಲ. ದುರಂತ ನಾಯಕಿ, ಗಂಗಿ ಹಿಡಿಶ್ಯಾಳ ಗುಂಗ, ಮುಡಿಯೇರಿದ ಮಲ್ಲಿಗೆ, ಸತ್ಯಮೇವ ಜಯತೆ, ಇಂದಿನ ಭಾರತಿ, ಮನೆಯ ಮಾನ, ನಾನು ಮಾಡಿದ ಮಂತ್ರಿ, ಕುಂಕುಮ ತಂದ ಕೈಲಾಸ ಹೀಗೆ ಐವತ್ತಕ್ಕಿಂತಲು ಹೆಚ್ಚಿನ ಸಂಖ್ಯೆಯ ನಾಟಕ ಪ್ರಯೋಗಗಳು ಅಭಿನಯಿಸಿದ್ದಾರೆ.

ಶಂಕರ ಮೇತ್ರೆ ಅವರ 'ಶ್ರೀ ಬಾಲಾಜಿ ನಾಟ್ಯ ಸಂಘ'ದ ಪ್ರಸಿದ್ಧ ಖಳನಾಯಕನ ಪಾತ್ರಧಾರಿ ಅಮೋಗಿ ಜತಾಪುರೆ, ಅವರದು ಎತ್ತರವಾದ ಶರೀರ, ದುಂಡಾದ ಕಪ್ಪು ಮುಖ, ಮುಖಕ್ಕೆ ತಕ್ಕದಾದ ಮೀಸೆ, ಒಪ್ಪುವಂತಹ ಬಟ್ಟೆಗಳು. ರಾಜಕೀಯ ನಾಯಕನ ಪಾತ್ರ ಮಾಡುವಾಗ ನಿಜವಾದ ರಾಜಕೀಯ ನಾಯಕರಾದ ಶಂಕರ ಮೇತ್ರೆ, ತಾವು ಧರಿಸಿಕೊಳ್ಳುವ ಬಟ್ಟೆ, ಒಡವೆಗಳನ್ನೇ ಅಮೋಗಿ ಅವರಿಗೆ ನೀಡುತ್ತಾರೆ. ನಾಟಕ ಪ್ರಯೋಗದಲ್ಲಿ ಅಮೋಗಿ ಅವರನ್ನು ನೋಡಿದರೆ, ನಿಜವಾದ ಮಂತ್ರಿಗಳೂ ಮೌನವಾಗುತ್ತಾರೆ. ವೇದಿಕೆಗೆ ಇವರು ಸರಕಾರದ ಕೆಂಪು ಬಣ್ಣದ ವಾಹನದಲ್ಲಿ ಆಗಮಿಸುತ್ತಾರೆ. ನಾಟಕ ಮುಗಿಯಿತೆಂದರೆ, ಅಮೋಗಿ ಅವರ ನಿಜ ಜೀವನ ನೋವು-ಯಾತನೆಗಳಿಂದ ಇರುತ್ತದೆ. ಆದರೂ ನಟರಾಗಿ, ನಿರ್ದೇಶಕರಾಗಿ ಅಪಾರವಾದ ಸೇವೆ ಸಲ್ಲಿಸುತ್ತಿದ್ದಾರೆ. ತಮ್ಮ ಜತಾಪುರೆ ಗ್ರಾಮದಲ್ಲಿ ಯುವ ಕಲಾವಿದರಿಗೆ ರಂಗ ತರಬೇತಿ ನೀಡಿದ್ದಾರೆ. ಕರ್ನಾಟಕ ಮಹಾರಾಷ್ಟ್ರದ ಹಳ್ಳಿ-ಹಳ್ಳಿ ನಾಟಕಗಳಿಗೆ ನಿರ್ದೇಶಕರಾಗಿ ಸೇವೆ ಮಾಡುತ್ತಾರೆ. ಹವ್ಯಾಸಿ ರಂಗಭೂಮಿಯ ಹಿರಿಯ ಕಲಾವಿದರ ಅಮೋಗಿ ಜತಾಪುರೆ ಅವರನ್ನು ಹಲವಾರು ಸನ್ಮಾನಗಳಿಂದ ಗೌರವಿಸಲಾಗಿದೆ.

### ೪೧) ಶಿವರುದ್ರಯ್ಯ ಸ್ವಾಮಿ

ದಕ್ಷಿಣ ಸೊಲ್ಲಾಪುರ ತಾಲೂಕಿನ ವಳಸಂಗ ಗ್ರಾಮದಲ್ಲಿ ಶಿವರುದ್ರಯ್ಯ ಜನಿಸಿದರು. ಇವರ ತಂದೆ ಚನ್ನಯ್ಯ, ತಾಯಿ ಸಂಗಮ್ಮ. ಇವರು ನಾಲ್ಕನೇ ತರಗತಿಯಲ್ಲಿರುವಾಗಲೇ ಮುಖಕ್ಕೆ ಬಣ್ಣ ಬಳಿದು ಅಣ್ಣ-ತಮ್ಮ ನಾಟಕದ ಮೂಲಕ ರಂಗ ಪ್ರವೇಶ ಮಾಡಿದರು.

ಶ್ರೀ ಬಸವೇಶ್ವರ ದೇವಾಲಯದ ಪಂಚ ತಲುಪಿಯ ಮಲ್ಲಿನಾಥ ಬಾಬಾನಗರ ಅವರ 'ಶ್ರೀ ಬಸವೇಶ್ವರ ನಾಟ್ಯ ಸಂಘ' ವಳಸಂಗ ಇವರಿಂದ ನೂರಾರು ನಾಟಕಗಳು

ಪ್ರದರ್ಶಿಸಿದ್ದಾರೆ. ಈ ಸಂಘದ ಪ್ರಮುಖ ಖಳನಾಯಕನ ಪಾತ್ರ ಅಭಿನಯಿಸಲು ಶಿವರುದ್ರಯ್ಯ ಸ್ವಾಮಿ ಹೆಸರು ಮಾಡಿದವರು.

ಜಗಜ್ಯೋತಿ ಬಸವೇಶ್ವರ, ಅಣ್ಣನ ಸಾವಿಗೆ ತಮ್ಮನೇ ಕಾರಣ, ತಂಗಿಯ ಮನೆ, ಜೀವನ ನೌಕೆ, ಗರತಿಗೆ ಎಲ್ಲಿದೆ ಗೌರವ? ವಿಧಿ ಆಟ ಬಲ್ಲವರು ಯಾರು, ತಾಳಿ ಕಟ್ಟಿದರೂ ಗಂಡನಲ್ಲ, ಆದರ್ಶ ಪದವೀಧರರು, ಗರತಿಯ ಜೀವನ, ಹುಡುಗಿ ಮೆಚ್ಚಿದ ಹುಂಬ, ಅಣ್ಣನ ಒಡಲು ಬಂಗಾರದ ಕಡಲು, ಶಿವರಾತ್ರಿ, ಸಮಾಜಕ್ಕೆ ಶಿಕ್ಷೆ ಗೆಲುವು ಸಾಧಿಸಿದ ಗರತಿ, ಹೆಣ್ಣಿನ ಕಣ್ಣೀರು ಹೀಗೆ ನೂರಾರು ಸಾಮಾಜಿಕ, ಪೌರಾಣಿಕ ನಾಟಕಗಳಲ್ಲಿ ಶಿವರುದ್ರಯ್ಯ ಸ್ವಾಮಿ ಖಳನಾಯಕನ ಪಾತ್ರದಲ್ಲಿ ಅಭಿನಯಿಸಿದ್ದಾರೆ.

ಅವರು ವಳಸಂಗದ ಎಲ್ಲ ನಾಟಕ ಕಲಾವಿದರಿಗೆ ಮಾರ್ಗದರ್ಶನ ಮಾಡುತ್ತಾರೆ. ವಳಸಂಗದಲ್ಲಿ ನಿರಂತರವಾಗಿ ನಾಟಕಗಳು ಅಭಿನಯಿಸುವುದು ನಮಗೆ ಹೆಮ್ಮೆಯ ವಿಷಯವಿದೆ.

ಕಲೆ, ಸಾಹಿತ್ಯದ ಅಭಿಮಾನವಿದೆಯಾದರೂ ಯುವ ಕಲಾವಿದರಿಗೆ ಪ್ರೋತ್ಸಾಹ ನೀಡುವ ಮನಸ್ಸುಗಳು ಮುಂದೆ ಬರಬೇಕಾಗಿದೆ. ಹಿರಿಯ ಕಲಾವಿದರು ಯುವ ಕಲಾವಿದರಿಗೆ ಕಲೆ, ಅಭಿನಯ, ನಟನೆ ಕಲಿಸಬೇಕಾಗಿದೆ. ಯುವಕರು ನಾಟಕ ಅಭಿನಯಿಸಲು ಮುಂದೆ ಬರಬೇಕೆಂದು ಶಿವರುದ್ರಯ್ಯ ಸ್ವಾಮಿ ಹೇಳಿದ್ದಾರೆ. ಸೋಲಾಪುರ ಕನ್ನಡ ರಂಗಭೂಮಿ ಮಾಲಿಕೆಯಲ್ಲಿ ಶಿವರುದ್ರಯ್ಯ ಸ್ವಾಮಿ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

### ೪೨) ಶಿವಾನಂದ ಘೋಡತೆ

ದಕ್ಷಿಣ ಸೋಲಾಪುರ ತಾಲೂಕಿನ ವಳಸಂಗ ಗ್ರಾಮದಲ್ಲಿ ಶಿವಾನಂದ ಜನಿಸಿದರು. ತಂದೆ ಮಾಳಪ್ಪಾ, ತಾಯಿ ರಾಧಾಬಾಯಿ ಕನ್ನಡ ಓದಲು. ಬರೆಯಲು ಬಾರದಿದ್ದರೂ ಶಿವಾನಂದ ಕನ್ನಡ ನಾಟಕದಲ್ಲಿ ಅಭಿನಯಿಸಿ ಹೆಸರು ಮಾಡಿದರು. ಹಿರಿಯರಂಗ ಕಲಾವಿದ ಶಿವರುದ್ರಯ ಸ್ವಾಮಿ ಅವರ ಗರಡಿಯಲ್ಲಿ ಶಿವಾನಂದ ಬೆಳೆದುಬಂದವರು.

ಮಲ್ಲಿನಾಥ ಬಾಬಾನಗರ ಅವರ ಶ್ರೀ ಬಸವೇಶ್ವರ ನಾಟ್ಯ ಸಂಘದಿಂದ ನೂರಾರು ನಾಟಕಗಳು ಪ್ರದರ್ಶಿಸಿದ್ದಾರೆ. ಪ್ರಮುಖ ಕಥಾನಾಯಕನ ಪಾತ್ರ ಅಭಿನಯಿಸಿದ್ದಾರೆ.

ಅಣ್ಣ–ತಮ್ಮ, ತಂಗಿಯ ಮಾನ, ಆದರ್ಶ ಪದವೀಧರರು, ಗರತಿಗೆ ಎಲ್ಲಿದೆ ಗೌರವ, ಶಿವರಾತ್ರಿ, ಹೆಣ್ಣಿನ ಕಣ್ಣೀರು, ಕಳ್ಳ ನೀನಲ್ಲ ನಾಟಕಗಳು ಇವರು ಅಭಿನಯಿಸಿದ್ದಾರೆ. ಸೊಲ್ಲಾಪುರ ಕನ್ನಡ ರಂಗಭೂಮಿ ಮಾಲಿಕೆಯಲ್ಲಿ ಶಿವಾನಂದ

ಘೋಡಕೆ ಅವರಿಗೆ ಸನ್ಮಾನ ಪತ್ರ ನೀಡಿ ಗೌರವಿಸಲಾಗಿದೆ. ಯುವಕರು ನಾಟಕಗಳು ಅಭಿನಯಿಸಲು ಮುಂದಾಗುವ ಮೂಲಕ ವಳಸಂಗದ ನಾಟಕ ಕಲೆ ಉಳಿಸಬೇಕಾಗಿದೆ. ತಲೆ-ತಲಾಂತರಗಳಿಂದ ಪ್ರತಿ ವರ್ಷ ನಾಲ್ಕು ನಾಟಕಗಳು ಅಭಿನಯಿಸುತ್ತಾ ಬಂದಿದ್ದಾರೆ. ಇದುವರೆಗೂ ನಾಟಕ ಅಭಿನಯಿಸಲು ಬೇರೆ ಯಾವ ಗ್ರಾಮದಿಂದಲೂ ಕಲಾವಿದರನ್ನು ಕರೆಸಿಲ್ಲ. ವಳಸಂಗದಲ್ಲಿ ಸಾವಿರಾರು ನಾಟಕಗಳು ಪ್ರದರ್ಶನಗಳಾಗಿವೆ. ವಳಸಂಗದ ಎಲ್ಲ ನಾಟಕಗಳಲ್ಲಿ ವಳಸಂಗದ ಕಲಾವಿದರೇ ಅಭಿನಯಿಸಿದ್ದಾರೆ. ವಳಸಂಗದ ನಾಟಕ ಕಲೆ ಉಳಿಸಿ ಬೆಳೆಸುವುದು ನಮ್ಮ ಯುವಕರ ಕೈಯಲ್ಲಿದೆ ಎಂದು ಶಿವಾನಂದ ಘೋಡಕೆ ಹೇಳುತ್ತಾರೆ.

೪೩) ಗೌರಿಶಂಕರ ಕುರಲೆ

ದಕ್ಷಿಣ ಸೋಲಾಪುರ ತಾಲೂಕಿನ ವಳಸಂಗ ಗ್ರಾಮದಲ್ಲಿ ಗೌರಿಶಂಕರ ಜನಿಸಿದರು. ತಂದೆ ಶಿವಲಿಂಗ, ತಾಯಿ ಸರುಭಾಯಿ, ಮಲ್ಲಿಕಾರ್ಜುನ ಬಾಬಾನಗರ ಅವರ 'ಬಸವೇಶ್ವರ ನಾಟ್ಯ ಸಂಘ' ದಿಂದ ನೂರಾರು ನಾಟಕಗಳು ಪ್ರದರ್ಶಿಸಿದ್ದಾರೆ. ಗೌರಿಶಂಕರ ಕುರತಿ ಈ ನಾಟ್ಯ ಸಂಘದ ಹಲವು ನಾಟಕಗಳಲ್ಲಿ ಖಳನಾಯಕನ ಪಾತ್ರ ಅಭಿನಯಿಸಿದ್ದಾರೆ. ಹಿರಿಯ ರಂಗಭೂಮಿ ಕಲಾವಿದರಾದ ಶಿವರುದ್ರಯ್ಯ ಸ್ವಾಮಿ ಅವರ ಗರಡಿಯಲ್ಲಿ ಬೆಳೆದಿದ್ದಾರೆ.

ಅಣ್ಣ-ತಮ್ಮ, ತಂಗಿಯ ಮಾನ, ಶ್ರೀ ಬಸವೇಶ್ವರ ಮಹಾತ್ಮೆ, ಆದರ್ಶ ಪದವೀಧರರು, ಗರತಿಗೆ ಎಲ್ಲಿದೆ ಗೌರವ? ಶಿವರಾತ್ರಿ, ಹೆಣ್ಣಿನ ಕಣ್ಣೀರು ಹಲವು ನಾಟಕಗಳಲ್ಲಿ ಖಳನಾಯಕನ ಪಾತ್ರ ಅಭಿನಯಿಸಿದ್ದಾರೆ. ವಳಸಂಗದ ರಂಗಭೂಮಿಗೆ ವೇದಿಕೆಯಲ್ಲಿ ವಿಭಿನ್ನವಾದ ಸ್ವರೂಪ ನೀಡಲು ಇವರು ಪ್ರಮುಖರಾಗಿದ್ದಾರೆ. ಸೋಲಾಪುರ ಕನ್ನಡ ರಂಗಭೂಮಿ ಮಾಲಿಕೆಯಲ್ಲಿ ಗೌರೀಶಂಕರ ಕುರಲೆ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

೪೪) ಶಂಕರ ಬಣಗಾರ

ದಕ್ಷಿಣ ಸೋಲಾಪುರ ತಾಲೂಕಿನ ವಳಸಂಗ ಗ್ರಾಮದಲ್ಲಿ ಶಂಕರ ಬಣಗಾರ ಜನಿಸಿದರು. ತಂದೆ ಸಂಗಣ್ಣ, ತಾಯಿ ಶಶಿಕಲಾ, ಮಲ್ಲಿಕಾರ್ಜುನ ಬಾಬಾನಗರ ಅವರ 'ಶ್ರೀ ಬಸವೇಶ್ವರ ನಾಟ್ಯ ಸಂಘ'ದಲ್ಲಿ ಶಂಕರ ಬಣಗಾರ ಹಲವು ನಾಟಕಗಳು ಅಭಿನಯಿಸಿದ್ದಾರೆ. ವಿಧಿ ಆಟ ಬಲ್ಲವರು ಯಾರು ನಾಟಕದ ಮೂಲಕ ಇವರು ರಂಗ ಪ್ರವೇಶ ಮಾಡಿದರು. ಹಿರಿಯ ರಂಗಭೂಮಿ ಕಲಾವಿದರಾದ ಶಿವರುದ್ರಯ್ಯ ಸ್ವಾಮಿ ಅವರ ಗರಡಿಯಲ್ಲಿ ಶಂಕರ ಬಣಗಾರ ಬೆಳೆದಿದ್ದಾರೆ.

ಅಣ್ಣ-ತಮ್ಮ, ತಂಗಿಯ ಮಾನ, ಶ್ರೀ ಬಸವೇಶ್ವರ ಮಹಾತ್ಮೆ, ಹೆಣ್ಣಿನ ಕಣ್ಣೀರು,

ಹಲವು ಸಾಮಾಜಿಕ, ಪೌರಾಣಿಕ ನಾಟಕಗಳಲ್ಲಿ ಹಾಸ್ಯಪಾತ್ರ ಅಭಿನಯಿಸುವ ಮೂಲಕ ಮನೆಮಾತಾಗಿ ಪ್ರಸಿದ್ಧರಾಗಿದ್ದಾರೆ. ಸೋಲಾಪುರ ಕನ್ನಡ ರಂಗಭೂಮಿ ಮಾಲಿಕೆಯಲ್ಲಿ ಶಂಕರ ಬಣಗಾರ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

**೪೫) ಶ್ರೀಶೈಲ ದುದಗಿ**

ದಕ್ಷಿಣ ಸೋಲಾಪುರ ತಾಲೂಕಿನ ವಳಸಂಗ ಗ್ರಾಮದಲ್ಲಿ ಶ್ರೀಶೈಲ ದುದಗಿ ಜನಿಸಿದರು. ತಂದೆ ದಾನಪ್ಪಾ, ತಾಯಿ ಕಲಾವತಿ ಅಣ್ಣನ ಒಡಲು ನಾಟಕದ ಮೂಲಕ ಶ್ರೀಶೈಲ ದುದಗಿ ರಂಗ ಪ್ರವೇಶ ಮಾಡಿದರು. ಮಲ್ಲಿಕಾರ್ಜುನ ಬಾಬಾನಗರ ಅವರ 'ಶ್ರೀ ಬಸವೇಶ್ವರ ನಾಟ್ಯ ಸಂಘ'ದಲ್ಲಿ ಇವರು ಹಲವು ನಾಟಕಗಳು ಅಭಿನಯಿಸಿದ್ದಾರೆ. ಹಿರಿಯ ರಂಗಕಲಾವಿದರಾದ ಶಿವರುದ್ರಯ್ಯ ಸ್ವಾಮಿ ಅವರ ಗರಡಿಯಲ್ಲಿ ಬೆಳೆದಿದ್ದಾರೆ.

ಅಣ್ಣಾ-ತಮ್ಮ, ತಂಗಿಯ ಮಾನ, ಆದರ್ಶ ಪದವೀಧರರು, ಗರತಿಗೆ ಎಲ್ಲಿದೆ ಗೌರವ, ಶಿವರಾತ್ರಿ, ಹೆಣ್ಣಿನ ಕಣ್ಣೀರು, ಕಳ್ಳ ನೀನಲ್ಲ ಹಲವು ನಾಟಕಗಳಲ್ಲಿ ಖಳನಾಯಕನ ಪಾತ್ರ ಅಭಿನಯಿಸಿದ್ದಾರೆ. ನಾಡಿನ ವೃತ್ತಿ ರಂಗಭೂಮಿ ಹಾಗೂ ದುದಗಿ ಹವ್ಯಾಸಿ ರಂಗಭೂಮಿಗೆ ಹೊಸ ಸ್ವರೂಪ ನೀಡಿದವರು ವಳಸಂಗದ ಕಲಾವಿದರು. ಶ್ರೀಶೈಲ ದುದಗಿ ಖಳನಾಯಕನ ಪಾತ್ರ ಅಭಿನಯಿಸಲು ರಂಗಭೂಮಿಯಲ್ಲಿ ಮಿಂಚಾಗಿ ಆಗಮಿಸುತ್ತಾರೆ. ಇಂಥ ನಾಟಕ ಪ್ರಯೋಗ ನಡೆಯುವುದು ವಿರಳ. ಅದೇನೇ ಆದರು ಕನ್ನಡ ರಂಗಭೂಮಿಗೆ ಸೋಲಾಪುರದ ರಂಗಕಲಾವಿದರ ಕೊಡುಗೆ ಅನನ್ಯವಾಗಿದೆ. ವಳಸಂಗದ ರಂಗಭೂಮಿ ಕುರಿತು ಒಂದು ಮಹಾ ಪ್ರಬಂಧವಾಗಬಹುದು. ಸೋಲಾಪುರ ಕನ್ನಡ ರಂಗಭೂಮಿ ಮಾಲಿಕೆಯಲ್ಲಿ ಶ್ರೀಶೈಲ ದುದಗಿ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

**೪೬) ಶಿವಚಲಪ್ಪಾ ಸಂದೊಡೆ**

ಅಕ್ಕಲಕೋಟ ತಾಲೂಕಿನ ಮೈಂದರ್ಗಿಯಲ್ಲಿ ಶಿವಚಲಪ್ಪಾ ಜನಿಸಿದರು. ತಂದೆ ಮಲ್ಲಿಕಾರ್ಜುನ, ತಾಯಿ ಸುಮಿತ್ರಾಬಾಯಿ ಓಂಕಾರ ಬುರುಡ ಅವರ 'ಶ್ರೀ ಸಿದ್ಧರಾಮೇಶ್ವರ ನಾಟ್ಯ ಸಂಘ'ದ ನೂರಾರು ನಾಟಕಗಳಲ್ಲಿ ಶಿವಚಲಪ್ಪಾ ಸಂದೊಡೆ ಅವರು ಹಾಸ್ಯ ಪಾತ್ರ ಅಭಿನಯಿಸುತ್ತಾರೆ. ಮನೆಗೆ ತಕ್ಕ ಮಗ, ಧರ್ಮದ ಕಣ್ಣೀರು, ಸಿಂಧೂರ ಲಕ್ಷ್ಮಣ, ಮುಂತಾಗಿ ಹಲವು ಸಾಮಾಜಿಕ ನಾಟಕಗಳಲ್ಲಿ ಇವರು ಅಭಿನಯಿಸಿದ್ದಾರೆ.

ಮೈಂದರ್ಗಿಯ ಹಲವು ವೃತ್ತಿರಂಗಭೂಮಿಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಕರ್ನಾಟಕ ಮಹಾರಾಷ್ಟ್ರದ ಹಳ್ಳಿ-ಹಳ್ಳಿಯ ನಾಟಕ ಅಭಿಸಲು ಮೈಂದರ್ಗಿಯ ಶ್ರೀ

ಸಿದ್ಧರಾಮೇಶ್ವರ ನಾಟ್ಯ ಸಂಘದೊಂದಿಗೆ ನಾಟಕ ಅಭಿನಯಿಸಲು ಹೋಗುತ್ತಾರೆ. ವೃತ್ತಿರಂಗಭೂಮಿಯ ಹಿರಿಯ ಕಲಾವಿದ ಓಂಕಾರ ಬುರುಡ ಅವರ ಗರಡಿಯಲ್ಲಿ ಬೆಳೆಯುತ್ತಿದ್ದಾರೆ. ಸೋಲಾಪುರ ಕನ್ನಡ ರಂಗಭೂಮಿ ಮಾಲಿಕೆಯಲ್ಲಿ ಶಿವಚಲಪ್ಪಾ ಸಂದೊಡೆ ಅವರಿಗೆ ರಂಗಭೂಮಿ ಸಾಹಿತಿಗಳಾದ ಗವೀಶ ಹಿರೇಮಠ ಅವರು ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

### ೪೭) ಮಹಾಲಿಂಗ ಗೊಬ್ಬುರ

ಅಕ್ಕಲಕೋಟ ತಾಲೂಕಿನ ಮೈಂದರ್ಗಿಯಲ್ಲಿ ಮಹಾಲಿಂಗ ಜನಿಸಿದರು. ತಂದೆ ಮಹಾದೇವ, ತಾಯಿ ಭಾಗಿರಥಿ. ಮಹಾಲಿಂಗ ಗೊಬ್ಬುರ ಅವರು ಮೈಂದರ್ಗಿಯ ಎಲ್ಲ ವೃತ್ತಿರಂಗಭೂಮಿಗಳಲ್ಲಿ ಪೋಷಕ ಪಾತ್ರ ಅಭಿನಯಿಸುತ್ತಾರೆ. ಇವರು ರಂಗಸಜ್ಜಿಕೆ ನಿರ್ಮಾಣ ಕಾರ್ಯ ನಿರ್ವಹಿಸುತ್ತಾರೆ. ನಾಟಕ ಪರದೆಯ ಹಿಂದಿನ ಎಲ್ಲ ಸೇವೆ ಮಾಡುವ ಮೂಲಕ ಕಲಾವಿದರಿಗೆ ಸಹಕರಿಸುತ್ತಾರೆ.

### ೪೮) ಸಿದ್ದಯ್ಯ ಸ್ವಾಮಿ

ಅಕ್ಕಲಕೋಟ ತಾಲೂಕಿನ ಮೈಂದರ್ಗಿಯಲ್ಲಿ ಸಿದ್ದಯ್ಯ ಸ್ವಾಮಿ ಅವರು ಜನಿಸಿದರು. ತಂದೆ ಬಸಯ್ಯ, ತಾಯಿ ಶಂಕರಮ್ಮ. ಶಾಲಾ ದಿನಗಳಲ್ಲಿ ಸಿದ್ದಯ್ಯ ಅವರು 'ಕಳ್ಳ ಕಟ್ಟಿದ ತಾಳಿ' ನಾಟಕ ಅಭಿನಯಿಸುವ ಮೂಲಕ ರಂಗ ಪ್ರವೇಶ ಮಾಡಿದರು. ಮೈಂದರ್ಗಿಯ ಹಲವು ವೃತ್ತಿರಂಗಭೂಮಿಗಳಲ್ಲಿ ನಾಟಕಗಳು ಅಭಿನಯಿಸಿದ್ದಾರೆ. ಓಂಕಾರ ಬುರುಡ ಅವರ 'ಶ್ರೀ ಸಿದ್ದರಾಮೇಶ್ವರ ನಾಟ್ಯ ಸಂಘದಲ್ಲಿ ಅಪಾರವಾದ ಸೇವೆ ಸಲ್ಲಿಸಿದ್ದಾರೆ.

### ೪೯) ಸಿದ್ಧಾರಾಮ ಗೊಬ್ಬುರ

ಅಕ್ಕಲಕೋಟ ತಾಲೂಕಿನ ಮೈಂದರ್ಗಿಯಲ್ಲಿ ಸಿದ್ಧಾರಾಮ ಜನಿಸಿದರು. ತಂದೆ ಗುರುಶಾಂತಪ್ಪಾ, ತಾಯಿ ಶಾಂತಾಬಾಯಿ, ಶಾಲಾದಿನಗಳಲ್ಲಿಯೇ ಸಿದ್ಧಾರಾಮ ಮುಖಕ್ಕೆ ಬಣ್ಣ ಬಳಿದುಕೊಂಡು ಆಲಿಬಾಬಾ ಚಾಲೀಸ್ ಚೋರ್ ನಾಟಕದ ಮೂಲಕ ರಂಗ ಪ್ರವೇಶ ಮಾಡಿದರು. ಮೈಂದರ್ಗಿಯ ಹಲವು ವೃತ್ತಿರಂಗಭೂಮಿಗಳಲ್ಲಿ ಅಪಾರವಾದ ಸೇವೆ ಸಲ್ಲಿಸಿದ್ದಾರೆ. ಸಿದ್ಧರಾಮರಿಗೆ ನಾಟಕದ ಹುಚ್ಚು ಬೆಳೆಯುತ್ತಾ, ಮುಂದೆ ಯುವ ಕಲಾವಿದರ ತಂಡ ಕಟ್ಟಲು ಮುಂದಾಗುತ್ತಾರೆ, ಓಂಕಾರ ಬುರುಡ, ಲಕ್ಷ್ಮಣ ಬುರುಡ, ಹಲವು ಕಲಾವಿದರೊಂದಿಗೆ ಸಿದ್ಧರಾಮ ನಾಟ್ಯ ಸಂಘ ಸ್ಥಾಪಿಸುತ್ತಾರೆ. ಇವರ ಪರಿಶ್ರಮದಿಂದ ೨೦೧೧ರಲ್ಲಿ 'ಶ್ರೀ ಸಿದ್ಧರಾಮೇಶ್ವರ ನಾಟ್ಯ ಸಂಘ ಸ್ಥಾಪಿಸುತ್ತಾರೆ.

೨೦೧೧ರಲ್ಲಿ ಚಲನಚಿತ್ರ ನಿರ್ದೇಶಕರಾದ ಬಿ. ಸುರೇಶ ಅವರು 'ಮೈಂದರ್ಗಿಯ ಶ್ರೀ ಸಿದ್ಧರಾಮೇಶ್ವರ ನಾಟ್ಯ ಸಂಘ' ಉದ್ಘಾಟನೆ ಮಾಡುತ್ತಾರೆ. ಯುವಕರಿಂದ ಇರುವ ಈ ತಂಡ ಮೊದಲು ಹಲವು ನೋವು ಅನುಭವಿಸುತ್ತದೆ. ಕ್ಯಾಂಪ್ ಒಂದರಲ್ಲಿ ಇವರ ನಾಟಕ ಪರಿಕರಗಳು ಸುಂಟರ ಗಾಳಿಗೆ ನಾಶವಾಗುತ್ತಿದೆ. ಓಂಕಾರ ಬುರುಡ, ಸಿದ್ಧಾರಾಮ ಗೊಬ್ಬುರ ಧೈರ್ಯಮಾಡಿ ಸಂಘ ಚೇತರಿಸಿಕೊಳ್ಳಲು ಪ್ರಯತ್ನಿಸುತ್ತಾರೆ.

ಓಂಕಾರ ಬುರುಡ ಅವರ 'ಶ್ರೀ ಸಿದ್ಧರಾಮೇಶ್ವರ ನಾಟ್ಯ ಸಂಘ' ಕರ್ನಾಟಕ ಮಹಾರಾಷ್ಟ್ರದ ಹಳ್ಳಿ-ಹಳ್ಳಿಗೆ ನಾಟಕ ಪ್ರದರ್ಶಿಸಲು ಪ್ರಸಿದ್ಧವಾಗಿದೆ.

ಸಿಂಧೂರ ಲಕ್ಷ್ಮಣ, ಮದುವೆಯಾದರೂ ಮಾಂಗಲ್ಯ ಉಳಿಯಲಿಲ್ಲ. ಮಾತು ಕೊಟ್ಟ ಮುತ್ತೈದೆ, ತಾಯಿಯ ಹಾಲು ವಿಷವಾಯಿತು. ಕಲಿಯುಗದ ಪುಜಾರಿ, ಚಿನ್ನದ ಗೊಂಬೆ ನೂರಾರು ನಾಟಕಗಳಲ್ಲಿ ಸಿದ್ಧಾರಾಮ ಗೊಬ್ಬುರ ಹಾಸ್ಯ ಪಾತ್ರ ಅಭಿನಯಿಸಿದ್ದಾರೆ. ಸೋಲಾಪುರ ಕನ್ನಡ ರಂಗಭೂಮಿ ಮಾಲಿಕೆಯಲ್ಲಿ ಸಿದ್ಧಾರಾಮ ಗೊಬ್ಬುರ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

## ೫೦) ದಯಾನಂದ ಕುದಲೆ

ದಕ್ಷಿಣ ಸೋಲಾಪುರ ತಾಲೂಕಿನ ದಯಾನಂದ ಅವರು ವಳಸಂಗ ಗ್ರಾಮದಲ್ಲಿ ಜನಿಸಿದರು. ತಂದೆ ಶಿವಲಿಂಗಪ್ಪ, ತಾಯಿ ಸರುಬಾಯಿ. ಮಲ್ಲಿಕಾರ್ಜುನ ಬಾಬಾನಗರ ಅವರ 'ಶ್ರೀ ಬಸವೇಶ್ವರ ನಾಟ್ಯ ಸಂಘ'ದಲ್ಲಿ ದಯಾನಂದ ಕುದಲೆ ಹಲವು ಸಾಮಾಜಿಕ, ಪೌರಾಣಿಕ ನಾಟಕಗಳು ಅಭಿನಯಿಸಿದ್ದಾರೆ. ಇವರು ಕಥಾನಾಯಕ ಪ್ರಮುಖ ಪಾತ್ರ ಅಭಿನಯಿಸುವ ಮೂಲಕ ರಂಗಭೂಮಿಗೆ ಹೆಸರು ಮಾಡಿದವರು.

ಅಣ್ಣ-ತಮ್ಮ, ತಂಗಿಯ ಮಾನ, ಶ್ರೀ ಬಸವೇಶ್ವರ ಮಹಾತ್ಮೆ, ಹೆಣ್ಣಿನ ಕಣ್ಣೀರು, ಹಲವು ಸಾಮಾಜಿಕ ನಾಟಕಗಳು ಅಭಿನಯಿಸಿದ್ದಾರೆ. ವಳಸಂಗದ ರಂಗಭೂಮಿಗೆ ತನ್ನದೇಆದ ಮಹತ್ವ ಪಡೆದುಕೊಂಡು ನಾಟಕಗಳು ಪ್ರಸಿದ್ಧವಾಗಿವೆ.

## ೫೧) ನಾಗಯ್ಯ ಸ್ವಾಮಿ

ದಕ್ಷಿಣ ಸೋಲಾಪುರ ತಾಲೂಕಿನ ನಾಗಯ್ಯ ಅವರು ವಳಸಂಗ ಗ್ರಾಮದಲ್ಲಿ ಜನಿಸಿದರು. ತಂದ ಚೆನ್ನಬಸಯ್ಯ, ತಾಯಿ ಸರುಬಾಯಿ, ಮಲ್ಲಿಕಾರ್ಜುನ ಬಾಬಾನಗರ ಅವರ 'ಶ್ರೀ ಬಸವೇಶ್ವರ ನಾಟ್ಯ ಸಂಘ'ದಲ್ಲಿ ನಾಗಯ್ಯ ಸ್ವಾಮಿ ಹಲವು ಸಾಮಾಜಿಕ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಇವರು ಹಾಸ್ಯ ಪಾತ್ರ ಅಭಿನಯಿಸಿದ್ದಾರೆ.

ತಂಗಿಯ ಮನೆ, ಆದರ್ಶ ಪದವೀಧರರು, ಅಣ್ಣ-ತಮ್ಮ, ತಂಗಿಯ ಮಾನ, ಶಿವರಾತ್ರಿ, ಸಮಾಜಕ್ಕೆ ಶಿಕ್ಷೆ ಹಲವು ಸಾಮಾಜಿಕ ನಾಟಕಗಳಲ್ಲಿ ಇವರು ಹಾಸ್ಯ

ಪಾತ್ರ ಅಭಿನಯಿಸಿದ್ದಾರೆ. ವಳಸಂಗದ ರಂಗಭೂಮಿಗೆ ಇವರ ಕೊಡುಗೆ ಅಪಾರವಾಗಿದೆ.

### ೫೨) ಕಲ್ಲಯ್ಯ ಸ್ವಾಮಿ

ದಕ್ಷಿಣ ಸೋಲಾಪುರ ತಾಲೂಕಿನ ವಳಸಂಗದಲ್ಲಿ ಕಲ್ಲಯ್ಯ ಸ್ವಾಮಿ ಜನಿಸಿದರು. ತಂದೆ ಮಲ್ಲಯ್ಯ, ತಾಯಿ ಸಂಗಮ್ಮ. ಮಲ್ಲಿಕಾರ್ಜುನ ಬಾಬಾನಗರ ಅವರ 'ಶ್ರೀ ಬಸವೇಶ್ವರ ನಾಟ್ಯ ಸಂಘ' ದಲ್ಲಿ ಕಲ್ಲಯ್ಯ ಸ್ವಾಮಿ ಹಲವು ಸಾಮಾಜಿಕ ನಾಟಕಗಳಲ್ಲಿ ಅಭಿನಯಿಸಿದ್ದಾರೆ.

ವಿಧಿ ಆಟ ಬಲ್ಲವರು ಯಾರು, ತಾಳಿ ಕಟ್ಟಿದರೂ ಗಂಡನಲ್ಲ, ಆದರ್ಶ ಪದವೀಧರರು, ಗರತಿಯ ಜೀವನ, ಹುಡುಗಿ ಮೆಚ್ಚಿದ ಹುಂಬ ಹಲವು ಸಾಮಾಜಿಕ ನಾಟಕ ಅಭಿನಯಿಸಿದ್ದಾರೆ. ವಳಸಂಗದ ರಂಗಭೂಮಿಗೆ ಇವರ ಕೊಡುಗೆ ಅಪಾರವಾಗಿದೆ.

### ೫೩) ಚಂದ್ರಕಾಂತ ಬಬಲಾದ

ಅಕ್ಕಲಕೋಟ ತಾಲೂಕಿನ ನಾಗೂರ ಗ್ರಾಮದಲ್ಲಿ ಚಂದ್ರಕಾಂತ ಬಬಲಾದ ಅವರು ಜನಿಸಿದರು. ಅವರ ತಂದೆ ಭೀಮಶಾ, ತಾಯಿ ಲಕ್ಷ್ಮಿಬಾಯಿ, ಮೈಂದರ್ಗಿಯ ಈರಣ್ಣಾ ಭರಮಾ ಅವರ ಗರಡಿಯಲ್ಲಿ ಬೆಳೆದು ಹಲವು ನಾಟಕ ಅಭಿನಯಿಸಿದ್ದಾರೆ. ಅಹಂಕಾರಿ, ತಂಗಿಯ ಮನೆ, ಕುಲಪುತ್ರ, ಬಡತನ ಹಲವು ನಾಟಕಗಳಲ್ಲಿ ಹಾಸ್ಯ ಹಾಗೂ ಕಥಾನಾಯಕ ಪಾತ್ರ ಅಭಿನಯಿಸಿದ್ದಾರೆ. ಸೋಲಾಪುರ ಕನ್ನಡ ರಂಗಭೂಮಿ ಮಾಲಿಕೆಯಲ್ಲಿ ಇವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

### ೫೪) ಮಲ್ಲಯ್ಯ ಹಿರೇಮಠ

ದಕ್ಷಿಣ ಸೊಲ್ಲಾಪುರ ತಾಲೂಕಿನ ಲಿಂಬಿಚಿಂಚ್ಚೋಳಿ ಗ್ರಾಮದಲ್ಲಿ ಮಲ್ಲಯ್ಯ ಹಿರೇಮಠ ಜನಿಸಿದರು. ತಂದೆ ಈರಯ್ಯ, ತಾಯಿ ನಿಲ್ಲವ್ವ, ಬಿಂಬಿಚಿಂಚ್ಚೋಳಿಯ ಶ್ರೀ ರೇವಣಸಿದ್ದೇಶ್ವರ ನಾಟ್ಯ ಸಂಘದಲ್ಲಿ ಇವರು ಹಲವು ನಾಟಕಗಳು ಅಭಿನಯಿಸಿದ್ದಾರೆ. ಈ ಗ್ರಾಮದ ದೇವರಾದ ಶ್ರೀ ರೇವಣಸಿದ್ದೇಶ್ವರ ಜಾತ್ರೆಯಲ್ಲಿ ಪ್ರತಿವರ್ಷ ತಪ್ಪದೆ ನಾಟಕ ಪ್ರದರ್ಶಿಸುತ್ತಾರೆ.

ಮಗ ಹೋದರೂ ಮಾಂಗಲ್ಯ ಬೇಕು, ಎಚ್ಚರ ತಂಗಿ ಎಚ್ಚರ, ಸಿಡಿದೆದ್ದ ಶಿವಶಕ್ತಿ, ತಾಳಿ ಕಳಚಿತ್ತು, ತವರು ಮಕ್ಕಳು, ಕೊಬ್ಬಿದ ಹೆಬ್ಬುಲಿ, ದಾಸಿ ಮೆಚ್ಚಿದ ದೇಸಾಯಿ, ಸತಿ ಸಂಸಾರದ ಜ್ಯೋತಿ ಹಲವು ನಾಟಕಗಳಲ್ಲಿ ಮಲ್ಲಯ್ಯ ಹಿರೇಮಠ ಅಭಿನಯಿಸಿದ್ದಾರೆ. ಲಿಂಬಿಚಿಚ್ಚೋಳಿ ರಂಗಭೂಮಿಗೆ ಇವರ ಕೊಡುಗೆ ಅಪಾರವಾಗಿದೆ.

**೫೫) ಸಕಹಾರಿ ಸರಾಫ**

ದಕ್ಷಿಣ ಸೋಲಾಪುರ ತಾಲೂಕಿನ ಲಿಂಬಿಚಿಚ್ಚೋಳಿಯಲ್ಲಿ ಸಕಹಾರಿ ಸರಾಫ ಜನಿಸಿದರು. ತಂದೆ ವಿಠ್ಠಲ, ತಾಯಿ ಜಾನಕಾಬಾಯಿ, ಲಿಂಬಿಚಿಚ್ಚೋಳಿಯ ಶ್ರೀ ರೇವಣಸಿದ್ದೇಶ್ವರ ನಾಟ್ಯ ಸಂಘದಲ್ಲಿ ಇವರು ಹಲವು ನಾಟಕಗಳು ಅಭಿನಯಿಸಿದ್ದಾರೆ. ಈ ಗ್ರಾಮ ದೇವರಾದ ಶ್ರೀ ರೇವಣ ಸಿದ್ದೇಶ್ವರ ಜಾತ್ರೆಯಲ್ಲಿ ಇವರು ಪ್ರತಿ ವರ್ಷ ನಾಟಕ ಅಭಿನಯಿಸುತ್ತಾರೆ.

ಗರುಡ ರಾಜ್ಯದಲ್ಲಿ ಘಟಸರ್ಪ, ಹುಡುಗಿ ಮೆಚ್ಚಿದ ಹುಂಬ, ದಾರಿದೀಪ, ರತ್ನಮಾಂಗಲ್ಯ, ದೀಪಾವಳಿ, ಕೊರಳು ಒಂದು ತಾಳಿ ಎರಡು, ಹಂತಕರಿಗೆ ಹಂತಕ, ತಾಳ ತಪ್ಪಿದ ಬಾಳು ಹಲವು ನಾಟಕಗಳು ಸಕಹಾರಿ ಸರಾಫ ಅವರು ಅಭಿನಯಿಸಿದ್ದಾರೆ. ಲಿಂಬಿಚಿಂಚ್ಚೋಳಿಯ ರಂಗಭೂಮಿಗೆ ಇವರ ಕೊಡುಗೆ ಅಪಾರವಾಗಿದೆ.

**೫೬) ಸಿದ್ದೇಶ್ವರ ಸೊರೆಗಾಂವ**

ದಕ್ಷಿಣ ಸೋಲಾಪುರ ತಾಲೂಕಿನ ಲಿಂಬಿಚಿಂಚ್ಚೋಳಿಯಲ್ಲಿ ಸಿದ್ದೇಶ್ವರ ಸೊರೆಗಾಂವ ಜನಿಸಿದರು. ತಂದೆ ದೊಡ್ಡಪ್ಪ, ತಾಯಿ ಬಂಡೆವ್ವ ಲಿಂಬಿಚಿಂಚ್ಚೋಳಿಯ ಶ್ರೀ ರೇವಣಸಿದ್ದೇಶ್ವರ ನಾಟ್ಯ ಸಂಘದಲ್ಲಿ ಇವರು ಹಲವು ನಾಟಕಗಳು ಅಭಿನಯಿಸಿದ್ದಾರೆ. ಈ ಗ್ರಾಮ ದೇವರಾದ ಶ್ರೀ ರೇವಣಸಿದ್ದೇಶ್ವರ ಜಾತ್ರೆಯಲ್ಲಿ ಇವರು ಪ್ರತಿ ವರ್ಷ ನಾಟಕ ಅಭಿನಯಿಸುತ್ತಾರೆ.

ಮಗ ಹೋದರೂ ಮಾಂಗಲ್ಯ ಬೇಕು, ಎಚ್ಚರ ತಂಗಿ ಎಚ್ಚರ, ಸಿಡಿದೆದ್ದ ಶಿವಶಕ್ತಿ, ತಾಳಿ ಕಳಚಿತ್ತು ತವರು ಮುಕ್ಕಿತ್ತು, ಕೊಬ್ಬಿದ ಹೆಬ್ಬುಲಿ, ದಾಸಿ ಮೆಚ್ಚಿದ ದೇಸಾಯಿ, ಸತಿ ಸಂಸಾರದ ಜ್ಯೋತಿ, ಗರುಡ ರಾಜ್ಯದಲ್ಲಿ ಘಟಸರ್ಪ, ದೀಪಾವಳಿ ಹಲವು ನಾಟಕಗಳು ಇವರು ಅಭಿನಯಿಸಿದ್ದಾರೆ. ಲಿಂಬಿಚಿಂಚ್ಚೋಳಿ ರಂಗಭೂಮಿಗೆ ಇವರ ಕೊಡುಗೆ ಅಪಾರವಾಗಿದೆ.

**೫೭) ಜಯಪ್ರಕಾಶ ಹಿರೇಮಠ**

ದಕ್ಷಿಣ ಸೋಲಾಪುರ ತಾಲ್ಲೂಕಿನ ಲಿಂಬಿಚಿಂಚ್ಚೋಳಿಯಲ್ಲಿ ಜಯಪ್ರಕಾಶ ಜನಿಸಿದರು. ಅವರ ತಂದೆ ಬಸವರಾಜ, ತಾಯಿ ಜಗದೇವಿ, ಲಿಂಬಿಚಿಂಚ್ಚೋಳಿಯ ಶ್ರೀ ರೇವಣಸಿದ್ದೇಶ್ವರ ನಾಟ್ಯ ಸಂಘದಲ್ಲಿ ಇವರು ಹಲವು ನಾಟಕಗಳು ಅಭಿನಯಿಸಿದ್ದಾರೆ. ಮಗ ಹೋದರೂ ಮಾಂಗಲ್ಯ ಬೇಕು, ಎಚ್ಚರ ತಂಗಿ ಎಚ್ಚರ, ಸಿಡಿದೆದ್ಧ ಶಿವಶಕ್ತಿ, ತಾಳಿ ಕಳಚಿತ್ತು ತವರು ಮಕ್ಕಳು ಹಲವು ನಾಟಕ ಇವರು

ಅಭಿನಯಿಸಿದ್ದಾರೆ. ಲಿಂಬಿಚಿಂಚ್ಯೂಳಿಯ ರಂಗಭೂಮಿಗೆ ಜಯಪ್ರಕಾಶ ಹಿರೇಮಠ ಅವರ ಕೊಡುಗೆ ಅಪಾರವಾಗಿದೆ.

### ೫೮) ದಸ್ತಗಿರ ಮಾಶಾಳ

ದಕ್ಷಿಣ ಸೋಲಾಪುರ ತಾಲೂಕಿನ ಲಿಂಬಿಚಿಂಚ್ಯೂಳಿ ಗ್ರಾಮದಲ್ಲಿ ದಸ್ತಗಿರ ಮಾಶಾಳ ಜನಿಸಿದರು. ಲಿಂಬಿಚಿಂಚ್ಯೂಳಿಯ ಶ್ರೀ ರೇವಣಸಿದ್ಧೇಶ್ವರ ನಾಟ್ಯ ಸಂಘದಲ್ಲಿ ಇವರು ಹಲವು ನಾಟಕಗಳು ಅಭಿನಯಿಸಿದ್ದಾರೆ.

ಸತಿ ಸಂಸಾರದ ಜ್ಯೋತಿ, ಗರುಡ ರಾಜ್ಯದಲ್ಲಿ ಘಟಸರ್ಪ, ಹುಡುಗಿ ಮೆಚ್ಚಿದ ಹುಂಬ ಹಲವು ನಾಟಕಗಳು ಇವರು ಅಭಿನಯಿಸಿದ್ದಾರೆ. ಲಿಂಬಿಚಿಂಚ್ಯೂಳಿಯ ರಂಗಭೂಮಿಗೆ ದಸ್ತಗಿರ ಮಾಶಾಳ ಅವರ ಕೊಡುಗೆ ಅಪಾರವಾಗಿದೆ.

### ೫೯) ಸುಭಾಶ ಮಾಳಿ

ದಕ್ಷಿಣ ಸೋಲಾಪುರ ತಾಲೂಕಿನ ಲಿಂಬಿಚಿಂಚ್ಯೂಳಿ ಗ್ರಾಮದಲ್ಲಿ ಸುಭಾಶ ಮಾಳಿ ಜನಿಸಿದರು. ಅವರ ತಂದೆ ಚಂದು, ತಾಯಿ ರತ್ನವ್ವ, ಲಿಂಬಿಚಿಂಚ್ಯೂಳಿಯ ಶ್ರೀ ರೇವಣಸಿದ್ಧೇಶ್ವರ ನಾಟ್ಯ ಸಂಘದಲ್ಲಿ ಇವರು ಹಲವು ನಾಟಕಗಳು ಅಭಿನಯಿಸಿದ್ದಾರೆ

ಮಗ ಹೋದರೂ ಮಾಂಗಲ್ಯ ಬೇಕು, ಎಚ್ಚರ ತಂಗಿ ಎಚ್ಚರ, ಸಿಡಿದೆದ್ದ ಶಿವಶಕ್ತಿ, ದೀಪಾವಳಿ, ಕೊರಳು ಒಂದು ತಾಳಿ ಎರಡು ಹಲವು ಸಾಮಾಜಿಕ ನಾಟಕಗಳು ಇವರು ಅಭಿನಯಿಸಿದ್ದಾರೆ. ಲಿಂಬಿಚಿಂಚ್ಯೂಳಿಯ ರಂಗಭೂಮಿಗೆ ಸುಭಾಶ ಮಾಳಿ ಅವರ ಕೊಡುಗೆ ಅಪಾರವಾಗಿದೆ.

### ೬೦) ಮಹಾನಂದಾ ಕೋಲಾಟಿ

ಅಕ್ಕಲಕೋಟ ತಾಲೂಕಿನ ದುಧನಿ ಗ್ರಾಮದಲ್ಲಿ ಮಹಾನಂದಾ ಕೋಲಾಟಿ ಅವರು ಜನಿಸಿದರು. ಇವರ ತಂದೆ ಅಮೃತ, ತಾಯಿ ಈರಮ್ಮ ಮಹಾನಂದಾ ಕೋಲಾಟಿ ಅಮೆಚೂರ ರಂಗ ಕಲಾವಿದೆ. ಕರ್ನಾಟಕ ಮಹಾರಾಷ್ಟ್ರದ ಹಳ್ಳಿ-ಹಳ್ಳಿಯ ನಾಟಕ ಅಭಿನಯಿಸಲು ಹೋಗುತ್ತಾರೆ. ಇವರು ಕಳೆದ ಮುವತ್ತು ವರ್ಷಗಳಿಂದ ನಾಟಕ ಅಭಿನಯಿಸಿ ಉಪ ಜೀವನ ಮಾಡುತ್ತಿದ್ದಾರೆ. ನಾಟಕ ದೊರೆತರೆ ಇವರ ಜೀವನ ಸುಖಮಯವಾಗಿರುತ್ತದೆ. ಅಮೆಚೂರ ನಾಟಕಗಳು ಸಿಗದೆ ಹೋದರೆ ಮುಳ್ಳಿನ ಹಾಸಿಗೆಯಂತೆ ಇವರ ಜೀವನವಿರುತ್ತದೆ. ನಾಟಕದಿಂದಲೇ ಕುಟುಂಬ ಅವಲಂಬಿಸಿದೆ. ಇಂಥ ಕಲಾವಿದರು ನಿಜ ಜೀವನದಲ್ಲಿ ಹಲವು ನೋವು-ಯಾತನೆಗಳು ಅನುಭವಿಸಿದ್ದಾರೆ. ಇಂಥ ಅಮೆಚೂರ ರಂಗ ಕಲಾವಿದರಿಂದ

ಗ್ರಾಮೀಣ ಭಾಗದ ರಂಗಕಲೆ ಬೆಳೆದಿದೆ. ಅಮೆಚೂರ ಕಲಾವಿದರು ಗ್ರಾಮೀಣ ಭಾಗದಲ್ಲಿ ನಟರಾಗಿ, ನಿರ್ದೇಶಕರಾಗಿ, ಮೇಕಪ್ ಕಲಾವಿದರಾಗಿ ವಿಭಿನ್ನವಾದ ರೀತಿಯಿಂದ ಸೇವೆ ಮಾಡುತ್ತಾರೆ. ಮಹಾನಂದಾ ಕೋಲಾಟಿ ಅವರ ಮನೆಯಲ್ಲಿ ಅರುಣಾ, ಯಮುನಾ, ಮಂಜುಳಾ, ರಂಜನಾ, ಪವಿತ್ರಾ ಇವರೆಲ್ಲರೂ ರಂಗಭೂಮಿ ಕಲಾವಿದರು. ರಂಗಭೂಮಿ ಅವಲಂಬಿಸಿ ಜೀವನ ಕಳೆಯುವ ಇಂಥ ಕಲಾವಿದರಿಗೆ ಕರ್ನಾಟಕ ಸರಕಾರದಿಂದ ಮಾಸಾಶನ ದೊರೆಯಬೇಕಾಗಿದೆ. ಇವರ ಇಡೀ ಕುಟುಂಬ ಅಮೆಚೂರ ರಂಗಭೂಮಿಗೆ ಅಪಾರವಾದ ಸೇವೆ ಸಲ್ಲಿಸುತ್ತಿದೆ.

### ೬೧) ಅರುಣಾ ಕೋಲಾಟಿ

ಅಕ್ಕಲಕೋಟ ತಾಲೂಕಿನ ದುಧನಿ ಗ್ರಾಮದಲ್ಲಿ ಅರುಣಾ ಕೋಲಾಟಿ ಅವರು ಜನಿಸಿದರು. ಇವರ ತಂದೆ ಅಮೃತ, ತಾಯಿ ಈರಮ್ಮ. ಇವರ ಅಕ್ಕ ಮಹಾನಂದಾ ಅವರ ಪ್ರಭಾವದಿಂದ ಅರುಣಾ ರಂಗಭೂಮಿ ಪ್ರವೇಶ ಮಾಡಿದರು. ದುಧನಿಯ ಅರುಣಾ ಕೋಲಾಟಿ ಅವರು ಅಮೆಚೂರ ರಂಗಕಲಾವಿದರು. ಕರ್ನಾಟಕ ಮಹಾರಾಷ್ಟ್ರದ ಹಳ್ಳಿ-ಹಳ್ಳಿಯಲ್ಲಿ ನಾಟಕ ಅಭಿನಯಿಸಲು ಹೋಗುತ್ತಾರೆ.

ಇಪ್ಪತ್ತೈದು ವರ್ಷಗಳಿಂದ ಅಮೆಚೂರ ಕಂಪನಿಗಳಲ್ಲಿ ಸೇವೆ ಮಾಡುತ್ತಾರೆ. ನಾಟಕ ಅಭಿನಯಿಸುವ ಮೂಲಕ ಇವರ ಉಪಜೀವನ ಅವಲಂಬಿಸಲಾಗಿದೆ. ರಂಗಭೂಮಿಯ ಸೇವೆಯಲ್ಲಿ ಹಲವು ನೋವುಗಳು ಅನುಭವಿಸಿದ್ದಾರೆ. ಇವರಿಗೆ ಸಂದರ್ಶನ ಮಾಡಿದಾಗ, 'ನಮ್ಮ ಕಲಾವಿದರ ನೋವು ಕೇಳುವವರು ಯಾರು?' ಎಂದು ನಮಗೆ ಪ್ರಶ್ನಿಸುತ್ತಾರೆ. ಅಭಿನಯಿಸುವಾಗ ಆನಂದ ಪಡುತ್ತೇವೆ. ನಮಗೆ ಅಮೆಚೂರ ನಾಟಕಗಳು ಸಿಗದೆ ಹೋದಾಗ ಉಪವಾಸದಿಂದ ನರಳುತ್ತೇವೆ ಎಂದು ಅರುಣಾ ನೋವಿನಿಂದ ಮನದಾಳದ ಮಾತು ಹೇಳುತ್ತಾರೆ. ಅರುಣಾ ಅಮೆಚೂರ ರಂಗಭೂಮಿಗೆ ಅಪಾರವಾದ ಸೇವೆ ಸಲ್ಲಿಸಿದ್ದಾರೆ.

### ೬೨) ಯಮುನಾ ಕೋಲಾಟಿ

ಅಕ್ಕಲಕೋಟ ತಾಲೂಕಿನ ದುಧನಿಯಲ್ಲಿ ಯಮುನಾ ಕೋಲಾಟಿ ಜನಿಸಿದರು. ಆವರ ತಂದೆ ಆಮೃತ, ತಾಯಿ ಈರಮ್ಮ. ಅಕ್ಕಂದಿರಾದ ಮಹಾನಂದಾ, ಅರುಣಾ ಜೊತೆಗೆ ಚಿಕ್ಕಂದಿನಿಂದ ಅಮೆಚೂರ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಯಮುನಾ ಸಹ ಕರ್ನಾಟಕ-ಮಹಾರಾಷ್ಟ್ರದ ಹಲವು ಹಳ್ಳಿ-ಹಳ್ಳಿಗಳಿಗೆ ಅಮೆಚೂರ ರಂಗಭೂಮಿಯ ಕಲಾವಿದೆ. ದುಧನಿಯ ಕೋಲಾಟಿ ಪರಿವಾರ ಅಮೆಚೂರ ರಂಗಭೂಮಿಗೆ ಅಪಾರವಾದ ಸೇವೆ ಸಲ್ಲಿಸಿದೆ. ನಾಟಕಗಳಿಂದಲೇ ಇವರ ಕುಟುಂಬ ಅವಲಂಬಿಸಿದೆ. ಇಂಥ ಕಲಾವಿದರಿಗೆ ಗೌರವಿಸುವಂಥ ಕೆಲಸ ಕರ್ನಾಟಕ ನಾಟಕ

ಅಕಾಡೆಮಿಯಿಂದ ನಡೆಯಬೇಕಾಗಿದೆ. ನಾವು ಅಮೆಚೂರ ಕಲಾವಿದರು. ವೃತ್ತಿರಂಗಭೂಮಿ ಕಲಾವಿದರಿಗೆ ಗೌರವವಿದೆ. ನಮ್ಮಂಥ ಅಮೆಚೂರ ಕಲಾವಿದರಿಗೆ ಗೌರವವಿಲ್ಲವೆಂದು ಯಮುನಾ ಹೇಳುತ್ತಾರೆ. ಯಮುನಾ ಕೋಲಾಟಿ ಅವರು ಅಮೆಚೂರ ರಂಗಭೂಮಿಗೆ ಅಪಾರವಾದ ಸೇವೆ ಸಲ್ಲಿಸಿದ್ದಾರೆ.

### ೬೩) ಮಂಜುಳಾ ಕೋಲಾಟಿ

ಅಕ್ಕಲಕೋಟ ತಾಲೂಕಿನ ದುಧನಿಯಲ್ಲಿ ಮಂಜುಳಾ ಕೋಲಾಟಿ ಜನಿಸಿದರು. ತಂದೆ ಅಮೃತ, ತಾಯಿ ಈರಮ್ಮ. ಕುಟುಂಬದ ವಂಶಪರಂಪರೆ ಅಮೆಚೂರ ಕಲಾವಿದೆಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕರ್ನಾಟಕ-ಮಹಾರಾಷ್ಟ್ರದ ಹಳ್ಳಿ-ಹಳ್ಳಿಯ ನಾಟಕ ಕಂಪನಿಗಳಲ್ಲಿ ಅಮೆಚೂರ ಕಲಾವಿದೆಯಾಗಿ ಪ್ರಸಿದ್ಧವಾದ ಹೆಸರು ಮಾಡಿದಳು. ನಾಟಕ ಅಭಿನಯದಿಂದಲೇ ಇವರ ಉಪಜೀವನವಿದೆ. ಒಂದೆ ಕುಟುಂಬದಲ್ಲಿ ನಾಲ್ಕು ಜನ ಕಲಾವಿದರಿದ್ದಾರೆ. ನಾಟಕಗಳು ದೊರೆತರೆ. ಕುಟುಂಬ ಆನಂದದಿಂದ ಜೀವನ ಕಳೆಯುತ್ತದೆ. ಇಲ್ಲದಿದ್ದಾಗ ಇವರು ಕುಟುಂಬ ನಡೆಸುವುದು ಕಷ್ಟವಾಗುತ್ತದೆ. ಅಮೆಚೂರ ಕಲಾವಿದರಿಗೆ ಕರ್ನಾಟಕ ನಾಟಕ ಅಕಾಡೆಮಿಯಿಂದ ಧನಸಹಾಯ ನೀಡಬೇಕೆಂದು ಮಂಜುಳಾ ಆಗ್ರಹಿಸಿದ್ದಾರೆ. ಮಂಜುಳಾ ಅಮೆಚೂರ ರಂಗಭೂಮಿಗೆ ಆಪಾರವಾದ ಸೇವೆ ಸಲ್ಲಿಸಿದ್ದಾರೆ.

### ೬೪) ರಂಜನಾ ಕೋಲಾಟಿ

ಅಕ್ಕಲಕೋಟ ತಾಲ್ಲೂಕಿನ ದುಧನಿಯಲ್ಲಿ ರಂಜನಾ ಕೋಲಾಟಿ ಜನಿಸಿದಳು. ಅವಳ ತಂದೆ ಬಸವರಾಜ, ತಾಯಿ ಯಮುನಾ. ತಾಯಿಯ ಪ್ರಭಾವದಿಂದ ಯಮುನಾ ಅಮೆಚೂರ ರಂಗಭೂಮಿ ಪ್ರವೇಶ ಮಾಡಿದರು. ಕರ್ನಾಟಕ-ಮಹಾರಾಷ್ಟ್ರದ ಹಳ್ಳಿ-ಹಳ್ಳಿಯ ನಾಟಕ ಅಭಿನಯಿಸಲು ಹೋಗುತ್ತಾರೆ. ಅಭಿನಯ, ನೃತ್ಯಗಳಿಂದ ರಂಜನಾ ಕೋಲಾಟಿ ಹೆಸರು ಮಾಡಿದರು. ಮೈಂದರ್ಗಿಯ ಓಂಕಾರ ಬುರುಡ ಅವರ ಶ್ರೀ ಸಿದ್ಧರಾಮೇಶ್ವರ ನಾಟ್ಯ ಸಂಘದಲ್ಲಿ ರಂಜನಾ ಕೋಲಾಟಿ ಹಲವು ನಾಟಕಗಳು ಅಭಿನಯಿಸಿದ್ದಾರೆ. ರಂಜನಾ ಕೋಲಾಟಿ ಅಮೆಚೂರ ರಂಗಭೂಮಿಗೆ ಅಪಾರವಾದ ಸೇವೆ ಸಲ್ಲಿಸಿದ್ದಾರೆ.

### ೬೫) ಪವಿತ್ರಾ ಕೋಲಾಟಿ

ಅಕ್ಕಲಕೋಟ ತಾಲೂಕಿನ ದುಧನಿಯಲ್ಲಿ ಪವಿತ್ರಾ ಜನಿಸಿದಳು. ತಂದೆ ಶ್ರೀಮಂತ, ತಾಯಿ ಅಂಬುಜಾ. ವಂಶಪರಂಪರೆಯಂತೆ ಪವಿತ್ರಾ ಅಮೆಚೂರ ರಂಗಭೂಮಿ ಪ್ರವೇಶ ಮಾಡಿದಳು. ಕರ್ನಾಟಕ-ಮಹಾರಾಷ್ಟ್ರದ ಹಳ್ಳಿ-ಹಳ್ಳಿಗೆ

ನಾಟಕ ಅಭಿನಯಿಸಲು ಹೋಗುತ್ತಾಳೆ. ಮೈಂದರ್ಗಿಯ ಓಂಕಾರ ಬುರುಡ ಅವರ ಶ್ರೀ ಸಿದ್ಧರಾಮೇಶ್ವರ ನಾಟ್ಯ ಸಂಘದಲ್ಲಿ ಹಲವು ನಾಟಕಗಳು ಅಭಿನಯಿಸಿದ್ದಾಳೆ. ಅಭಿನಯ, ನೃತ್ಯಗಳಿಂದ ಹೆಸರು ಮಾಡಿದ್ದಾಳೆ.

**೭೬) ಸಿದ್ದಯ್ಯ ಮಠಪತಿ**

ಸಿದ್ದಯ್ಯ ಮಠಪತಿ ಚಡಚಣ ಗ್ರಾಮದಲ್ಲಿ ಜನಿಸಿದರು. ತಂದೆ ಕಲ್ಲಯ್ಯ, ತಾಯಿ ಗುರಕ್ಕ. ಮೈಂದರ್ಗಿಯ ಜಿ.ಪ. ಪ್ರಾಥಮಿಕ ಹೆಣ್ಣು ಮಕ್ಕಳ ಶಾಲೆಯಲ್ಲಿ ಸಹಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಶಿಕ್ಷಕರಾಗಿ ನೌಕರಿ ದೊರೆಯುವ ಪೂರ್ವದಲ್ಲಿ ಹಲವು ವೃತ್ತಿರಂಗಭೂಮಿ ಕಂಪನಿಗಳಲ್ಲಿ ಹಾರ್ಮೋನಿಯಂ ಸೇವೆ ಸಲ್ಲಿಸಿದ್ದಾರೆ. ದಾವಣಗೆರೆಯ ಕೆ.ಬಿ.ಆರ್. ಡ್ರಾಮಾ ಕಂಪನಿಯಲ್ಲಿ ಸಿದ್ದಯ್ಯ ಹಲವು ವರ್ಷ ಸೇವೆ ಸಲ್ಲಿಸಿದ್ದರು. ನಂತರ ಕೆಲವು ವರ್ಷ ಬಸವರಾಜ ಗುಡಗೇರಿ ಅವರ ಸಂಗಮೇಶ್ವರ ನಾಟ್ಯ ಸಂಘದಲ್ಲಿ ಸೇವೆ ಮಾಡಿದ್ದರು.

ಕರ್ನಾಟಕ–ಮಹಾರಾಷ್ಟ್ರದ ಹಳ್ಳಿ–ಹಳ್ಳಿಯ ನಾಟಕ ಕಂಪನಿಯ ನಿರ್ದೇಶಕರಾಗಿ ಅಪಾರವಾದ ಸೇವೆ ಸಲ್ಲಿಸಿದ್ದಾರೆ. ಈಗ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಾ ಶಾಲೆಯ ಮಕ್ಕಳಿಗೆ ನಾಟಕ ಕಲಿಸುವುದರಲ್ಲಿ ನಿರತರಾಗಿದ್ದಾರೆ. ಪ್ರಸಿದ್ಧ ಪ್ರವಚನಕಾರರಾಗಿ ಸೇವೆ ಮಾಡುತ್ತಾರೆ. ಮೈಂದರ್ಗಿ ಶ್ರೀ ಷ.ಬ್ರ. ನೀಲಕಂಠ ಶಿವಾಚಾರ್ಯ ಸಂಸ್ಥಾನ ಹಿರೇಮಠದ ಸಂಗೀತ ಶಾಲೆಯಲ್ಲಿ ಇವರು ಸಂಗೀತ ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

**೭೭) ಸೋಮನಾಥ ಬಿರಾಜದಾರ**

ಅಕ್ಕಲಕೋಟ ತಾಲೂಕಿನ ಗಳೂರಗಿ ಗ್ರಾಮದಲ್ಲಿ ಸೋಮನಾಥ ಬಿರಾಜದಾರ ಜನಿಸಿದರು. ತಂದೆ ಬಸಣ್ಣ, ತಾಯಿ ರುಕ್ಮಿಣಿ. ಗಳೂರಗಿಯ ಶ್ರೀ ರೇವಣಸಿದ್ಧ ನಾಟ್ಯ ಸಂಘ ಹಾಗೂ ಶ್ರಿ ಬೀರಲಿಂಗೇಶ್ವರ ನಾಟ್ಯ ಸಂಘದಲ್ಲಿ ಇವರು ಹಲವು ನಾಟಕಗಳು ಅಭಿನಯಿಸಿದ್ದಾರೆ. ಕಾಲು ಕೆದರಿದ ಹುಲಿ, ಕಣ್ಣೀರಲ್ಲಿ ಕರಗಿದ ಮಾಂಗಲ್ಯ, ಹುಚ್ಚ ಹಚ್ಚಿದ ಕಿಚ್ಚ, ಗರತಿಗೆ ಗತಿ ಯಾರು, ಕವಿ ಮೆಚ್ಚಿದ ಕನ್ಯೆ, ಮದುವೆಯಾದ ಮುತ್ತೈದೆ, ಚಿನ್ನದ ಗೊಂಬೆ ಹಲವು ನಾಟಕಗಳು ಸೋಮನಾಥ ಬಿರಾಜದಾರ ಅಭಿನಯಿಸಿದರು. ಗಳೂರಗಿ ರಂಗಭೂಮಿಗೆ ಸೋಮನಾಥ ಬಿರಾಜದಾರ ಅವರ ಕೊಡುಗೆ ಅಪಾರವಾಗಿದೆ. ಗಳೂರಗಿ ಗ್ರಾಮದಲ್ಲಿ ಪ್ರತಿ ವರ್ಷ ಮಕರ ಸಂಕ್ರಮಣ ಹಾಗೂ ಯುಗಾದಿ ಹಬ್ಬಗಳಂದು ನಾಟಕ ಅಭಿನಯಿಸುತ್ತಾರೆ.

**೬೮) ಸುರೇಶ ಹತ್ತಿರಕಿ**

ಅಕ್ಕಲಕೋಟ ತಾಲೂಕಿನ ಗಳೂರಗಿ ಗ್ರಾಮದಲ್ಲಿ ಸುರೇಶ ಹತ್ತರಕಿ ಜನಿಸಿದರು. ಇವರ ತಂದೆ ಕಲ್ಲಪ್ಪಾ, ತಾಯಿ ಗುರುಬಾಯಿ, ಗಳೂರಗಿ ಗ್ರಾಮದ ಶ್ರೀ ರೇವಣಸಿದ್ದೇಶ್ವರ ನಾಟ್ಯ ಸಂಘದಲ್ಲಿ ಹಲವು ನಾಟಕ ಅಭಿನಯಿಸಿದ್ದಾರೆ. ಹಾಲು ವಿಷವಾಯಿತು, ಕಾಲು ಕೆದರಿದ ಹುಲಿ, ಕಣ್ಣೀರಲ್ಲಿ ಕರಗಿದ ಮಾಂಗಲ್ಯ ಹುಚ್ಚ ಹಚ್ಚಿದ ಕಿಚ್ಚು ಹಲವು ನಾಟಕಗಳು ಇವರು ಅಭಿನಯಿಸಿದ್ದಾರೆ. ಗಳೂರಗಿ ರಂಗಭೂಮಿಗೆ ಸುರೇಶ ಹತ್ತಿರಕಿ ಅವರ ಕೊಡುಗೆ ಅಪಾರವಾಗಿದೆ.

**೬೯) ಗಜಾನನ ಸುತಾರ**

ಅಕ್ಕಲಕೋಟ ತಾಲೂಕಿನ ಗಳೂರಗಿ ಗ್ರಾಮದಲ್ಲಿ ಗಜಾನನ ಸುತಾರ ಜನಿಸಿದರು. ರಂಗಭೂಮಿಯಲ್ಲಿ ಇವರು ಮೊದಲು ಸ್ತ್ರೀಪಾತ್ರ ಮಾಡುವ ಮೂಲಕ ಪ್ರಸಿದ್ಧರಾದರು. ಹಳ್ಳಿಯ ನಾಟಕ ಅಭಿನಯಿಸಲು ಹೆಣ್ಣು ಮಕ್ಕಳ ಕೊರತೆ ಇತ್ತು. ಪುರುಷರೇ ಸ್ತ್ರೀ ಪಾತ್ರ ಅಭಿನಯಿಸುತ್ತಿದ್ದರು. ಗಳೂರಗಿಯ ಶ್ರೀ ರೇವಣಸಿದ್ದೇಶ್ವರ ನಾಟ್ಯ ಸಂಘದಲ್ಲಿ ಇವರು ಸ್ತ್ರೀ ಹಾಗೂ ಪುರುಷ ಪಾತ್ರ ಅಭಿನಯಿಸುವ ಹಿರಿಯ ಕಲಾವಿದರು. ಕಾಲು ಕೆದರಿದ ಹುಲಿ, ಮದುವೆಯಾಗದ ಮುತ್ತೈದೆ, ಕಣ್ಣೀರಲ್ಲಿ ಕರಗಿದ ಮಾಂಗಲ್ಯ, ಗರತಿಯ ಗತಿ ಯಾರು, ಚಿನ್ನದ ಗೊಂಬೆ ಹಲವು ನಾಟಕಗಳಲ್ಲಿ ಇವರು ಅಭಿನಯಿಸಿದ್ದಾರೆ. ಗಳೂರಗಿಯ ರಂಗಭೂಮಿಗೆ ಗಜಾನನ ಸುತಾರ ಅವರ ಕೊಡುಗೆ ಅಪಾರವಾಗಿದೆ. ಇಲ್ಲಿಯ ರಂಗಭೂಮಿ ಪ್ರಬಲವಾಗಿ ಬೆಳೆಯಲು ಅಪಾರವಾದ ಸೇವೆ ಮಾಡಿದ್ದಾರೆ.

**೭೦) ನಂದಕುಮಾರ ಪುಜಾರಿ**

ಅಕ್ಕಲಕೋಟ ತಾಲೂಕಿನ ಮೈಂದರ್ಗಿಯಲ್ಲಿ ನಂದಕುಮಾರ ಪುಜಾರಿ ಜನಿಸಿದರು. ತಂದೆ ಲಕ್ಕಪ್ಪ, ತಾಯಿ ಪ್ರೇಮಾ. ನಂದಕುಮಾರ ರಂಗಭೂಮಿಯ ಯುವಕಲಾವಿದ. ಮೈಂದರ್ಗಿ ಶ್ರೀ ೧೦೦೮ ಜಗದ್ಗುರು ರೇಣುಕಾಚಾರ್ಯ ನಾಟ್ಯ ಸಂಘದಲ್ಲಿ ಹಲವು ವರ್ಷ ಸೇವೆ ಸಲ್ಲಿಸಿದ್ದಾರೆ. ಓಂಕಾರ ಬುರುಡ ಅವರ ಶ್ರೀ ಸಿದ್ಧರಾಮೇಶ್ವರ ನಾಟ್ಯ ಸಂಘದಲ್ಲಿ ನಂದಕುಮಾರ ನೂರಾರು ನಾಟಕಗಳು ಅಭಿನಯಿಸಿದ್ದಾರೆ.

ಮನೆಗೆ ತಕ್ಕ ಮಗ, ಧರ್ಮದ ಕಣ್ಣೀರು, ಸಿಂಧೂರ ಲಕ್ಷ್ಮಣ, ಹಲವು ಸಾಮಾಜಿಕ ನಾಟಕ ಅಭಿನಯಿಸುತ್ತಾರೆ. ವೃತ್ತಿರಂಗಭೂಮಿ ಹಿರಿಯ ಕಲಾವಿದ ಓಂಕಾರ ಬುರುಡ ಅವರ ಗರಡಿಯಲ್ಲಿ ಬೆಳೆದಿದ್ದಾರೆ. ಹಳ್ಳಿ-ಹಳ್ಳಿ ನಾಟಕ ಅಭಿನಯಿಸಲು ನಂದಕುಮಾರ ಹೋಗುತ್ತಾರೆ. ಸೊಲ್ಲಾಪುರ ಕನ್ನಡ ರಂಗಭೂಮಿ ಮಾಲಿಕೆಯಲ್ಲಿ ಇವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

೭೧) ಚಂದ್ರಕಾಮತ ಮೈಂದರ್ಗಿ

ಅಕ್ಕಲಕೋಟ ತಾಲೂಕಿನ ಗಳೂರಗಿಯಲ್ಲಿ ಚಂದ್ರಕಾಂತ ಮೈಂದರ್ಗಿ ಜನಿಸಿದರು. ೧೧ನೇ ತರಗತಿಯವರೆಗೆ ಶಿಕ್ಷಣ ಮುಗಿಸಿ ಹಲವು ನಾಟಕಗಳು ರಚನೆ ಮಾಡಿದರು. ನಾಟಕಗಳ ರಚನೆಯೊಂದಿಗೆ ಹಲವು ನಾಟಕಗಳು ಅಭಿನಯಿಸಿದ್ದಾರೆ.

ಗಳೂರಗಿಯ ಶ್ರೀ ರೇವಣಸಿದ್ದೇಶ್ವರ ನಾಟ್ಯ ಸಂಘದ ಹಲವು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ತಾಯಿಯ ಕರುಳು, ತಂಗಿಯ ಮನೆ, ಮಾಯಾವಿಲಾಸ, ಬಂಜೆ ತೊಟ್ಟಿಲು, ಬಸ್ ಕಂಡಕ್ಟರ್, ಗಂಡ ಬಿಟ್ಟ ತಂಗಿ, ಕೃಷ್ಣಸರ್ಪಣೆ, ಚಿನ್ನದ ಗೊಂಬೆ, ಮಾಂಗಲ್ಯ ಕಾಣದ ಮುತ್ತೈದೆ, ಸ್ತ್ರೀರತ್ನ, ಆದರ್ಶ ಪ್ರೇಮ, ಸೀಮೆ ದಾಟಿದ ಹೆಣ್ಣು, ಜಗಜ್ಯೋತಿ ಬಸವೇಶ್ವರ ನೂರಾರು ನಾಟಕಗಳು ಅಭಿನಯಿಸಿದ್ದಾರೆ. ಗಳೂರಗಿಯಲ್ಲಿ ನೂರಾರು ರಂಗಕಲಾವಿದರು ಚಂದ್ರಕಾಂತ ಮೈಂದರ್ಗಿ ಅವರ ಗರಡಿಯಲ್ಲಿ ಬೆಳದಿದ್ದಾರೆ. ಗಳೂರಗಿಯ ರಂಗಭೂಮಿಗೆ ಚಂದ್ರಕಾಂತ ಮೈಂದರ್ಗಿ ಅವರ ಕೊಡುಗೆ ಅಪಾರವಾಗಿದೆ.

೭೨) ಪ್ರಕಾಶ ಪ್ರಧಾನ

ಅಕ್ಕಲಕೋಟ ತಾಲೂಕಿನ ಮೈಂದರ್ಗಿಯಲ್ಲಿ ಪ್ರಕಾಶ ಪ್ರಧಾನ ಜನಿಸಿದರು. ಇವರು ವಾಗದರಿಯ ಎಸ್.ಎಸ್. ಶೆಳಕೆ ಪ್ರಶಾಲೆಯಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿ ವಿಶ್ರಾಂತಿ ಜೀವನ ಕಳೆಯುತ್ತಿದ್ದಾರೆ. ಮೈಂದರ್ಗಿಯ ಶ್ರೀ ೧೦೦೮ ಜಗದ್ಗುರು ರೇಣುಕಾಚಾರ್ಯ ನಾಟ್ಯ ಸಂಘದಲ್ಲಿ ಹಲವು ನಾಟಕಗಳು ಅಭಿನಯಿಸಿದ್ದಾರೆ. ಶಾಲೆಯ ಮಕ್ಕಳಿಗೆ ಹಲವು ನಾಟಕ ಕಲಿಸಿ, ಪ್ರಶಸ್ತಿ ಪಡೆದುಕೊಂಡು ಬಂದಿದ್ದಾರೆ. ಮೈಂದರ್ಗಿಯ ರಂಗಭೂಮಿಗೆ ಪ್ರಕಾಶ ಪ್ರಧಾನ ಅವರ ಕೊಡುಗೆ ಅಪಾರವಾಗಿದೆ.

೭೩) ಮಹಾಂತೇಶ ಭಂಡೆ

ದಕ್ಷಿಣ ಸೋಲಾಪುರ ಕುಂಭಾರಿಯಲ್ಲಿ ಮಹಾಂತೇಶ ಭಂಡೆ ಜನಿಸಿದರು ಕುಂಭಾರಿಯಲ್ಲಿ ಇವರು ಹಲವು ಸಾಮಾಜಿಕ ನಾಟಕಗಳಲ್ಲಿ ಅಭಿನಯಸಿದ್ದಾರೆ. ಅತ್ತಿಗ್ಗೆ ಹೆತ್ತಮ್ಮ ಕಳ್ಳ ಕಟ್ಟಿದ ತಾಳಿ, ವೀರ ಸಿಂಧೂರ ಲಕ್ಷ್ಮಣ, ಶೂರ ಹುಲಿ, ಕುಂಭಾರಿ ಡೋಡಪ್ಪಾ, ಸಾವಿರ ಹಳ್ಳಿಯ ಸರದಾರ ಹಲವು ನಾಟಕಗಳು ಕುಂಭಾರಿ ಹಾಗೂ ಸೋಲಾಪುರದಲ್ಲಿ ಕಥಾನಾಯಕ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಕುಂಭಾರಿಯ ರಂಗಭೂಮಿಗೆ ಮಹಾಂತೇಶ ಭಂಡೆ ಅಪಾರವಾದ ಸೇವೆ ಸಲ್ಲಿಸಿದ್ದಾರೆ. ಕುಂಭಾರಿಯ ಶ್ರೀ ವೀರೇಶ ಕಾರಂಜೆ ಅವರ ಶ್ರೀ ವೀರಭದ್ರೇಶ್ವರ ನಾಟ್ಯ ಸಂಘದಲ್ಲಿಯೂ ಅಭಿನಯಿಸಿದ್ದಾರೆ.

## ೭೪) ಈರೇಶ ಕಾರಂಜೆ

ದಕ್ಷಿಣ ಸೋಲಾಪುರ ತಾಲೂಕಿನ ಕುಂಭಾರಿಯಲ್ಲಿ ಈರೇಶ ಕಾರಂಜೆ ಜನಿಸಿದರು. ಹಲವು ನಾಟಕಗಳಲ್ಲಿ ಅಭಿನಯಿಸುತ್ತಾ ಶ್ರೀ ವೀರಭದ್ರೇಶ್ವರ ನಾಟ್ಯ ಸಂಘ ಸ್ಥಾಪಿಸಿದರು. ಗೌರಿ ಗೆದ್ದಳು, ಕುಡುಕನಾದರೂ ಕೊಲೆಗಡುಕ ನಾನಲ್ಲ, ಮಾತು ಕೊಟ್ಟ ಮುತ್ತೈದೆ, ಮಗಾ ಹೋದರೂ ಮಾಂಗಲ್ಯ ಬೇಕು, ತಾಯಿಯ ಕರುಳು, ಶೂರ ಹುಲಿ, ಕುಂಭಾರಿ ಡೋಡಪ್ಪಾ, ಸಿದ್ರಾಮ ಗೌಡ, ವೀರ ಸಿಂಧೂರ ಲಕ್ಷ್ಮಣ, ಸಾವಿರ ಹಳ್ಳಿಯ ಸರದಾರ, ಅತ್ತಿಗೆ ಹೆತ್ತಮ್ಮ ಮುಂತಾಗಿ ಹಲವು ನಾಟಕಗಳಲ್ಲಿ ಇವರು ಅಭಿನಯಿಸಿದ್ದಾರೆ. ಈ ಕಂಪನಿಯ ಮಾಲೀಕರಾಗಿ, ನಟರಾಗಿ ಅಪಾರವಾದ ಸೇವೆ ಸಲ್ಲಿಸಿದ್ದಾರೆ. ಕುಂಭಾರಿ ಹಾಗೂ ಸೊಲ್ಲಾಪುರ ನಗರಗಳಲ್ಲಿ ಹಲವು ನಾಟಕಗಳು ಅಭಿನಯಿಸಿದ್ದಾರೆ.

## ೭೫) ದತ್ತಾತ್ರಯ ಸುತಾರ

ದಕ್ಷಿಣ ಸೊಲ್ಲಾಪುರ ತಾಲೂಕಿನ ಕುಂಭಾರಿಯಲ್ಲಿ ದತ್ತಾತ್ರಯ ಸುತಾರ ಜನಿಸಿದರು. ಈರೇಶ ಕಾರಂಜೆ ಅವರ ಶ್ರೀ ವೀರಭದ್ರೇಶ್ವರ ನಾಟ್ಯ ಸಂಘದಲ್ಲಿ ದತ್ತಾತ್ರಯ ಹಲವಾರು ನಾಟಕಗಳು ಅಭಿನಯಿಸಿದ್ದಾರೆ. ಕರುಣೆಯಿಲ್ಲದ ಕೊಲೆಗಾರ, ತಾಯಿಯ ಕರುಳು, ಅತ್ತಿಗೆ ಹೆತ್ತಮ್ಮ, ಕಳ್ಳ ಕಟ್ಟಿದ ತಾಳಿ, ಶೂರ ಹುಲಿ, ಕುಂಭಾರಿಯ ಡೋಡಪ್ಪಾ, ಸಿಂಧೂರ ಲಕ್ಷ್ಮಣ, ಸಾವಿರ ಹಳ್ಳಿಯ ಸರದಾರ ಮುಂತಾದ ಹಲವು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಕುಂಭಾರಿಯ ರಂಗಭೂಮಿಗೆ ಇವರ ಕೊಡುಗೆ ಅಪಾರವಾಗಿದೆ.

## ೭೬) ಗೇನಸಿದ್ದ ರವಾಡೇಖರ

ದಕ್ಷಿಣ ಸೊಲ್ಲಾಪುರ ತಾಲೂಕಿನ ಕುಂಭಾರಿಯಲ್ಲಿ ಗೇನಸಿದ್ದ ರವಾಡೇಖರ ಜನಿಸಿದರು. ಈರೇಶ ಕಾರಂಜೆ ಅವರ ಶ್ರೀ ವೀರಭದ್ರೇಶ್ವರ ನಾಟ್ಯ ಸಂಘದಲ್ಲಿ ಹಲವು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಅತ್ತಿಗೆ ಹೆತ್ತಮ್ಮ, ಕರುಳು ಇಲ್ಲದ ಕೊಲೆಗಡುಕ, ಕಳ್ಳ ಕಟ್ಟಿದ ತಾಳಿ, ಶೂರ ಹುಲಿ, ಕುಂಭಾರಿಯ ಡೋಡಪ್ಪಾ, ವೀರ ಸಿಂಧೂರ ಲಕ್ಷ್ಮಣ, ಸಾವಿರ ಹಳ್ಳಿಯ ಸರದಾರ, ಅಣ್ಣ ತಂಗಿ, ತಾಯಿಯ ಕರುಳು, ಮಗ ಹೋದರೂ ಮಾಂಗಲ್ಯ ಬೇಕು ಮುಂತಾಗಿ ಹಲವು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಕುಂಭಾರಿಯ ರಂಗಭೂಮಿಗೆ ಇವರ ಕೊಡುಗೆ ಅಪಾರವಾಗಿದೆ.

## ೭೭) ರಾಜಕುಮಾರ ಕಾಂಬಳೆ

ದಕ್ಷಿಣ ಸೊಲ್ಲಾಪುರ ತಾಲ್ಲೂಕಿನ ಕುಂಭಾರಿಯಲ್ಲಿ ಗೇನಸಿದ್ದ ರವಾಡೇಖರ

ಅವರ ಪ್ರಭಾವದಿಂದ ರಾಜಕುಮಾರ ಕಾಂಬಳೆ ರಂಗ ಪ್ರವೇಶ ಮಾಡಿದರು. ಈರೇಶ ಕಾರಂಜೆ ಅವರ ಶ್ರೀ ವೀರಭದ್ರೇಶ್ವರ ನಾಟ್ಯ ಸಂಘದಲ್ಲಿ ಹಲವು ನಾಟಕಗಳು ಅಭಿನಯಿಸಿದ್ದಾರೆ. ಕಳ್ಳ ಕಟ್ಟಿದ ತಾಳಿ, ಸಾವಿರ ಹಳ್ಳಿಯ ಸರದಾರ, ಶೂರ ಹುಲಿ, ಕುಂಭಾರಿಯ ಡೋಡಪ್ಪ ಮುಂತಾಗಿ ಹಲವಾರು ನಾಟಕಗಳಲ್ಲಿ ಅಭಿನಯಿಸಿದ್ದಾರೆ.

೭೮) ಎಂ.ಬಿ. ಸುತಾರ

ಸೊಲ್ಲಾಪುರ ಜಿಲ್ಲೆಯ ಅಕ್ಕಲಕೋಟ ತಾಲೂಕಿನ ದುಧನಿಯಲ್ಲಿ ಪ್ರೌಢಶಾಲಾ ಶಿಕ್ಷಕರಾಗಿ ಸೇವೆ ಸಲ್ಲಿಸಿ ಈಗ ನಿವೃತ್ತ ಜೀವನ ನಡೆಸುತ್ತಿದ್ದಾರೆ. ಇವರು ಗಡಿಭಾಗದಲ್ಲಿ ಕನ್ನಡದ ಬೆಳವಣಿಗೆಗೆ ಶ್ರಮಿಸುತ್ತಾ ಬಂದಿದ್ದಾರೆ. ನಾಟಕ ರಚನೆ ಇವರ ಮುಖ್ಯ ಅಭಿವ್ಯಕ್ತ ಮಾಧ್ಯಮ. ಮಹಾಶಿವಯೋಗಿ ಶ್ರೀ ಶಿವಚವೇಶ್ವರ ವಿಜಯ. ಶ್ರೀ ಗುರುಶಾಂತಲಿಂಗೇಶ್ವರ ಮಹಾತ್ಮ ನಾಟಕಗಳನ್ನು ರಚನೆ ಮಾಡಿದ್ದಾರೆ. ಮೈಂದರ್ಗಿಯ ಹಲವು ಸಂಘದ ನಿರ್ದೇಶಕರಾಗಿಯೂ ಕೆಲಸ ಮಾಡಿದ್ದಾರೆ. ಇವರ ಹಲವು ಕೃತಿಗಳು ಪ್ರಕಟವಾಗಿವೆ. ಕವಿ, ಸಾಹಿತಿ, ನಾಟಕಕಾರ ಎಂ.ಬಿ. ಸುತಾರ ಅವರು ರಂಗಭೂಮಿಗೆ ಅಪಾರವಾದ ಸೇವೆ ಸಲ್ಲಿಸಿದ್ದಾರೆ.

೭೯) ಬಿ.ಬಿ. ಜೇವೂರ

ಸೊಲ್ಲಾಪುರ ಜಿಲ್ಲೆಯ ಅಕ್ಕಲಕೋಟ ತಾಲೂಕಿನ ತೊಳಣೂರ ಗ್ರಾಮದಲ್ಲಿ ಬಿ.ಬಿ. ಜೇವೂರ ೧೯೪೧ರಲ್ಲಿ ಜನಿಸಿದರು. ಕೈಮಗ್ಗದ ವೃತ್ತಿಯಿಂದ ಉಪಜೀವನ ಸಾಗಿಸುತ್ತಾ ನಾಟಕ ಬರೆಯುವುದು ಇವರ ಪ್ರಮುಖ ಹವ್ಯಾಸವಾಗಿದೆ. ಬಿ.ಬಿ. ಜೇವೂರ ಅವರು ಇದುವರೆಗೆ ೧೧ ಮೂರಂಕಿನ ನಾಟಕಗಳು, ೨ ಏಕಾಂಕಿಕಾ, ೩ ಕಾದಂಬರಿಗಳನ್ನಲ್ಲದೆ, ಹಲವಾರು ಕತೆ, ಕಿರುಗತೆ, ಏಕಾಂಕ, ಕಿರುನಾಟಕ, ರೂಪಕ, ಹಾಸ್ಯ, ವಿಡಂಬನೆ, ಕವಿತೆಗಳು ರಚನೆ ಮಾಡಿದ್ದಾರೆ. ಕನ್ನಡದ ಎಲ್ಲ ಸಾಹಿತ್ಯದ ಪ್ರಕಾರಗಳಲ್ಲಿ ಕೃಷಿ ಮಾಡಿದ್ದಾರೆ.

ನಾಟಕ ರಚನೆಯೊಂದಿಗೆ ನಟ, ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದ್ದಾರೆ. ಹಳ್ಳಿಯ ನಾಟಕಗಳಲ್ಲಿ ಪ್ರಸಂಗ ಬಂದರೆ ರಂಗಸಜ್ಜಿಕೆ ನಿರ್ಮಾಣ, ಮೇಕಪ್, ನಾಟಕದ ವಿಭಿನ್ನ ಪ್ರಕಾರ ಸೇವೆ ಅವರು ಸಲ್ಲಿಸಿದ್ದಾರೆ. ಕರ್ನಾಟಕ ನಾಟಕ ಅಕಾಡೆಮಿಯ ಗೌರವ ಪುರಸ್ಕಾರ ಬಿ.ಬಿ. ಜೇವೂರ ಅವರಿಗೆ ಲಭಿಸಿದೆ. ಸೊಲ್ಲಾಪುರದಲ್ಲಿ ವಿಶ್ರಾಂತಿಯ ಜೀವನ ಕಳೆಯುತ್ತಿದ್ದಾರೆ.

೮೦) ವಿಜಯಕುಮಾರ ಧರಣಿ

ಸೊಲ್ಲಾಪುರ ಜಿಲ್ಲೆಯ ಅಕ್ಕಲಕೋಟ ತಾಲ್ಲೂಕಿನ ಡೊಡ್ಯಾಳ ಗ್ರಾಮದಲ್ಲಿ

ವಿಜಯಕುಮಾರ ಧರಣಿ ಜನಿಸಿದರು. ಅವರ ತಂದೆ ಶರಣಪ್ಪ, ತಾಯಿ ಬಸವ್ವ ಸೋಲಾಪುರದಲ್ಲಿ ೨೬ ವರ್ಷಗಳಿಂದ ಉಚಿತವಾಗಿ ಕನ್ನಡ ಭಾಷೆ ಕಲಿಕೆಯ ತರಗತಿ ನಡೆಸುವ ಮೂಲಕ ಕನ್ನಡಾಂಬೆಯ ಸೇವೆ ಸಲ್ಲಿಸುತ್ತಿದ್ದಾರೆ. ಕವಿ, ನಾಟಕಕಾರರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಬಡವನ ಭವಿಷ್ಯ, ಕವಿ ಕೊಟ್ಟ ಹೊಸ ಬಾಳು, ಎರಡು ನಾಟಕಗಳನ್ನು ರಚನೆ ಮಾಡಿದ್ದಾರೆ. ಸೊಲ್ಲಾಪುರದ ವಿವಿಧ ರಂಗಭೂಮಿಗಳ ವೇದಿಕೆಗಳಲ್ಲಿ ಇವರ ನಾಟಕಗಳು ಪ್ರದರ್ಶಿಸಲಾಗಿದೆ. ಸೊಲ್ಲಾಪುರ ಕನ್ನಡ ರಂಗಭೂಮಿಗೆ ಇವರ ಕೊಡುಗೆ ಅಪಾರವಾಗಿದೆ.

### ೮೧) ಬಸವರಾಜ ಚೌಗುಲೆ

ದಕ್ಷಿಣ ಸೊಲ್ಲಾಪುರ ತಾಲೂಕಿನ ಕುಂಭಾರಿ ಗ್ರಾಮದಲ್ಲಿ ಬಸವರಾಜ ಚೌಗುಲೆ ಜನಿಸಿದರು. ತಂದೆ ಸಿದ್ದಪ್ಪಾ, ತಾಯಿ ಚಂಗಳೇವ್ವ, ನಟರಾಗಿ, ನಿರ್ದೇಶಕರಾಗಿ ಹಾಗೂ ನಾಟಕಕಾರರಾಗಿ ಸೇವೆ ಸಲ್ಲಿಸಿದ್ದಾರೆ. ಕುಂಭಾರಿಯ ಶೂರ ಹುಲಿ, ಕುಂಭಾರಿಯ ಡೋಡಪ್ಪ ನಾಟಕ ರಚನೆ ಮಾಡಿದ್ದಾರೆ. ಇವರ ನಾಟಕ ಕರ್ನಾಟಕ–ಮಹಾರಾಷ್ಟ್ರದ ಹಲವು ಗ್ರಾಮಗಳಲ್ಲಿ ಅಭಿನಯಿಸಲಾಗಿದೆ. ರಂಗಭೂಮಿಗೆ ಬಸವರಾಜ ಚೌಗುಲೆ ಅವರ ಕೊಡುಗೆ ಆಪಾರವಾಗಿದೆ.

### ೮೨) ರವೀಂದ್ರ ಕಿಣಗಿ

ದಕ್ಷಿಣ ಸೊಲ್ಲಾಪುರ ತಾಲೂಕಿನ ವಳಸಂಗ ಗ್ರಾಮದಲ್ಲಿ ರವೀಂದ್ರ ಕಿಣಗಿ ಜನಿಸಿದರು. ತಂದೆ ಶಂಕರ, ತಾಯಿ ದಾಕ್ಷಾಯಿಣಿ. ನಟರಾಗಿ, ನಿರ್ದೇಶಕರಾಗಿ ಹಾಗೂ ನಾಟಕ ರಚನಾಕಾರರಾಗಿ ಅಪಾರವಾದ ಸೇವೆ ಸಲ್ಲಿಸಿದ್ದಾರೆ. ಕವಿ ಮುಟ್ಟದ ಕನ್ಯೆ, ಅತ್ತಿಗೆಗೆ ಬಂದ ಅಗ್ನಿ ಪರೀಕ್ಷೆ, ಸಮಾಜಕ್ಕೆ ಶಿಕ್ಷೆ, ಗೆಲುವು ಸಾಧಿಸಿದ ಗರತಿ ಹಲವು ನಾಟಕಗಳು ಶ್ರೀ ಬಸವೇಶ್ವರ ನಾಟ್ಯ ಸಂಘದಲ್ಲಿ ಅಭಿನಯಿಸಿದ್ದಾರೆ. ನ್ಯಾಯದಲ್ಲಿ ಅನ್ಯಾಯ, ಕಲಿಯುಗದ ವಿಶ್ವಾಮಿತ್ರ, ಸೋದರರಿಗೆ ಸವಾಲು, ಎಂಬ ಮೂರು ನಾಟಕಗಳು ರಚನೆ ಮಾಡಿದ್ದಾರೆ. ರಂಗಭೂಮಿಗೆ ರವೀಂದ್ರ ಕಿಣಗಿ ಅವರು ಅಪಾರವಾದ ಸೇವೆ ಮಾಡಿದ್ದಾರೆ.

### ೮೩) ಶ್ರೀ ಮಲ್ಲಿಕಾರ್ಜುನ ಮಡ್ಡಿ

ಮೈಂದರ್ಗಿ ಶ್ರೀ ೧೧೦೮ ಜಗದ್ಗುರು ರೇಣುಕಾಚಾರ್ಯ ನಾಟ್ಯ ಸಂಘದ ಮಾಲೀಕರಾಗಿ ಹಲವು ವರ್ಷದಿಂದ ಸೇವೆ ಸಲ್ಲಿಸುತ್ತಿದ್ದಾರೆ. ಕರ್ನಾಟಕ ನಾಟಕ ಅಕಾಡೆಮಿ ಹಾಗೂ ವಿವಿಧ ಸಂಘ ಸಂಸ್ಥೆಗಳಿಂದ ಹಲವಾರು ಪ್ರಶಸ್ತಿಗಳು ಇವರಿಗೆ ಲಭಿಸಿವೆ. ತಮ್ಮ ಸಂಪೂರ್ಣವಾದ ಜೀವನವನ್ನು ವೃತ್ತಿರಂಗಭೂಮಿ ಸಲುವಾಗಿ

ಕಳೆದಿದ್ದಾರೆ. ಇವರು ಸರಳ ಜೀವಿಯಾಗಿದ್ದು ಯಾವುದೇ ತರದ ಕಷ್ಟ ಇವರಿಗೆ ಇಲ್ಲ. ವೃತ್ತಿ ರಂಗಭೂಮಿಯ ಹಲವಾರು ಕಲಾವಿದರಿಗೆ ಆಶ್ರಯದಾತರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

❑

## ಪತ್ರಿಕೆಗಳಲ್ಲಿ ಪ್ರಕಟವಾಗಿರುವ ರಂಗಭೂಮಿಯ ಬಗೆಗಿನ ಕೆಲವು ಲೇಖನಗಳು

೧. ಮೈಂದರ್ಗಿ ರಂಗಭೂಮಿ ಇತಿಹಾಸದ ಒಂದು ಹಿನ್ನೋಟ–ಬಸವರಾಜ ಮಸೂತಿ, ಸಂಯುಕ್ತ ಕರ್ನಾಟಕ

೨. ಐವತ್ತು ತುಂಬಿದ ಗಡಿನಾಡಿನ ಮೈಂದರ್ಗಿಯ ನಾಟಕ ಸಂಸ್ಥೆ ಬಸವರಾಜ ಮಸೂತಿ, ಸಂಯುಕ್ತ ಕರ್ನಾಟಕ

೩. ಮೈಂದರ್ಗಿ ಕಂಪನಿಗಳು ಮತ್ತೇ ವೈಭವದಿಂದಾರಂಭ–ಬಸವರಾಜ ಮಸೂತಿ, ಕರ್ನಾಟಕ ಸಂಧ್ಯಾಕಾಲ

೪. ಹುಮನಾಬಾದದಲ್ಲಿ ಮೈಂದರ್ಗಿಯ ಶ್ರೀ ೧೦೦೮ ಜಗದ್ಗುರು ರೇಣುಕಾಚಾರ್ಯ ನಾಟ್ಯ ಸಂಘ.

೫. ವೃತ್ತಿರಂಗ ನಾಟಕ ಸಂಘಗಳು ಬೆಳೆಸಿದ ಶ್ರೇಯಸ್ಸು–ಸಿದ್ಧರಾಜ ಅಪ್ಪಾಜಿಯವರಿಗೆ

೬. ಮೈಂದರ್ಗಿ ಶ್ರೀ ಸಿದ್ಧರಾಮೇಶ್ವರ ನಾಟ್ಯ ಸಂಘ–ಬಸವರಾಜ ಮಸೂತಿ, ಸೋಲಾಪುರ ಕನ್ನಡಿಗ

೭. ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷರಾದ ಎಲ್.ಬಿ. ಶೇಖಮಾಸ್ತರ ಅವರೊಂದಿಗೆ ಸಂವಾದ.

೮. ಹಿರಿಯ ರಂಗಕಲಾವಿದ ಶಿವಾಚಲಪ್ಪ ಮುಂಡೂಡಗಿ–ಬಸವರಾಜ ಮಸೂತಿ, ಸೊಲ್ಲಾಪುರ ಕನ್ನಡಿಗ

೯. ವೃತ್ತಿರಂಗಭೂಮಿಯ ಸ್ಥಿತಿ–ಗತಿ ವಿಚಾರ ಸಂಕಿರಣ ಬಸವರಾಜ ಮಸೂತಿ, ಪ್ರಜಾವಾಣಿ

೧೦. ಕನ್ನಡ ವೃತ್ತಿರಂಗಭೂಮಿಗೆ ಕೊಡುಗೆ–ಬಸವರಾಜ ಮಸೂತಿ, ಕರ್ನಾಟಕ ಮಲ್ಲ.

೧೧. ಸೊಲ್ಲಾಪುರ ಜಿಲ್ಲೆಯ ಕನ್ನಡ ರಂಗಭೂಮಿ–ಬಸವರಾಜ ಮಸೂತಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೨. ಸೊಲ್ಲಾಪುರ ಜಿಲ್ಲೆಯ ಕನ್ನಡ ರಂಗಭೂಮಿ: ೧೫ ಮಾಲಿಕೆಗಳಾಗಿವೆ. ಬಸವರಾಜ ಮಸೂತಿ, ವಿಜಯಕರ್ನಾಟಕ, ಸಂಚಾರ

೧೩. ಬಿ.ಎಂ.ಶ್ರೀ, ಶ್ರೀರಂಗ, ಜೋಳದರಾಶಿ ದೊಡ್ಡನಗೌಡರು, ಕಾರಂತರು ಸೊಲ್ಲಾಪುರದಲ್ಲಿ ನಾಟಕ ಅಭಿನಯಿಸಿದರು. ದ.ರಾ. ಬೇಂದ್ರೆ, ಸಿರಿ ಸೊನ್ನಲಿಗೆ ಸಂಚಿಕೆ.

೧೪. ಹಿರಿಯ ರಂಗಭೂಮಿ ಕಲಾವಿದ ಗುರಲಿಂಗಪ್ಪಾ ಚಡಚಣ–ಅಶೋಕ ಉಮರಾಣಿಕರ, ಸಂಯುಕ್ತ ಕರ್ನಾಟಕ.

೧೫. ನಾಟಕ ರಚನಾಕಾರ ಬಿ.ಬಿ. ಜೇವೂರ–ಅಶೋಕ ಉಮರಾಣಿಕರ, ಸಂಯುಕ್ತ ಕರ್ನಾಟಕ

೧೬. ಹವ್ಯಾಸ ರಂಗಭೂಮಿ ಮಾಲೀಕರು ಶಂಕರ ಮೇತ್ರೆ–ಪ್ರೇಮಾ ಬದಾಮಿ, ವಿಜಯ ಕರ್ನಾಟಕ

೧೭. ಹಿರಿಯ ರಂಗಭೂಮಿ ಕಲಾವಿದ ವಾಗೀಶ ಪಾಟೀಲ–ಪ್ರೇಮಾ ಬದಾಮಿ. ವಿಜಯ ಕರ್ನಾಟಕ

೧೮. ಹಸಿರು ಬಣ್ಣದ ಧ್ವಜ ಹಾರಿಸಿದ ನಾಗಪ್ಪಾ ಬೂರಮಣಿ–ಎ.ಎಲ್. ನಾಗೂರ

೧೯. ಬುಟ್ಟಿಮಾರಿ ಕನ್ನಡದ ಕಟ್ಟೆ ಕಟ್ಟುತ್ತಿರುವ ರಂಗ ನಾಯಕ ಓಂಕಾರ ಶಿವಲಿಂಗಪ್ಪ– ಕರ್ನಾಟಕ ಸಂಧ್ಯಾಕಾಲ

೨೦. ವೃತ್ತಿರಂಗಭೂಮಿ, ಹವ್ಯಾಸಿ ರಂಗಭೂಮಿ, ಗ್ರಾಮೀಣ ರಂಗಭೂಮಿಯ ಪ್ರಸಿದ್ಧ ನೃತ್ಯಗಾರ್ತಿ ಅಕ್ಕಲಕೋಟದ ರೇಣುಕಾ–ಗವೀಶ ಹಿರೇಮಠ, ಅಪ್ರಕಟಿತ ಲೇಖನ

೨೧. ಕರ್ನಾಟಕ ವೃತ್ತಿರಂಗಭೂಮಿಗೆ ಮೈಂದರ್ಗಿ ಕಂಪನಿಗಳ ಕೊಡುಗೆ–ವೈಜನಾಥ ಬಿರಾದಾರ, ಸೋಲಾಪುರ ಕನ್ನಡಿಗ.

## ನಾಟಕ ಅಕಾಡೆಮಿ ಗೌರವ ಪ್ರಶಸ್ತಿ

೧. ಶ್ರೀ ಬಿ.ಬಿ. ಜೇವೂರ ೧೯೯೩
ಸುವರ್ಣ ಸಂಭ್ರಮ ಪ್ರಶಸ್ತಿ

೨. ಶ್ರೀ ಎಂ.ಎಸ್. ಮಡ್ಡೆ ೨೦೧೧
ಗಡಿನಾಡ ವೃತ್ತಿರಂಗ ಕಂಪನಿಯ ಮಾಲೀಕರು, ಮೈಂದರ್ಗಿ

೩. ಶ್ರೀ ಮಲ್ಲಿಕಾರ್ಜುನ ಮಡ್ಡೆ ೨೦೧೬
ಮೈಂದರ್ಗಿ

## ನಾಟಕಗಳ ಲೇಖಕರು / ನಾಟಕಕಾರರು

೧. ದ.ರಾ. ಬೇಂದ್ರೆ
ಅರಳು ಮರಳು
ಧನ್ಯಕುಮಾರ ಶಿಂಧೆ
(ಜ್ಞಾನಪೀಠ ಪ್ರಶಸ್ತಿ ವಿಜೇತರಾದ ದ.ರಾ. ಬೇಂದ್ರ ಅವರು ೧೫ ವರ್ಷ ಸೋಲಾಪುರದಲ್ಲಿ ವಾಸವಾಗಿದ್ದರು. ಆ ಸಂದರ್ಭದಲ್ಲಿ ಬರೆದ ನಾಟಕಗಳು)

೨. ಬಿ.ಬಿ. ಜೇವೂರ
ಸ್ನೇಹಿತನ ಸತಿ, ಕೈಗೊಂಬೆ, ಅವಳ ತಪಸ್ಸು, ತೊಟ್ಟಿಲು ತೂಗಿತು, ಸಿ.ಐ.ಡಿ. ರಾಧಾ, ಕಾಣದ ಕೈ, ರಾಜಾ ಈಡಿಪಸ್, ಕರ್ತವ್ಯಕ್ಕೆ ಕರುಣೆ ಇಲ್ಲ, ಸಂಶಯದ ಪಿಶಾಚಿ, ಖಳನಾಯಕ ನೀನಲ್ಲ, ನಮ್ಮ ದುಃಖಕ್ಕೆ ನಾವೇ ಕಾರಣ.

೩. ಎಂ.ಬಿ. ಸುರಾರ
ಶ್ರೀ ಶಿವಾಚಲೇಶ್ವರ ಮಹಾತ್ಮೆ ಶ್ರೀ ಗುರುಶಾಂತಲಿಂಗೇಶ್ವರ ಮಹಾತ್ಮೆ

೪. ವಿಜಯಕುಮಾರ ಧರಣಿ
ಬಡತನದ ಭವಿಷ್ಯ, ಕವಿ ಕೊಟ್ಟ ಹೊಸ ಬಾಳು

೫. ರವೀಂದ್ರ ಕಿಣಗಿ
ನ್ಯಾಯದಲ್ಲಿ ಅನ್ಯಾಯ, ಕಲಿಯುಗದ ವಿಶ್ವಾಮಿತ್ರ, ಸೋದರರಿಗೆ ಸವಾಲು

೬ ಬಸವರಾಜ ಚಾಗಲೆ
ಶೂರ ಹುಲಿ, ಕುಂಭಾರಿಯ ಡೋಡ್ಡಪ್ಪ

೭ ಚಂದ್ರಕಾಂತ ಮ್ಯೆಂದರ್ಗಿ
ಗಂಡ ಬಿಟ್ಟ ತಂಗಿ, ಕೃಷ್ಣ ಸರ್ಪಣಿ, ಸೀಮೆ ದಾಟಿದ ಹೆಣ್ಣು, ಮಾಂಗಲ್ಯ ಕಾಣದ ಮುತ್ತೈದೆ

೮. ಸುಧಾಕರ ದಿಗಂಬರ ಸುತಾರ
ಧರ್ಮಣ್ಣ, ಕರ್ಮದ ಪಟ್ಟು, ತಾಳಿಗೆ ಬಂತು ಬಿರುಗಾಳಿ

೯. ಈರಣ್ಣ ನಿಂಬಾಳ
ಶ್ರೀ ಗುಡ್ಡಾಪುರ ದಾನಮ್ಮದೇವಿ

೧೦. ಮಲ್ಲಿಕಾರ್ಜುನ ಸೋಲಾಪುರ
ಶ್ರೀಮಂತನ ಸೊಕ್ಕು

## ಸೊಲ್ಲಾಪುರ ಜಿಲ್ಲೆಯ ರಂಗಮಂದಿರಗಳು

೧. ಹುತಾತ್ಮಾ ಸ್ಮೃತಿರಂಗಮಂದಿರ, ಸೋಲಾಪುರ

೨. ಪ್ರಿಯದರ್ಶಿನಿ ರಂಗಮಂದಿರ, ಅಕ್ಕಲಕೋಟ

೩. ಬಯಲು ರಂಗಮಂದಿರ, ಮಂಗಹೊಳ ಪ್ರಶಾಲೆ, ಅಕ್ಕಲಕೋಟ

೪. ಬಯಲು ರಂಗಮಂದಿರ ಪ್ರಾಥಮಿಕ ಶಾಲೆ, ಮೈಂದರ್ಗಿ

೫. ಸೋಲಾಪುರ ಜಿಲ್ಲೆಯ ಪ್ರತಿಯೊಂದು ಹಳ್ಳಿಯಲ್ಲಿ ನಾಟಕ ಅಭಿನಯಿಸಲು ಬಯಲು ಸ್ಥಳಗಳು ಇವೆ.

## ರಂಗಸಜ್ಜಿಕೆ, ವಸ್ತ್ರಾಲಂಕಾರ ಮತ್ತು ಪ್ರಸಾಧನ ತಜ್ಞರು

೧. ಓಂಕಾರ ಬುರುಡ

೨. ಶಿವಕುಮಾರ ಗೊಬ್ಬುರ

೩. ಲಕ್ಷ್ಮಣ ಬುರುಡ

೪. ಸಿದ್ಧರಾಮ ಗೊಬ್ಬುರ

೫. ಶರಣ ಬುರುಡ

೬ ರವಿ ಪಂಡಿತ

೭ ಬಸವರಾಜ ನಿಂಬಾಳ

೮. ಶಿವಾಚಲಪ್ಪ ಮುಂಡೂಡಗಿ

೯. ಕೇಶವ ಮಸೂತಿ

೧೦. ಸಿನ್ನಪ್ಪಾ ಬರಮಾ

೧೧. ಈರಪ್ಪಾ ಸಿಂಗದಿ

೧೨. ಚಂದ್ರಯ್ಯ ಸ್ವಾಮಿ

೧೩. ಮಕಬುಲ ಜಮಾದಾರ

೧೪. ಶಿವಾಚಲಪ್ಪ ಕಾಳಿ

೧೫. ಶಿವಲಿಂಗಪ್ಪಾ ಕಾಳಿ

೧೬. ಸಚಿವ ಕಾಳಿ


೧೭. ಮಹಾಲಿಂಗ ಗೊಬ್ಬುರಿ


೧೮. ಬಸವರಾಜ ಬುಸನೂರ

೧೯. ಮಲ್ಲಿನಾಥ ಕೊರಚಗಾಂವ


# ಕಲಾವಿದರ ಹಾಗೂ ಕಾರ್ಯಕ್ರಮದ ಚಿತ್ರಗಳು

## ಸೊಲ್ಲಾಪುರ ಜಿಲ್ಲೆಯ ರಂಗ ಕಲಾವಿದರು



ಬಿ.ಬಿ. ಜೇವೂರ



ಮಲ್ಲಿಕಾರ್ಜುನ ಮಡ್ಡೆ


ಈರಣ್ಣ ನಾಸಿಗರ


ಶಿವರಾಮ ಅಂಕಲಗಿ


ಅಶೋಕ ಪಾಟೀಲ


ಮಹಾಂತೇಶ ಅಂಕಲಗಿ


ನೀಲಕಂಠ ವಿಭೂತೆ


ಓಂಕಾರ ಬುರುಡೆ


ಸಿದ್ದಮ್ಮ ಕೋಲಾಟಿ


ಯಮುನಾ ಕೋಲಾಟಿ



ಮಂಜುಳಾ ಕೋಲಾಟಿ


ಪವಿತ್ರಾ ಕೋಲಾಟಿ


## ಸೊಲ್ಲಾಪುರ ಜಿಲ್ಲೆಯ ರಂಗ ಕಲಾವಿದರು


ರಂಜನಾ ಕೋಲಾಟಿ



ಅರುಣಾ ಕೋಲಾಟಿ



ಬಸವರಾಜ ಮೈಂದರ್ಗಿಕರ



ಸಿದ್ಧರಾಮ ಗೊಬ್ಬುರ


ರೇವಣಸಿದ್ಧ ಹುಲಮನಿ



ಶಿವಚಲಪ್ಪ ಸಂದೊಡೆ


ಸೀನಪ್ಪ ಭರ್ಮ


ವೀರೇಶ್ ಕಾರಂಜಿ


ಬಸವರಾಜ್ ಅಲ್ಲದ್


ವಿಜಯಕುಮಾರ ಧರಣೆ



ರವೀಂದ್ರ ಕಿಣಗಿ


ಮಲ್ಲಿಕಾರ್ಜುನ ಪಾಟೀಲ


## ಸೊಲ್ಲಾಪುರ ಜಿಲ್ಲೆಯ ರಂಗ ಕಲಾವಿದರು



ರಾಜಶೇಖರ ಸ್ವಾಮಿ



ಚಂದ್ರಕಾಂತ ಅಂಬಲಗಿ



ಸೂರ್ಯಕಾಂತ ರೇವತಗಾಂವ


ಚೆನ್ನಯ್ಯ ಹಿರೇಮಠ



ಬಸವರಾಜ ಮಸೂತಿ



ಶ್ರೀಮಂತ ದುಧನಿ



ಮಲ್ಲಕಣ್ಣ ಕುಂಬಾರ


ಚಂದ್ರಕಾಂತ ಬಬಲಾದ



ನಾಗಪ್ಪ ಬೋರಾಮಣಿ


ಬಾಬು ಬೋರಾಮಣಿ


ಶಿವಾಚಲಪ್ಪ ಬೋರಾಮಣಿ


ಬಸವಣ್ಣಪ್ಪ ದುಮ್ಮಾ

## ಸೊಲ್ಲಾಪುರ ಜಿಲ್ಲೆಯ ರಂಗ ಕಲಾವಿದರು


ಬಸಪ್ಪಾ ಗೊಬ್ಬೂರ


ವೀರೇಶ


ನೀತಾ ದುಧನಿಕರ


ಲಕ್ಷ್ಮಣ ಬುರುಡ


ಕೇಶವ ಮಸೂತಿ


ಸೀಮಾ ದುಧನಿಕರ


ವಿಜಯಕುಮಾರ ಹಲಕಟ್ಟಿ


ಶಿವಾಚಲಪ್ಪ ಮುಂಡೂಡಗಿ



ಸಿದ್ದಣ್ಣ ಅಪ್ಪಾಜಿ


ಶೈಲಜಾ ದುಧನಿಕರ


ಈರಣ್ಣಾ ನಿಂಬಾಳ


ನಂದಾ

## ಸೊಲ್ಲಾಪುರ ಜಿಲ್ಲೆಯ ರಂಗ ಕಲಾವಿದರು



ಸೋಮನಾಥ ಬಿರಾಜದಾರ



ಶಶಿಕಾಂತ ದುಮ್ಮಾ



ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಮುಖ್ಯಮಂತ್ರಿ ಚಂದ್ರು ಅವರಿಗೆ ಮೈಂದರ್ಗಿಯ ಶ್ರೀ 1008 ಜಗದ್ಗುರು ರೇಣುಕಾಚಾರ್ಯ ನಾಟ್ಯ ಸಂಘದಿಂದ ಮನವಿ ಸಲ್ಲಿಸಿದ ಸಂದರ್ಭ.




ಅಕ್ಕಲಕೋಟ ತಾಲೂಕಿನ ಮೈಂದರ್ಗಿಯ ಶ್ರೀ 1008 ಜಗದ್ಗುರು ರೇಣುಕಾಚಾರ್ಯ ನಾಟ್ಯ ಸಂಘದ ಮಾಲೀಕರಾದ ಶ್ರೀ ಮಲ್ಲಿಕಾರ್ಜುನ ಮಡ್ಡೆ ಅವರು ಹಲವಾರು ರಂಗಕಲಾವಿದರೊಂದಿಗೆ.



ಅಕ್ಕಲಕೋಟ ತಾಲೂಕಿನ ಮೈಂದರ್ಗಿಯ ಶ್ರೀ 1008 ಜಗದ್ಗುರು ರೇಣುಕಾಚಾರ್ಯ ನಾಟ್ಯ ಸಂಘದ ಮಾಲೀಕರಾದ ಶ್ರೀ ಮಲ್ಲಿಕಾರ್ಜುನ ಮಡ್ಡೆ ಅವರಿಗೆ 2011 ರಲ್ಲಿ ಬೆಂಗಳೂರಿನಲ್ಲಿ ಕರ್ನಾಟಕ ನಾಟಕ ಅಕಾಡೆಮಿಯ ಸುವರ್ಣ ರಂಗಪ್ರಶಸ್ತಿ ಪ್ರದಾನವಾದ ಸಂದರ್ಭ.



ಮೈಂದರ್ಗಿಯ ಶ್ರೀ 1008 ಜಗದ್ಗುರು ರೇಣುಕಾಚಾರ್ಯ ನಾಟ್ಯ ಸಂಘದ ಮಾಲೀಕರಾದ
ಶ್ರೀ ಮಲ್ಲಿಕಾರ್ಜುನ ಮಡ್ಡೆ ಅವರಿಗೆ ಗುಲಬರ್ಗಾ ಕನ್ನಡ ಸಾಹಿತ್ಯ ಪರಿಷತ್ತಿನಿಂದ
ಸನ್ಮಾನಿಸಲಾದ ಸಂದರ್ಭ.



ಶ್ರೀ 1008 ಜಗದ್ಗುರು ರೇಣುಕಾಚಾರ್ಯ ನಾಟ್ಯ ಸಂಘದ ಮಾಲೀಕರಿಗೆ
ಹಲವಾರು ರಂಗಭೂಮಿ ಕಲಾವಿದರಿಂದ ಸನ್ಮಾನ.



ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವೆ ಉಮಾಶ್ರೀ ಅವರಿಗೆ ಮೈಂದರ್ಗಿಯ
ಶ್ರೀ 1008 ಜಗದ್ಗುರು ರೇಣುಕಾಚಾರ್ಯ ನಾಟ್ಯ ಸಂಘದಿಂದ ಮನವಿ ಸಲ್ಲಿಸಿದ ಸಂದರ್ಭ



ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಶ್ರೀ ಸನ್ಮಾನ್ಯ ಶ್ರೀ ಗೋವಿಂದ ಕಾರಜೋಳ
ಅವರಿಗೆ ಮೈಂದರ್ಗಿಯ ಶ್ರೀ 1008 ಜಗದ್ಗುರು ರೇಣುಕಾಚಾರ್ಯ ನಾಟ್ಯ ಸಂಘವು
ಮನವಿ ಸಲ್ಲಿಸಿದ ಸಂದರ್ಭ



ಹಿರಿಯ ರಂಗಕಲಾವಿದೆ ಶ್ರೀಮತಿ ಸುಮತಿಶ್ರೀ ಅವರಿಗೆ ಮೈಂದರ್ಗಿಯ ಶ್ರೀ 1008 ಜಗದ್ಗುರು ರೇಣುಕಾಚಾರ್ಯ ನಾಟ್ಯ ಸಂಘದಿಂದ ಗೌರವಿಸಲಾದ ಸಂದರ್ಭ.




ಅಕ್ಕಲಕೋಟ ತಾಲೂಕಿನ ಮೈಂದರ್ಗಿಯ ಶ್ರೀ 1008 ಜಗದ್ಗುರು ರೇಣುಕಾಚಾರ್ಯ ನಾಟ್ಯ ಸಂಘದ ಮಾಲೀಕರಾದ ಶ್ರೀ ಮಲ್ಲಿಕಾರ್ಜುನ ಮಡ್ಡೆ ಅವರು ಬೆಂಗಳೂರಿನಲ್ಲಿ ಕರ್ನಾಟಕ ನಾಟಕ ಅಕಾಡೆಮಿಯ ಸದಸ್ಯರೊಂದಿಗೆ.





ಮೈಂದರ್ಗಿಯ ಶ್ರೀ 1008 ಜಗದ್ಗುರು ಶ್ರೀ ರೇಣುಕಾಚಾರ್ಯ ನಾಟ್ಯ ಸಂಘದ ಚಿಡಚಣ
ಕ್ಯಾಂಪಿನಲ್ಲಿ 'ನಾನು ಇರುವುದೇ ಹೀಗೆ' ನಾಟಕ ಅಭಿನಯಿಸಿದ ಸಂದರ್ಭದ ಎರಡು ಚಿತ್ರಗಳು



ಮೈಂದರ್ಗಿಯ ಶ್ರೀ 1008 ಜಗದ್ಗುರು ರೇಣುಕಾಚಾರ್ಯ ನಾಟ್ಯ ಸಂಘಕ್ಕೆ ಆಗಮಿಸಿದ್ದ ಚಿತ್ರನಟ ಸುಧೀರ್. ಮಾಲೀಕರಾದ ಮಲ್ಲಿಕಾರ್ಜುನ ಮಡ್ಡೆಯವರೊಂದಿಗೆ.



ಮೈಂದರ್ಗಿಯ ಶ್ರೀ 1008 ಜಗದ್ಗುರು ರೇಣುಕಾಚಾರ್ಯ ನಾಟ್ಯ ಸಂಘಕ್ಕೆ ಆಗಮಿಸಿದ್ದ ಚಿತ್ರನಟ ಟೆನ್ನಿಸ್ ಕೃಷ್ಣ ಹಾಗೂ ಮಾಲೀಕರಾದ ಮಲ್ಲಿಕಾರ್ಜುನ ಮಡ್ಡೆಯವರೊಂದಿಗೆ.




ಅಕ್ಕಲಕೋಟ ತಾಲೂಕಿನ ಮೈಂದರ್ಗಿಯ ಶ್ರೀ 1008 ಜಗದ್ಗುರು ರೇಣುಕಾಚಾರ್ಯ ನಾಟ್ಯ ಸಂಘದ ಮಾಲೀಕರಾದ ಶ್ರೀ ಮಲ್ಲಿಕಾರ್ಜುನ ಮಡ್ಡೆ ಅವರಿಗೆ ಸಚಿವೆ ಉಮಾಶ್ರೀ ಅವರು ಬೆಂಗಳೂರು ಕರ್ನಾಟಕ ನಾಟಕ ಅಕಾಡೆಮಿಯ 2016ನೇ ವರ್ಷದ ಗೌರವ ಪ್ರಶಸ್ತಿ ಪ್ರದಾನ ಮಾಡಿದ ಸಂದರ್ಭ.




ಸೊಲ್ಲಾಪುರ ಸಂಗಮೇಶ್ವರ ಮಹಾವಿದ್ಯಾಲಯದ ವಿದ್ಯಾರ್ಥಿಗಳು 'ದೇವರಿಗೆ ನೆನೆಪಿಲ್ಲ' ನಾಟಕವನ್ನು 1976ರಲ್ಲಿ ಅಭಿನಯಿಸಿದ ಸಂದರ್ಭ.



ಅಕ್ಕಲಕೋಟ ತಾಲೂಕಿನ ಮೈಂದರ್ಗಿಯಲ್ಲಿ ಹಿರಿಯ ರಂಗಕಲಾವಿದ ಶ್ರೀ ಬಸವರಾಜ ಗುಡಗೇರಿ ಅವರಿಗೆ ರಂಗಭೀಷ್ಮ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಜೊತೆಯಲ್ಲಿ ಈ ಕೃತಿಯ ಲೇಖಕ ಬಸವರಾಜ ಮಸೂತಿ.




ಧುದನಿಯ ಶ್ರೀ ಬಾಲಾಜಿ ನಾಟ್ಯ ಸಂಘದ
‘ಕೆರಳಿದ ಹುಲಿ’ ನಾಟಕದಲ್ಲಿ ಮಹಾಂತೇಶ್ ಅಂಕಲಗಿ ಮತ್ತು ಸಹನಟಿ



ಮಂದ್ರೂಪ ರಂಗಕಲಾವಿದರ 'ಕುಂಭಾರಿಯ ಡೋಡಪ್ಪ' ನಾಟಕದ ಒಂದು ದೃಶ್ಯ



ವಲಸಂಘ ರಂಗ ಕಲಾವಿದರು ನಾಟಕದ ಮಾಸ್ತರ್‌ರೊಂದಿಗೆ.





'ಕುಂಭಾರಿಯ ಡೋಢಪ್ಪ' ನಾಟಕದ ಎರಡು ದೃಶ್ಯ



ಸೊಲ್ಲಾಪುರ ಸಂಗಮೇಶ್ವರ ಮಹಾವಿದ್ಯಾಲಯದ ವಿದ್ಯಾರ್ಥಿಗಳು 1975ರಲ್ಲಿ
ಅಭಿನಯಿಸಿದ ನಾಟಕವೊಂದರ ದೃಶ್ಯ



ಚಿತ್ರ ನಟ ಸುಧೀರ್ ಸೊಲ್ಲಾಪುರದ ರಂಗಕಲಾವಿದರೊಂದಿಗೆ





ಸೊಲ್ಲಾಪುರದ ಹುತಾತ್ಮ ರಂಗಮಂದಿರದಲ್ಲಿ ಸೊಲ್ಲಾಪುರದ ಶ್ರೀಸಿದ್ಧರಾಮೇಶ್ವರ ನಾಟ್ಯ ಸಂಘ ಅಭಿನಯಿಸಿದ 'ಅಣ್ಣ ಕೊಟ್ಟ ಮಾಂಗಲ್ಯ' ನಾಟಕದ ಎರಡು ದೃಶ್ಯಗಳು



ಅಕ್ಕಲಕೋಟ ತಾಲೂಕಿನ ತೊಳಣೂರದ ನಾಟಕಕಾರ ಶ್ರೀ ಬಿ.ಬಿ.ಜೇವೂರ ಅವರು
ಬೆಂಗಳೂರು ಕರ್ನಾಟಕ ನಾಟಕ ಅಕಾಡೆಮಿಯ ಸದಸ್ಯರೊಂದಿಗೆ.



ಅಕ್ಕಲಕೋಟ ತಾಲೂಕಿನ ತೊಳಣೂರದ ನಾಟಕಕಾರ ಶ್ರೀ ಬಿ.ಬಿ.ಜೇವೂರ ಅವರಿಗೆ 1994ರಲ್ಲಿ
ಬೆಂಗಳೂರು ಕರ್ನಾಟಕ ನಾಟಕ ಅಕಾಡೆಮಿಯ ಗೌರವ ಪ್ರಶಸ್ತಿ ಪ್ರದಾನ ಮಾಡಲಾದ ಸಂದರ್ಭ.




ಅರವತ್ತು ವರ್ಷ ತುಂಬಿದ ಮೈಂದರ್ಗಿಯ ಶ್ರೀ 1008 ಜಗದ್ಗುರು ರೇಣುಕಾಚಾರ್ಯ ನಾಟ್ಯ ಸಂಘ




ಮೈಂದರ್ಗಿಯ ಶ್ರೀ ಗುರು ರೇವಣಸಿದ್ಧ ನಾಟ್ಯ ಸಂಘದ 'ಎಚ್ಚರ ತಂಗಿ ಎಚ್ಚರ' ನಾಟಕದಲ್ಲಿ ರೇವಣಸಿದ್ಧ ಹುಲಮನಿ ಮತ್ತು ಭಾರತಿ





ಮೈಂದರ್ಗಿಯ ಶ್ರೀ ಸಿದ್ಧರಾಮೇಶ್ವರ ನಾಟ್ಯ ಸಂಘ ಅಭಿನಯಿಸಿದ
'ಎಚ್ಚರ ತಂಗಿ ಎಚ್ಚರ' ನಾಟಕದ ಎರಡು ದೃಶ್ಯಗಳು



ಮೈಂದರ್ಗಿಯ ಶ್ರೀ ಸಿದ್ಧರಾಮೇಶ್ವರ ನಾಟ್ಯ ಸಂಘದ ಕಲಾವಿದರಾದ ಸೀನಪ್ಪ ಬರ್ಮ
ಹಾಗೂ ಓಂಕಾರ್ ಬುರುಡ



ಮೈಂದರ್ಗಿಯ ಶ್ರೀ 1008 ಜಗದ್ಗುರು ರೇಣುಕಾಚಾರ್ಯ ನಾಟ್ಯ ಸಂಘದ ವಸ್ತ್ರಾಲಂಕಾರರಾದ
ಶಿವಾಚಲಪ್ಪ ಹಸರಮನಿ ಅವರ ಜೊತೆಯಲ್ಲಿ ಚಿತ್ರನಟ ಸುಧೀರ್



ಹಿರಿಯ ವೃತ್ತಿ ರಂಗಭೂಮಿ ಕಲಾವಿದರಾದ ನಾಡೋಜ ಏಣಗಿ ಬಾಳಪ್ಪ
ಅವರ ಜೊತೆಗೆ ಹಲವಾರು ರಂಗಭೂಮಿ ಕಂಪನಿಯ ಮಾಲೀಕರುಗಳು



ಪಂಡಿತ ಪುಟ್ಟರಾಜ ಗವಾಯಿಗಳವರ ಜೊತೆಯಲ್ಲಿ ವೃತ್ತಿ ರಂಗಭೂಮಿ
ಕಂಪನಿಯ ಹಲವಾರು ಮಾಲೀಕರುಗಳು